## ಅಧ್ಯಾಯ 2

# ತೋಟದಲ್ಲಿ ಪುರುಷನು ಮತ್ತು ಸ್ತ್ರೀಯ ಸೃಷ್ಟಿ

### ದಿನ 7: ದೇವರು ಸೃಷ್ಟಿಕಾರ್ಯವನ್ನು ಮುಗಿಸಿ ವಿಶ್ರಮಿಸಿದನು (2:1-3)

**1ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು. 2ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. 3ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು.**

2:1–3 ವಚನಗಳನ್ನು 1:31ರಿಂದ ಬೇರ್ಪಡಿಸುವದಕ್ಕೆ ಯಾವ ನ್ಯಾಯಯುತವಾದ ಕಾರಣವೂ ಕಾಣಿಸುವದಿಲ್ಲ, ಯಾಕೆಂದರೆ ಸೃಷ್ಟಿಯ ಬಣ್ಣನೆಯು 2:3ರ ವರೆಗೂ ಮುಂದುವರೆಯುತ್ತದೆ. ಆರಂಭಿಕ ಸೃಷ್ಟಿಯಲ್ಲಿ ದೇವರು ಮಾಡಿದ ಎಲ್ಲದರ ಸಮಾಪ್ತಿಯಾಗಿ ಈ ವಿಭಾಗವನ್ನು 1ನೇ ಅಧ್ಯಾಯದಲ್ಲಿ ಆರನೆಯ ದಿನದ ನಂತರ ಸೇರ್ಪಡೆಗೊಳಿಸಿರಬೇಕಿತ್ತು.

**ವಚನ 1.** NASBಯು ಹೇಳುವದೇನೆಂದರೆ ಹೀಗೆ ಆಕಾಶಗಳೂ ಭೂಮಿಯೂ ಅವುಗಳ ಸಮಸ್ತ ಸಮೂಹವೂ ಸಂಪೂರ್ಣವಾದವು, ಇದು ಇಬ್ರಿಯ ವಾಕ್ಯದ ಅಕ್ಷರಶಃ ಅನುವಾದವಾಗಿರುತ್ತದೆ. ಹೇಗೂ, "ಅವುಗಳ ಸಮಸ್ತ ಸಮೂಹವೂ" ಎಂಬುದರ ಬದಲಾಗಿ, NIVಯಲ್ಲಿ "ಅವುಗಳ ಅಪಾರ ಒರಣಗಳನ್ನು" ಎಂದಿರುತ್ತದೆ. ಈ ಅನುವಾದವು, ಕೆಲವರು ಹೇಳಿರುವ ಹಾಗೆ "ಸಮೂಹಗಳು" ಎಂಬುದರಲ್ಲಿ "ಆಕಾಶ"ದೊಳಗಿನ ಸೂರ್ಯ, ಚಂದ್ರ, ಮತ್ತು ನಕ್ಷತ್ರಗಳು ಮಾತ್ರವೇ ಸೇರಿರುವದಿಲ್ಲ, ಆದರೆ ಅಧ್ಯಾಯ 1ರಲ್ಲಿ ಚರ್ಚಿಸಿರುವ ಪ್ರಕಾರವಾಗಿ ಅವುಗಳ ತನ್ನ ಜಾತಿಗನುಸಾರುವಾಗಿ ಕ್ರಮಾನುಸಾರ ಒರಣಗೊಳಿಸಲ್ಪಟ್ಟಿರುವಂತೆ, ಮನುಷ್ಯ ಮತ್ತು "ಭೂಮಿ"ಯ ಮೇಲಿನ ಸಕಲ ಜೀವಿಗಳನ್ನೂ ಒಳಗೊಂಡಿದೆ ಎಂಬುದನ್ನು ಸೂಚಿಸುವಂತೆ ಕಾಣಿಸುತ್ತದೆ.

ಈ ವಚನದಲ್ಲಿ ಅರ್ಥಮಾಡಿಕೊಳ್ಳತಕ್ಕದ್ದನ್ನೆಲ್ಲಾ ಖಚಿತಪಡಿಸುವದು ಕಷ್ಟಕರವಾಗಿರುತ್ತದೆ, ಯಾಕೆಂದರೆ ಹಳೆಯ ಒಡಂಬಡಿಕೆಯಲ್ಲಿ "ಸಮೂಹಗಳು" (צְבָאָם, *ಟ್ಸಬಾಮ*) ಎಂಬುದು ವಿವಿಧ ರೀತಿಗಳಲ್ಲಿ ಬಳಸಲ್ಪಟ್ಟಿರುತ್ತದೆ. ಮುಖ್ಯವಾಗಿ, ಅದು ವರ್ಗಗಳ ಅಥವಾ ಪಡೆಗಳ ಭಾಗವನ್ನೊಳಗೊಂಡ ಒಂದು ಸಂಘಟಿತ, ಶಿಸ್ತುಬದ್ಧ ಸಮೂಹವನ್ನು ಸೂಚಿಸುತ್ತದೆ. ಅದು ತನ್ನ ವೈರಿಯ ವಿರುದ್ಧವಾಗಿ ಒರಣಗೊಳಿಸಲ್ಪಟ್ಟಿರುವ ಭೂಲೋಕದ ಸೈನ್ಯವನ್ನು ಸೂಚಿಸಬಹುದು (21:22; ನ್ಯಾಯಸ್ಥಾಪಕ 4:2) ಅಥವಾ ದೇವರ ದೂತರ ಸೈನ್ಯವನ್ನೊಳಗೊಂಡ "ಪರಲೋಕ ಸೈನ್ಯಗಳು" ಎಂಬುದನ್ನು ಸೂಚಿಸಬಹುದು (1 ಅರಸು

22:19). ದೇವರು ಇಸ್ರಾಯೇಲ್ಯರಿಗಾಗಿ ಯುದ್ಧ ಮಾಡಿದ ವೇಳೆ, ಆತನು ಪರಲೋಕದ ಸೈನ್ಯಗಳನ್ನು ಬಳಸಿದನು, ಮತ್ತು ಯೆಹೋಶುವನಿಗೆ ಕತ್ತಿಯನ್ನು ಹಿಡಿದವನಾಗಿ ಕಾಣಿಸಿಕೊಂಡ ದೇವದೂತನು ತನ್ನನ್ನು "ಯೆಹೋವನ ಸೇನಾಪತಿಯು" (צְבָא-יְהוָה, *ಟ್ಸೆಬಾ ಯಾಹವೇ*; ಯೆಹೋ 5:14).

"ಸಮೂಹಗಳು" ಎಂಬ ಪದದ ಇನ್ನೊಂದು ಬಳಕೆಯು ಮಧ್ಯಪ್ರಾಚ್ಯದಲ್ಲಿ ದೇವರುಗಳಾಗಿ ಆರಾಧಿಸಲ್ಪಡುತ್ತಿದ್ದ ಆಕಾಶಕಾಯಗಳನ್ನು ಸೂಚಿಸುವದಾಗಿದೆ (ಧರ್ಮೋಪದೇಶಕಾಂಡ 4:19; 17:3; 2 ಅರಸು 17:16; 21:3). 2:1ರಲ್ಲಿನ ಹೇಳಿಕೆಯು ಮನುಷ್ಯನನ್ನು ಒಳಗೊಂಡಿರುತ್ತದೋ ಅಥವಾ ಇಲ್ಲವೋ, ಆಕಾಶಕಾಯಗಳಿಗೆ ಭಕ್ತಿ ಮತ್ತು ಭಯ ತೋರಿಸಬೇಕೆಂದು ಲೇಖಕನು ದೃಢೀಕರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಅವುಗಳು ಯೆಹೋವನ ಸೃಷ್ಟಿಯ ಭಾಗವಾಗಿದ್ದವಷ್ಟೆ ಮತ್ತು ಆತನ ಶಾಸನದ ಪ್ರಕಾರ ಆಕಾಶದಲ್ಲಿ ತಮ್ಮ ವಿಶೇಷ ಕೆಲಸಗಳನ್ನು ನಿರ್ವಹಿಸಬೇಕಾಗಿತ್ತಷ್ಟೆ.

**ವಚನ 2.** ವಾಕ್ಯವು ಹೇಳುವದೇನೆಂದರೆ **ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು**. ದೇವರ ಸೃಷ್ಟಿಯ ಕೆಲಸವು ಏಳನೆಯ ದಿನದಲ್ಲಿ ಮುಂದುವರೆಯಿತು, ಮತ್ತು ಬಳಿಕ, ಆ ದಿನದ ಒಂದು ಸಮಯದಲ್ಲಿ, ಆತನು ಅದನ್ನು ಮುಕ್ತಾಯಗೊಳಿಸಿ ವಿಶ್ರಮಿಸಿದನು ಎಂಬರ್ಥ ಬರುವಂತೆ ವ್ಯಾಖ್ಯಾನಿಸಲ್ಪಟ್ಟಿರುತ್ತದೆ. ಅಂಥಹ ಅಭಿಪ್ರಾಯವು ಸನ್ನಿವೇಶಕ್ಕೆ ಸರಿಹೊಂದುವದಿಲ್ಲ ಯಾಕೆಂದರೆ, 1ನೇ ಅಧ್ಯಾಯದ ಅಂತ್ಯದ ವೇಳೆಗೆ, ದೇವರು ವಿಶ್ವವನ್ನು ಮತ್ತು ಅದರಲ್ಲಿನ ಸಮಸ್ತವನ್ನೂ ಉಂಟು ಮಾಡಿದ್ದನು. ದೇವರು ತನ್ನ ಸೃಷ್ಟಿಯ ಮೇಲೊಮ್ಮೆ ಕಣ್ಣು ಹಾಯಿಸಿದಾಗ, ಆತನು ಅದನ್ನು "ಬಹು ಒಳ್ಳೇದು" ಎಂದು ಘೋಷಿಸಿದನು. ಆರನೆಯ ದಿನವು ಮುಕ್ತಾಯಗೊಂಡ ಹಾಗೆ, ಒಬ್ಬನು ಎದುರುನೋಡುವದು "ಹೆಚ್ಚುವರಿ ಸೃಷ್ಟಿಯನ್ನಲ್ಲ ಆದರೆ ಸಂತಾನೋತ್ಪತ್ತಿ ಮತ್ತು ಸ್ವ-ಶಾಶ್ವತಗೊಳಿಸಿಕೊಳ್ಳುವಿಕೆಗಳನ್ನು ಎದುರುನೋಡುವನು"[1] ಇದು ವಿಶ್ವ ಮತ್ತು ಅದರ ಸಕಲ ಜೀವಿಗಳೊಳಗೆ ಸೃಷ್ಟಿಕರ್ತನು ನಿರ್ಮಿಸಿದ್ದ ವಿನ್ಯಾಸಕ್ಕನುಗುಣವಾಗಿರುವದಾಗಿತ್ತು.

2:2ನೇ ವಚನವು "ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು" ಎಂದು ಹೇಳುವ ಕಡೆಯಲ್ಲಿ, NIVಯು כָּלָה *(ಕಲಾಹ)* ಎಂಬ ಕ್ರಿಯಾಪದವನ್ನು ಸಂಪೂರ್ಣ ಭೂತಕಾಲ ರೂಪದಲ್ಲಿ ಅನುವಾದಿಸುತ್ತದೆ: "ದೇವರು ತಾನು ಮಾಡುತ್ತಲಿದ್ದ ಕೆಲಸವನ್ನು ಮುಗಿಸಿದನು." ಲೇಖಕನು 2:1ರಲ್ಲಿ ಈಗಾಗಲೇ ದೇವರು ಆಕಾಶ ಮತ್ತು ಭೂಮಿಯ ಸೃಷ್ಟಿಯನ್ನು ಮುಕ್ತಾಯಗೊಳಿಸಿದನೆಂದು (ಮುಗಿಸಿದನು) ಹೇಳಿದ್ದನು. ನಿಶ್ಚಯವಾಗಿಯೂ, ಯೆಹೋವನು ಏಳನೆಯ ದಿನದಲ್ಲಿನ ಸಮಯವೊಂದಕ್ಕೆ ಬರುವ ತನಕ ತನ್ನ ಕೆಲಸವನ್ನು ಮುಗಿಸಲಿಲ್ಲ ಎಂದು ಲೇಖಕನು ತನ್ನ ಮುಂಚಿನ ಹೇಳಿಕೆಗೆ ತದ್ವಿರುದ್ಧವಾದ ಹೇಳಿಕೆಯನ್ನು ಕೊಡಲಿಲ್ಲ, RSV ಮತ್ತು NRSVಗಳಲ್ಲಿ ಹಾಗೆಯೇ ಇರುತ್ತದೆ: "ಮತ್ತು ಏಳನೆಯ ದಿನದಂದು ದೇವರು [ತನ್ನ] ಕೆಲಸವನ್ನು ಮುಗಿಸಿದನು." ಪಂಚಪುಸ್ತಕಗಳೊಳಗೆ ಬೇರೆ ಸ್ಥಳವೊಂದರಲ್ಲಿ ಈ ಕ್ರಿಯಾಪದವು ಬಳಸಲ್ಪಟ್ಟಿರುವ ಕಡೆಯಲ್ಲಿ (17:22; 49:33; ವಿಮೋಚನಕಾಂಡ 40:33), ಕ್ರಿಯೆಯು ನಿಶ್ಚಯವಾಗಿಯೂ ಪೂರ್ತಿಗೊಂಡಿರುತ್ತದೆ, ಮತ್ತು ಕೆಲವು ಆಂಗ್ಲ ಆವೃತ್ತಿಗಳು ಸಂಪೂರ್ಣ ಭೂತಕಾಲ ರೂಪವನ್ನು ಬಳಸುತ್ತವೆ.[2]

ದೇವರು **ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು**. "ವಿಶ್ರಮಿಸಿಕೊಂಡನು" ಎಂಬ ಪದವು, ಆರು ದಿನಗಳ ಕಾಲ "ಕಾರ್ಯ" ಮಾಡಿದ ಬಳಿಕ ಮನುಷ್ಯನಿಗೆ ಆಯಾಸವಾಗುವ ರೀತಿಯಲ್ಲಿ ದೇವರಿಗೆ ಆಯಾಸವಾಗಿತ್ತು

ಎಂಬ ಸೂಚ್ಯಾರ್ಥವನ್ನು ನೀಡುವದಿಲ್ಲ; ಬದಲಾಗಿ, ದೇವರು ಏಳನೆಯ ದಿನದಂದು ತನ್ನೆಲ್ಲಾ ಸೃಷ್ಟಿ ಕೆಲಸವನ್ನು "ನಿಲ್ಲಿಸಿದನು" ಅಥವಾ "ಮುಂದುವರೆಸಲಿಲ್ಲ" ಎಂದು ಸೂಚಿಸುತ್ತದೆ. 2:2, 3ರಲ್ಲಿ "ವಿಶ್ರಮಿಸಿಕೊಂಡನು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು שָׁבַת *(ಶಬಾಥ್)*, ಮತ್ತು ಅದರ ನಾಮಪದ ರೂಪವು שַׁבָּת *(ಶಬ್ಬಾಥ್)*, ಆಂಗ್ಲ ಬೈಬಲಗಳಲ್ಲಿ ಅದು "ಸಬ್ಬತ್" ಎಂದು ಅನುವಾದಿಸಲ್ಪಟ್ಟಿರುತ್ತದೆ. ಏಳನೆಯ ದಿನದಲ್ಲಿ ಕೆಲಸಗಳನ್ನು ನಿಲ್ಲಿಸಿ ವಿಶ್ರಾಂತಿ ತೆಗೆದುಕೊಳ್ಳುವ ಮೂಲಕ ಅವರು ದೇವರನ್ನು ಅನುಕರಿಸುವವರಾಗಿರಬೇಕೆಂದು ಇಬ್ರಿಯ ಲೇಖಕನು ಇಸ್ರಾಯೇಲ್ಯರಿಗೆ ಜ್ಞಾಪಕಗೊಳಿಸಿದನು. ವಾಸ್ತವಿಕದಲ್ಲಿ, ದಶಾಜ್ಞೆಯಲ್ಲಿ ಸಬ್ಬತ್ ದಿನವನ್ನು ಆಚರಿಸಬೇಕೆಂಬುದಕ್ಕೆ ದೇವರು ವಿಶ್ರಮಿಸಿದ್ದನ್ನು ಕಾರಣವಾಗಿ ಕೊಡಲಾಗಿರುತ್ತದೆ: "ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ಆದದರಿಂದ ಯೆಹೋವನು ಸಬ್ಬತ್ ದಿನವನ್ನು ತನ್ನ ದಿನವಾಗಿರಲಿ ಎಂದು ಆಶೀರ್ವದಿಸಿದನು" (ವಿಮೋಚನಕಾಂಡ 20:11).

ಹಲವಾರು ಪಂಡಿತರು ಇಸ್ರಾಯೇಲ್ಯರ "ಏಳನೆಯ ದಿನದ" ಆಚರಣೆಯನ್ನು ಪ್ರಾಚೀನ ಮೆಸಪೋತಾಮ್ಯದಲ್ಲಿನ ಒಂದು ಹೋಲುವ ದಿನದಿಂದ ತೆಗೆದುಕೊಳ್ಳಲು ಪ್ರಯತ್ನಿಸಿರುತ್ತಾರೆ. ಬಾಬೆಲಿನವರು ತಿಂಗಳಿನ ಐದನೆಯ ದಿನವನ್ನು - ಹುಣ್ಣಿಮೆ ದಿನವನ್ನು - *ಸಬ/ಪಟ್ಟು* ಎಂದು ಕರೆಯುತ್ತಿದ್ದರು, ಮತ್ತು ಅವರು ಅದನ್ನು "ಒಂದು ಶುಭಸೂಚಕ ದಿನ" ಎಂದು ಪರಿಗಣಿಸುತ್ತಿದ್ದರು. ಹೇಗೂ, ಅಕ್ಕಾಡಿಯರ *ಸಬ/ಪಟ್ಟು* ಮತ್ತು ಇಬ್ರಿಯ *ಸಬ್ಬತ್* ನಡುವೆ ಶಬ್ದಾರ್ಥ ಸಂಬಂಧವನ್ನು ಕಂಡುಕೊಳ್ಳುವದು ಸಾಧ್ಯವಿರುತ್ತದಾದರೂ, ಮೊದಲನೆಯದು ಏಳನೆಯ ದಿನದಲ್ಲಾಗಲಿ ಅಥವಾ ಹದಿನಾಲ್ಕನೆಯ ದಿನದಲ್ಲಾಗಲಿ ಬರುತ್ತಿರಲಿಲ್ಲ, ಆದರೆ ತಿಂಗಳಿನ ಮಧ್ಯದ ದಿನದಲ್ಲಿ ಬರುತ್ತಿತ್ತು. ವಾಸ್ತವಿಕದಲ್ಲಿ, ಬಾಬೆಲಿನವರು ತಿಂಗಳಿನ ಏಳನೆಯ, ಹದಿನಾಲ್ಕನೆಯ, ಹತ್ತೊಂಭತ್ತನೆಯ, ಇಪ್ಪತ್ತೊಂದನೆಯ, ಮತ್ತು ಇಪ್ಪತ್ತೆಂಟನೆಯ ದಿನಗಳನ್ನು "ಕೆಟ್ಟ ದಿನಗಳು" ಎಂದು ಪರಿಗಣಿಸಿದ್ದರು, ಇಸ್ರಾಯೇಲಿನಲ್ಲಿ ಪ್ರತಿ ಸಬ್ಬತ್ ದಿನವು ಇರುವಂತೆ ಅವುಗಳನ್ನು ಅವರು ಪವಿತ್ರ ದಿನಗಳೆಂದು ಪರಿಗಣಿಸಿರಲಿಲ್ಲ.[3]

ಅಷ್ಟುಮಾತ್ರವಲ್ಲದೆ, ಚಂದ್ರನ್ನು ಆಧರಿಸಿದ 29½ ದಿನಗಳನ್ನೊಳಗೊಂಡ ಒಂದು ತಿಂಗಳಿನೊಳಗೆ ಏಳು-ದಿನಗಳ ವರವೊಂದನ್ನು ಸರಿಹೊಂದಿಸುವುದು ಅಸಾಧ್ಯವಾಗಿರುತ್ತದೆ, ಯಾಕೆಂದರೆ ಚಂದ್ರನ ಪಥಗಳ ಮೇಲೆ ಆಧಾರಗೊಂಡಿರುವ ಒಂದು ತಿಂಗಳನ್ನು ಏಳು ಪೂರ್ಣ ದಿನಗಳ ಕಾಲಮಾನಗಳಾಗಿ ವಿಂಗಡಿಸುವದಕ್ಕೆ ಸಾಧ್ಯವಿರುವದಿಲ್ಲ. ಮೆಸಪೋತಾಮ್ಯದ ಜೊತೆಯಲ್ಲಿ, ಸಬ್ಬತ್ ದಿನವು ಉಗಮವಾಗಿರಬಹುದಾದ ಬೇರೆ ಕ್ಷೇತ್ರಗಳನ್ನು ಸೂಚಿಸಲಾಗಿರುತ್ತದೆ. ಹಾಗಿದ್ದರೂ, ಈ ವಿಶಿಷ್ಟ ದಿನವು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ದೇವರು ವಿಶ್ರಮಿಸಿಕೊಂಡದ್ದರಿಂದಲೇ ಉಗಮವಾಗಿದೆ ಎಂಬುದನ್ನು ಬಿಟ್ಟು ಬೇರೆ ಯಾವದಕ್ಕೇ ಆಗಲಿ ಈ ವಿಚಾರಗಳಲ್ಲಿ ಯಾವದೊಂದೂ ಸಾಕಷ್ಟು ಪುರಾವೆಯನ್ನು ಒದಗಿಸುವದಿಲ್ಲ.

**ವಚನ 3.** ಸಬ್ಬತ್ ದಿನದ ವಿಶೇಷ ಸ್ವಭಾವವು **ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು** ಎಂಬ ಹೇಳಿಕೆಯಿಂದ ಒತ್ತಿ ಹೇಳಲ್ಪಟ್ಟಿದೆ. ದೇವರು ಸೃಷ್ಟಿಯ ಆರು ದಿನಗಳಲ್ಲಿ ಯೆಹೋವನು ಮಾಡಿದ ಸಕಲವೂ "ಬಹು ಒಳ್ಳೇದು" ಎಂದು ಕರೆಯಲ್ಪಟ್ಟಿತು (1:31), ಆದರೆ ಸಬ್ಬತ್ ದಿನವನ್ನು ಮಾತ್ರವೇ "ಪರಿಶುದ್ಧ ದಿನ"ವಾಗಿಸಿದನು ("ಅದನ್ನು ಪವಿತ್ರವಾಗಿ ಮಾಡಿದನು"; NIV). ಇಲ್ಲಿ ಬಳಸಲಾಗಿರುವ קָדַשׁ *(ಕದಾಶ)* ಎಂಬ ಪದವು ಪವಿತ್ರ ಅಥವಾ

ಪರಿಶುದ್ಧ ವ್ಯಾಪ್ತಿಗೆ ಸೇರಿರುವಂಥ ಸಂಗತಿಯೊಂದನ್ನು ಸೂಚಿಸುತ್ತದೆ. ಅದು ಸಾಮಾನ್ಯ ಅಥವಾ ಅಶುದ್ಧವಾಗಿರುವಂತದ್ದರಿಂದ ಮೀಸಲಿಡಲ್ಪಟ್ಟದ್ದು ಮತ್ತು ಪ್ರತ್ಯೇಕಿಸಲ್ಪಟ್ಟದ್ದು.[4]

ಸಬ್ಬತ್ ದಿನವು ತನ್ನ ಪರಾಕ್ರಮವುಳ್ಳ ಸೃಷ್ಟಿಯ ಕೆಲಸಗಳನ್ನು ಮುಗಿಸಿ ದೇವರು ವಿಶ್ರಮಿಸಿಕೊಂಡದ್ದನ್ನು ಸ್ಮರಣೆಯಲ್ಲಿರುವಂತೆ ಮಾಡಿತ್ತು. ಇದು ಇಸ್ರಾಯೇಲ್ಯರಿಗೆ ಮಹತ್ವಪೂರ್ಣವಾಗಿರಲಿತ್ತು, ಐಗುಪ್ತದಲ್ಲಿ ತಮ್ಮ ದುಡಿಮೆಯನ್ನು ನಿಲ್ಲಿಸಿ ನಿಯತಕ್ರಮವಾದ ಯಾವದೇ ವಿಶ್ರಾಂತಿಯನ್ನು ಆನಂದಿಸದೆ ಇದ್ದ ಒಂದು ಗುಲಾಮ ಜನಾಂಗವಾಗಿದ್ದವರು. ಹೇಗೂ, ದೇವರು ಅವರನ್ನು ಅಂತಹ ದಾಸತ್ವದೊಳಗಿಂದ ಬಿಡುಗಡೆಗೊಳಿಸಿದ್ದನು. ಈಗ ಅವರು ವಿಶ್ರಮಿಸುವದಕ್ಕೆ ಶಕ್ತರಾಗಿದ್ದರು, ಚೈತನ್ಯಗೊಳ್ಳಲು, ಮತ್ತು ಒಂದು ಹೊಸ ಜನಾಂಗವಾಗಿ (ಸೃಷ್ಟಿಯಾಗಿ) ಯೆಹೋವನನ್ನು ಆರಾಧಿಸುವದಕ್ಕೆ ಶಕ್ತರಾಗಿದ್ದರು, ಅವರಿಗೆ ಆತನು ಪುತ್ರತ್ವವನ್ನು ಅನುಗ್ರಹಿಸಿದ್ದನು (ವಿಮೋಚನಕಾಂಡ 4:22, 23). ಮೋಶೆಯು ಸಬ್ಬತ್ ದಿನದ ಆಜ್ಞೆಗೆ ವಿಶ್ರಾಂತಿಯನ್ನು ತೆಗೆದುಕೊಂಡ ದೈವಿಕ ಕ್ರಿಯೆಯಿಂದ ಒತ್ತಾಸೆ ನೀಡಿದ್ದು ಮಾತ್ರವೇ ಅಲ್ಲ (ವಿಮೋಚನಕಾಂಡ 20:8-11), ಆದರೆ ವಿಮೋಚನಾ ಯಾತ್ರೆಯಲ್ಲಿ ಇಸ್ರಾಯೇಲ್ಯರು ದಾಸತ್ವದೊಳಗಿಂದ ಬಿಡಿಸಲ್ಪಟ್ಟಿದ್ದರೊಂದಿಗೆ ಸಹ ಅದನ್ನು ದೈವಶಾಸ್ತ್ರೀಕವಾಗಿ ಜೋಡನೆ ಮಾಡಿದ್ದನು. ಆತನು ಅವರಿಗೆ ನೀಡಿದ ಬುದ್ಧಿವಾದವು ಹೀಗಿತ್ತು:

> ಐಗುಪ್ತದೇಶದಲ್ಲಿ ನೀವೂ ದಾಸತ್ವದಲ್ಲಿದ್ದದ್ದನ್ನೂ ನಿಮ್ಮ ದೇವರಾದ ಯೆಹೋವನು ಭುಜಪರಾಕ್ರಮದಿಂದಲೂ ಶಿಕ್ಷಾಹಸ್ತದಿಂದಲೂ ನಿಮ್ಮನ್ನು ಬಿಡುಗಡೆಮಾಡಿದ್ದನ್ನೂ ಜ್ಞಾಪಕಮಾಡಿಕೊಳ್ಳಿರಿ. ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂಬದನ್ನು ನಿಮ್ಮ ದೇವರಾದ ಯೆಹೋವನು ಇದಕ್ಕಾಗಿಯೇ ಆಜ್ಞಾಪಿಸಿದ್ದಾನೆ (ಧರ್ಮೋಪದೇಶಕಾಂಡ 5:15).

## ಏದೆನ್ ತೋಟ ಮತ್ತು ಮನುಷ್ಯ (2:4-7)

**4ಇದೇ ಭೂಮ್ಯಾಕಾಶಗಳ ನಿರ್ಮಾಣ ಚರಿತ್ರೆ. 5ಯೆಹೋವದೇವರು ಭೂಮ್ಯಾಕಾಶಗಳನ್ನು ಉಂಟುಮಾಡಿದಾಗ ಯಾವ ಗಿಡವಾದರೂ ಭೂಮಿಯಲ್ಲಿ ಇರಲಿಲ್ಲ, ಯಾವ ಪಲ್ಯವೂ ಹುಟ್ಟಿರಲಿಲ್ಲ. ಯಾಕಂದರೆ ಯೆಹೋವದೇವರು ಭೂಮಿಯ ಮೇಲೆ ಮಳೆಯನ್ನು ಸುರಿಸಿರಲಿಲ್ಲ; ಭೂಮಿಯನ್ನು ವ್ಯವಸಾಯ ಮಾಡುವದಕ್ಕೆ ಮನುಷ್ಯನೂ ಇರಲಿಲ್ಲ. 6ಆದರೂ ಭೂಮಿಯಿಂದ ಮಂಜು ಹಬ್ಬಿ ನೆಲವನ್ನೆಲ್ಲಾ ತೋಯಿಸುತ್ತಿತ್ತು. 7ಹೀಗಿರಲು ಯೆಹೋವದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು.**

**ವಚನಗಳು 4, 5.** ಸೃಷ್ಟಿಯ ಕಥೆಯ ಅಂತ್ಯದ ವೇಳೆ, ನಾವು ಆದಿಕಾಂಡದಲ್ಲಿರುವ ಹತ್ತು תוֹלְדוֹת *(ಟೋಲೆಡೊಥ)* ಹೇಳಿಕೆಗಳೊಳಗೆ ಮೊದಲನೆಯದ್ದರ ಬಳಿಗೆ ಬರುತ್ತೇವೆ: **ಇದೇ ಭೂಮ್ಯಾಕಾಶಗಳ ನಿರ್ಮಾಣ ಚರಿತ್ರೆ.** *ಟೋಲೆಡೊಥ* ಎಂಬುದನ್ನು "ಚರಿತ್ರೆ," "ಪೀಳಿಗೆಗಳು," ಅಥವಾ ಈ ಮಾತಿನೊಂದಿಗೆ ಹೆಸರಿಸಲ್ಪಟ್ಟಿರುವ ಯಾವದೇ ವ್ಯಕ್ತಿಗಳ ಅಥವಾ ಜನರ "ಇತಿಹಾಸ" ಎಂಬುದಾಗಿ ಅನುವಾದಿಸಬಹುದಾಗಿದೆ. ಈ ಸಂದರ್ಭದಲ್ಲಿ, *ಟೋಲೆಡೊಥ* ಎಂಬುದು 1:1-2:3ರಲ್ಲಿ ಈಗಾಗಲೇ ಸೃಷ್ಟಿಯ ಕುರಿತಾಗಿ ಹೇಳಲ್ಪಟ್ಟಿರುವದರ ಒಂದು ಮುಕ್ತಾಯವನ್ನು ಗುರುತಿಸುವದಾಗಿರುತ್ತದೆ ಎಂದು ಹೇಳಬಹುದಾಗಿದೆ. ಹೇಗೂ, ಈ ಪದವು ಬಹಳಷ್ಟು ಸಾರಿ ಪುಸ್ತಕದಲ್ಲಿ ಮುಂದೆ ಬರಲಿರುವ ಸಂಗತಿಗೆ ಒಂದು ಪರಿಚಯವಾಗಿ

ಕಾಣಿಸಿಕೊಳ್ಳುತ್ತದಾದ್ದರಿಂದ, ಇದನ್ನು ಆ ವಿಧದಲ್ಲಿ ಅರ್ಥಮಾಡಿಕೊಳ್ಳುವದು ಉತ್ತಮವೆಂದು ಕಾಣಿಸುತ್ತದೆ. (ನೋಡಿರಿ, *ಪರಿಚಯ*, ಪುಟಗಳು 4-5.)

ಲೇಖಕನು **ಯೆಹೋವದೇವರು ಭೂಮ್ಯಾಕಾಶಗಳನ್ನು ಉಂಟುಮಾಡಿದಾಗ** ಎಂದು ಹೇಳಿದಾಗ, ಆತನು 2:4-25ರಲ್ಲಿ ಸೃಷ್ಟಿಯ ಮತ್ತೊಂದು ಬೇರೆಯಾದ ಚರಿತ್ರೆಯೊಂದಿಗೆ (ಅಥವಾ ತದ್ವಿರುದ್ಧವಾದ ಚರಿತ್ರೆಯೊಂದಿಗೆ) ಪುನಃ ಮೊದಲಿನಿಂದ ಆರಂಭಿಸುತ್ತಿದ್ದಾನೆಂಬುದಕ್ಕೆ ವಾಕ್ಯಭಾಗದಲ್ಲಿ ಎಲ್ಲಿಯೂ ಸೂಚನೆಯಿರುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನು ಮೊದಲು ಒಂದು ಘಟನೆಯನ್ನು (ಸೃಷ್ಟಿ) ಒಂದು ದೃಶ್ಯಾವಳಿಯಂಥ ರೀತಿಯಲ್ಲಿ ಬಣ್ಣಿಸುವ ಸಾಮಾನ್ಯವಾಗಿ ಅಂಗೀಕೃತವಾಗಿರುವಂಥ ಸಾಹಿತ್ಯಕ ಪ್ರಕ್ರಿಯೆಯೊಂದನ್ನು ಬಳಸಿರುವಂತೆ ಕಾಣುತ್ತಾನೆ (1:1-2:3), ಮತ್ತು ಆ ಬಳಿಕ ತಾನು ತಿಳಿಸಲು ಬಯಸಿದ ದೈವಶಾಸ್ತ್ರೀಕ ಸಂದೇಶಕ್ಕೆ ಅತ್ಯಂಥ ಪ್ರಾಮುಖ್ಯವಾಗಿದ್ದ ಘಟನೆಯ ವಿವರಗಳನ್ನು ಬಣ್ಣಿಸುವದಕ್ಕೆ ಹಿಂದಿರುಗುತ್ತಾನೆ (2:4-25).[5]

ಕೆಲವರು ಅಭಿಪ್ರಾಯ ಪಟ್ಟಿರುವ ಪ್ರಕಾರ, ಆತನು 1:1ರಲ್ಲಿರುವ ಸರಳವಾದ "ದೇವರು" ಎಂಬ ಬಿರುದಿನ ಬದಲಾಗಿ (1:1-2:3ರಲ್ಲಿ ಕಂಡು ಬರುವ ಪ್ರಕಾರ) "ಯೆಹೋವದೇವರು" (יְהוָה אֱלֹהִים, *ಯಾಹವೇ ಎಲೋಹಿಮ್)* ಎಂಬ ಬಿರುದನ್ನು, 2:4-25ರಲ್ಲಿ ಒಬ್ಬ ಬೇರೆ ಲೇಖಕ ಅಥವಾ ಮೂಲವನ್ನು ಸೂಚಿಸುವದಕ್ಕಾಗಿ ಬಳಸುವದೂ ಇಲ್ಲ. ಹಳೆಯ ಒಡಂಬಡಿಕೆಯಲ್ಲಿ *ಎಲೋಹಿಮ್* ದೇವರಿಗೆ ಬಳಸುವ ಸಾಮಾನ್ಯವಾದ ಪದವಾಗಿದೆ, ಆದರೆ *ಯಾಹವೇ* ಎಂಬುದು ವೈಯಕ್ತಿಕ ಹೆಸರಾಗಿದ್ದು, ಇಸ್ರಾಯೇಲ್ಯರಿಂದ ವಿಶಿಷ್ಟವಾಗಿ ಬಳಸಲ್ಪಡುತ್ತದೆ. ಆದದರಿಂದ, 2:4ರಿಂದ ಆರಂಭಗೊಂಡು, ದೇವರು ಏದೆನ್ ತೋಟದಲ್ಲಿ ಮೊದಲ ಪುರುಷ ಮತ್ತು ಸ್ತ್ರೀಯೊಂದಿಗೆ ಸ್ಥಾಪಿಸಿಕೊಂಡ ನಿಕಟವಾದ ಸಂಬಂಧವನ್ನು ಲೇಖಕನು ಬಣ್ಣಿಸಿದ ಪ್ರಕಾರ, ಆತನು ಸ್ವಾಭಾವಿಕವಾಗಿಯೇ ಸಂಘಟಿತ ದೈವಿಕ ಹೆಸರನ್ನು - *ಯಾಹವೇ ಎಲೋಹಿಮ್* - ಬಳಸಿದನು. ಲೇಖಕನು ಈ ಪದಗಳನ್ನು ಒಂದುಗೂಡಿಸಿದ ವೇಳೆ, ಈ ಕಥೆಯಲ್ಲಿ ಪ್ರಟಕಗೊಳಿಸಲ್ಪಟ್ಟಿರುವ ರೀತಿಯಲ್ಲಿ, ದೇವರು ವಿಶ್ವದ ಸೃಷ್ಟಿಕರ್ತ ಮತ್ತು ಇಸ್ರಾಯೇಲ್ಯರ ದೇವರು ಎರಡೂ ಆಗಿದ್ದಾನೆಂಬುದಾಗಿ ಒತ್ತಿ ಹೇಳುವ ದೈವಶಾಸ್ತ್ರೀಕ ಉದ್ದೇಶವನ್ನು ಬಹುಶಃ ಆತನು ಹೊಂದಿದ್ದನೆಂದು ತೋರುತ್ತದೆ. ಇದೇ ಅಂಶವು ವಿಮೋಚನಕಾಂಡ 9:30ರಲ್ಲಿ ಸ್ಪಷ್ಟವಾಗಿರುತ್ತದೆ, ಅವರು "ದೇವರಾಗಿರುವ ಯೆಹೋವನಿಗೆ ಭಯ ಪಡಬೇಕು" (*ಯಾಹವೇ ಎಲೋಹಿಮ್)* ಎಂಬುದಕ್ಕಾಗಿ ಆನೆಕಲ್ಲಿನ ಮಳೆಯ ಉಪದ್ರವವು ರೂಪಿತಗೊಳಿಸಲ್ಪಟ್ಟಿತ್ತು. "ಯಾಹವೇ ಇಸ್ರಾಯೇಲ್ಯರ ರಾಷ್ಟ್ರೀಯ ದೈವ ಮಾತ್ರವೇ ಅಲ್ಲ ಆದರೆ ಸಕಲ ಸೃಷ್ಟಿಯನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ಸಾರ್ವಭೌಮ ದೇವರು" ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕಿತ್ತು.[6]

"[ಆತನು] ಭೂಮ್ಯಾಕಾಶಗಳನ್ನು ಉಂಟುಮಾಡಿದಾಗ" ಎಂಬ ಹೇಳಿಕೆಯು ಇಲ್ಲಿ "ದಿನ" (יוֹם, *ಯೊಮ*) ಎಂಬುದರ ಅರ್ಥದ ಬಗ್ಗೆ ಕೆಲವು ಪ್ರಶ್ನೆಗಳನ್ನು ಉದ್ಭವಗೊಳಿಸಿರುತ್ತದೆ. ಇದು ಆರು ದಿನಗಳಲ್ಲಿ ಸೃಷ್ಟಿಕಾರ್ಯವು ಸಂಭವಿಸಿತು ಎಂದು ಹೇಳುವ 1:1-2:3ರ ವಾಕ್ಯಭಾಗಕ್ಕೆ ಇದು ವಿರುದ್ಧವಾಗಿರುತ್ತದೋ? ಉತ್ತರವು ಇಲ್ಲ ಎಂದಾಗಿರುತ್ತದೆ.

ಇಬ್ರಿಯ ಪದವಾದ *ಯೊಮ* ಎಂಬುದು ಸನ್ನಿವೇಶಕ್ಕನುಗುಣವಾಗಿ ವಿವಿಧ ಅರ್ಥಗಳನ್ನು ನೀಡಬಲ್ಲದು.[7] ಅಧ್ಯಾಯ 1ರಲ್ಲಿ, ಅದರ ಜೊತೆಯಲ್ಲಿ ಅಂಕೆಗಳಿರುವಾಗ ("ಒಂದು," "ಎರಡು," "ಮೂರು," ಮತ್ತು ಇತ್ಯಾದಿ), ಈ ಪದವು 24ತಾಸುಗಳ ಸಮಯಾವದಿವೊಂದನ್ನು ಸೂಚಿಸುತ್ತದೆ (1:5, 8, 13, 19, 23, 31). ಒಂದು ಅಂಕೆಯೊಂದಿಗೆ *ಯೊಮನ್ನು*

ಒಂದುಗೂಡಿಸುವದು ಸಾಮಾನ್ಯವಾಗಿ ಈ ಅರ್ಥದೊಂದಿಗೆ ಹಳೆಯ ಒಡಂಬಡಿಕೆಯುದ್ದಕ್ಕೂ ಕಾಣಿಸಿಕೊಳ್ಳುತ್ತದೆ. ಅದರ ಜೊತೆಯಲ್ಲಿ, ಆ ವಚನಗಳಲ್ಲಿ "ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ" ಎಂಬ ಜೊತೆಗೂಡಿಸಲ್ಪಟ್ಟ ಹೇಳಿಕೆಯು ಒಂದು ಅಕ್ಷರಶಃ ದಿನಕ್ಕಾಗಿ ಸಮಯವನ್ನು ಗುರುತಿಸುವ ಇಬ್ರಿಯ ವಿಧವನ್ನು ಪ್ರತಿಫಲಿಸುತ್ತದೆ. ಪುಸ್ತಕದ ಮೂಲ ವಾಚಕರು ವಾಕ್ಯವನ್ನು ಸೃಷ್ಟಿಕಾರ್ಯದ ಆರು ಅಕ್ಷರಶಃ ದಿನಗಳ ಬಳಿಕ ದೇವರು ವಿಶ್ರಾಂತಿ ತೆಗೆದುಕೊಂಡ ಏಳನೆಯ ದಿನ ಎಂಬುದಾಗಿ ಅರ್ಥಮಾಡಿಕೊಂಡಿರಬಹುದಿತ್ತು, ಅದು ಅವರ ಆರು ದಿನಗಳ ವರೆಗೆ ದುಡಿದು ಏಳನೆಯ ದಿನದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವದಕ್ಕೆ ತಳಹದಿಯಾಗಿತ್ತು (ವಿಮೋಚನಕಾಂಡ 20:8-11).

*ಯೊಮ* ಎಂಬುದಕ್ಕೆ 1ರಲ್ಲಿ ಸಿಕ್ಕುವ ಮತ್ತೊಂದು ಅರ್ಥವು ಹಗಲು ಎಂಬುದು, ಯಾಕೆಂದರೆ ಈ ಪದವು ಕತ್ತಲೆ ಅಥವಾ ರಾತ್ರಿಯ ಸಮಯಕ್ಕೆ ವಿರುದ್ಧ ಹೋಲಿಕೆ ಮಾಡಲ್ಪಟ್ಟಿದೆ (1:5, 14, 16, 18). ಖಂಡಿತವಾಗಿಯೂ, ಹಗಲಿನ ಸಮಯವು ಎಷ್ಟು ಹೊತ್ತು ಎಂಬುದರಲ್ಲಿ ವ್ಯತ್ಯಾಸಗಳಿರುತ್ತವೆ, ಅದು ವರ್ಷದ ಕಾಲ ಮತ್ತು ಭೂಮಧ್ಯರೇಖೆಯ ದೂರದ ಮೇಲೆ ಆಧಾರವಾಗಿರುತ್ತದೆ. ಆದದರಿಂದ, ಈ ವಚನಗಳಲ್ಲಿ, *ಯೊಮ* ಎಂಬುದು 24-ತಾಸು ದಿನಗಳೆಂಬ ಎಣಿಕೆಗಿಂತಲೂ ಕಡಿಮೆ ಅವದಿಯ ಕಾಲಾವದಿಯನ್ನು ಪ್ರತಿನಿಧಿಸುತ್ತದೆ, ಅದರಲ್ಲಿ ಹಗಲಿನ ಕಾಲಾವದಿ ಮತ್ತು ರಾತ್ರಿಯ ಕಾಲಾವದಿ ಎರಡೂ ಸೇರಿರುತ್ತವೆ (1:5, 8, 13, 19, 23, 31).

ಆದಿಕಾಂಡ 2:4ರಲ್ಲಿ, *ಯೊಮ* ಎಂಬುದು ಅಧ್ಯಾಯ 1ರಲ್ಲಿನ ಸೃಷ್ಟಿಯ ಆರು ದಿನಗಳನ್ನೊಳಗೊಂಡಿರುವ, ಒಂದು ಹೆಚ್ಚು ಸಾಮಾನ್ಯ ಕಾಲಾವಧಿಯನ್ನು ಒಳಗೊಂಡಿರುತ್ತದೆ ಎಂಬುದನ್ನು ಸೂಚಿಸುವಂತೆ ಕಾಣಿಸುತ್ತದೆ. ಇಬ್ರಿಯ ವಾಕ್ಯದಲ್ಲಿ בְּיוֹם *(ಬೆಯೊಮ)* ಎಂದಿರುತ್ತದೆ, ಅದನ್ನು NASBಯು ಅಕ್ಷರಶಃ "ದಿನದಲ್ಲಿ" ಎಂದು ಅನುವಾದಿಸುತ್ತದೆ (ನೋಡಿರಿ 2:17; 3:5; 5:1, 2). *ಯೊಮ* ಎಂಬುದನ್ನು ಅದರ ಜಾತಿವಿಶಿಷ್ಟತೆಯ ಅರ್ಥದಲ್ಲಿ ತೆಗೆದುಕೊಳ್ಳುವದಾಗಿ, NIVಯು ವಾಕ್ಯಭಾಗವನ್ನು ಹೀಗೆ ಅನುವಾದಿಸುತ್ತದೆ: "ಯೆಹೋವ ದೇವರು ಭೂಮಿ ಮತ್ತು ಆಕಾಶಗಳನ್ನು ನಿರ್ಮಿಸಿ*ದಾಗ*" (ಒತ್ತಿ ಹೇಳಿದ್ದು ನನ್ನದು).

ಕೆಲವರು 2:5ರಲ್ಲಿನ ಸೃಷ್ಟಿಯ ಹೇಳಿಕೆಯಲ್ಲಿ *ಯೊಮ* ಎಂಬುದು ಹೆಚ್ಚು ಸಾಮಾನ್ಯ ವಿಧದಲ್ಲಿ ಬಳಸಲ್ಪಟ್ಟಿದೆ ಎಂಬುದನ್ನು ಅಂಗೀಕರಿಸಿಕೊಳ್ಳಲು ಹಿಂದೇಟು ಹಾಕುತ್ತಾರೆ, ಹಾಗೆ ಒಪ್ಪಿಕೊಂಡರೆ ಸೃಷ್ಟಿಯ ಮೊದಲ ಮೂರು ದಿನಗಳನ್ನು (1:1-13) 24-ತಾಸು ದಿನಗಳಿಗಿಂಥ ಬೇರೆಯವುಗಳೆಂದು ಅರ್ಥನಿರೂಪಣೆ ಮಾಡಿದಂತಾಗುವ ಸಾಧ್ಯತೆಯಿರುತ್ತದೆಂದು ಭಯ ಪಡುತ್ತಾರೆ.[8] ಅಂತಹ ಒಂದು ಅರ್ಥನಿರೂಪಣೆಯು ಸೃಷ್ಟಿಯ ದಿನಗಳನ್ನು ನೂರಾರು ಲಕ್ಷ ವರ್ಷಗಳ ವರೆಗೂ ವಿಸ್ತರಿಸಬಹುದೆಂದು ವಾದಿಸುವಂತಹ ವಿಕಾಸವಾದಿಗಳಿಗೆ ಪ್ರವಾಹದ್ವಾರಗಳನ್ನು ತೆರೆದು ಕೊಟ್ಟಂತಾಗುವದೆಂದು ಯೋಚಿಸಲಾಗುತ್ತದೆ. ಇದು ವಿಧಿಯ ಕೆಲಸದ ಬಗ್ಗೆ ಅಂಧ ನಂಬಿಕೆಯುಳ್ಳ ಶಕ್ತಿಗಳಿಗೆ, ಸ್ವಾಭಾವಿಕ ಆಯ್ಕೆಯ ಜೊತೆಯಲ್ಲಿ, ಈಗ ನಮಗೆ ತಿಳಿದಿರುವ ಈ ಜಗತ್ತು ಹೇಗೆ ಉಂಟಾಯಿತೆಂದು ಕಲ್ಪನೆಗಳನ್ನು ಮಾಡಿಕೊಳ್ಳಲು ಸಾಕಷ್ಟು ಸಮಯಾವಕಾಶವನ್ನು ಕೊಟ್ಟಂತಾಗುವದು. ಹೇಗೂ, *ಯೊಮ*ನ್ನು ವಿಕಾಸವಾದದ ನೂರಾರು ಲಕ್ಷ ವರ್ಷಗಳನ್ನು ಒಳಗೆ ನುಸುಳುವಂತೆ ಮಾಡುವದಕ್ಕೆ ಸಾಕಷ್ಟು ಸಮಯಾವಕಾಶ ಮಾಡಿಕೊಡುವದೆಂಬಂತೆ ಅರ್ಥನಿರೂಪಣೆ ಮಾಡುವದೆಂದರೆ ಸೃಷ್ಟಿಯ ಕಥೆಯೊಳಗೆ ಅದಕ್ಕೆ ಅಪರಿಚಿತವಾಗಿರುವಂಥ ಪೂರ್ವನಿರ್ಧಾರಿತ ಅರ್ಥನಿರೂಪಣೆಯನ್ನು ಸೇರಿಸಿ ಓದುವದಕ್ಕೆ ಮಾಡುವ ಮೊಂಡು ಪ್ರಯತ್ನವಾಗಿರುತ್ತದೆ.

ಇಲ್ಲಿ ಪರಿಹಾರವು ಏನೆಂದರೆ "ವಾಕ್ಯಭಾಗವೇ ತನಗೋಸ್ಕರ ಮಾತಾಡುವಂತೆ ಅನುಮತಿಸುವದು" ಆಗಿರುತ್ತದೆ. *ಯೊಮ* ಎಂಬ ಪದವು ಸನ್ನಿವೇಶಕ್ಕನುಗುಣವಾಗಿ ಅರ್ಥನಿರೂಪಣೆ ಮಾಡಲ್ಪಡತಕ್ಕದ್ದು. 2:4ರಲ್ಲಿ, ಅದು ಸೃಷ್ಟಿಯ ಎಲ್ಲಾ ಆರು ದಿನಗಳನ್ನೊಳಗೊಂಡ ಕಾಲಾವದಿಯೊಂದನ್ನು ಒಳಗೊಂಡಿತ್ತು. ಈ ವಿಧವಾದ ಅರ್ಥಮಾಡಿಕೊಳ್ಳುವಿಕೆಯು ಯಾವ ವಿಧದಲ್ಲಿಯೂ ವಾಕ್ಯದೊಳಗೆ ವಿಕಾಸವಾದದ ಊಹೆಗಳನ್ನು ನುಸುಳಿಸುವದಿಲ್ಲ. ಸೃಷ್ಟಿಯ ಪ್ರಕ್ರಿಯೆಯಲ್ಲಿ, ದೇವರು ಬೇರೆ ಏನನ್ನೂ ಮಾಡದೆ ಕೇವಲ ನುಡಿಯಬೇಕಾಗಿತ್ತಷ್ಟೆ ಮತ್ತು ಲೋಕಗಳು ಅಸ್ತಿತ್ವಕ್ಕೆ ಬಂದವು ಎಂಬುದನ್ನು ಲೇಖಕನು ದೃಢೀಕರಿಸುತ್ತಾನೆ. ತರುವಾಯ, ಆತನು ನುಡಿಯುವದನ್ನು ಮುಂದುವರೆಸಿದಂತೆ, ಸಮುದ್ರ, ಆಕಾಶ ಮತ್ತು ಭೂಮಿಗಳಲ್ಲಿ ಜೀವಗಳು ತುಂಬಿಕೊಂಡವು, ಅದರ ಪರಾಕಾಷ್ಠೆಯಾಗಿ ಮಾನವನು ಸೃಷ್ಟಿಸಲ್ಪಟ್ಟನು. ಅದಕ್ಕೆ ಈ ಸಕಲ ವಿಧವಾದ ಜೀವರಾಶಿಗಳಿಂದ ತುಂಬಿರುವ ಅತ್ಯಾಶ್ಚರ್ಯಕರವಾದ ಲೋಕವನ್ನುಂಟು ಮಾಡುವದಕ್ಕಾಗಿ ದೇವರು ನೂರಾರು ಲಕ್ಷದಷ್ಟು ವರ್ಷಗಳ ಕಾಲ ಪರೀಕ್ಷೆಗಳನ್ನು ನಡಿಸಿ ಮತ್ತು ತಪ್ಪುಗಳು ನಡೆಸಿ, ವಸ್ತುವಿನ ಆಕಸ್ಮಿಕವಾದ ಸಮ್ಮಿಶ್ರಣಗಳು, ಅನುವಂಶಿಕ ರೂಪಾಂತರಗಳು, ಮತ್ತು ಆಕಸ್ಮಿಕವಾದ ಮುನ್ನಡೆಗಳು ದೊರೆಯುವಿಕೆ ಇತ್ಯಾದಿಗಳಿಂದ ಕೂಡಿದ ಪ್ರಕ್ರಿಯೆಯನ್ನು ಅನುಸರಿಸುವ ಅಗತ್ಯವಿರಲಿಲ್ಲ. ಇಬ್ರಿಯರಿಗೆ ಪತ್ರಿಕೆಯ ಲೇಖಕನ ಮಾತುಗಳಲ್ಲಿ ನೋಡುವದಾದರೆ, "ಲೋಕಗಳು *ದೇವರ ಮಾತಿನಿಂದ* ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ" (ಇಬ್ರಿಯ 11:3; ಒತ್ತಿ ಹೇಳಿದ್ದು ನನ್ನದು).

ಇಲ್ಲಿ ಬೇರೊಬ್ಬ ಲೇಖಕನು 1ನೇ ಅಧ್ಯಾಯದಲ್ಲಿರುವ ಸೃಷ್ಟಿಯ ಚರಿತ್ರೆಗಿಂತಲೂ ವ್ಯತ್ಯಾಸವಾದ (ತದ್ವಿರುದ್ಧವಾದ), ವಿಶೇಷವಾಗಿ, ಮಾನವನು ಉಂಟು ಮಾಡಲ್ಪಟ್ಟ ವೇಳೆ ಭೂಮಿಯ ಮೇಲೆ ಗಿಡವಾಗಲಿ ಕಾಯಿಪಲ್ಯಗಳಾಗಲಿ ಇರಲಿಲ್ಲ ಎಂಬ ವಿಚಾರದೊಂದಿಗೆ ಬೇರೆ ಚರಿತ್ರೆಯೊಂದನ್ನು ಮುಂದಿಡುತ್ತಿದ್ದಾನೆಂದು ಹೇಳಲಾಗಿರುತ್ತದೆ. ಅದಕ್ಕೆ ತದ್ವಿರುದ್ಧವಾಗಿ, ಲೇಖಕನು ಇಲ್ಲಿ ಮೂರನೆಯ ಮತ್ತು ಆರನೆಯ ದಿನಗಳಲ್ಲಿ ಏನು ಸಂಭವಿಸಿತು ಎಂಬುದರ ಕುರಿತು ಇನ್ನಷ್ಟು ವಿವರವಾದ ಚರಿತ್ರೆಯನ್ನು ಹೇಳುವದಕ್ಕಾಗಿ ಹಿಂದಕ್ಕೆ ಸಾಗಿದನು ಅಷ್ಟೆ. 1:11, 12ರ ಪ್ರಕಾರವಾಗಿ, ದೇವರು ಆರನೆಯ ದಿನದಲ್ಲಿ ಮಾನವನನ್ನು ಉಂಟು ಮಾಡುವದಕ್ಕೆ ಮುಂಚೆಯೇ (1:26-28), ಮೂರನೆಯ ದಿನದಲ್ಲಿ ಸಕಲ ವಿಧವಾದ ಗಿಡಮರಗಳನ್ನು ಮತ್ತು ಹಣ್ಣಿನ ಮರಗಳನ್ನು ಉಂಟು ಮಾಡಿದನು. ಬಳಿಕ 1:29ನೇ ವಚನವು ಮನುಷ್ಯನಿಗಾಗಿ ದೇವರು ಎಲ್ಲಾ ವಿಧವಾದ ಗಿಡ ಮತ್ತು ಪ್ರತಿಯೊಂದು ಹಣ್ಣಿನ ಮರಗಳನ್ನು ಆತನ ಪೋಷಣೆಗೋಸ್ಕರ ಆಹಾರವನ್ನ ಒದಗಿಸುವದಕ್ಕೆ ಅನುಗ್ರಹಿಸಿದನು ಎಂದು ಹೇಳುತ್ತದೆ, ಮತ್ತು ಇದು ಸ್ವಾಭಾವಿಕವಾಗಿಯೇ ಮನುಷ್ಯನ ಸೃಷ್ಟಿಯ ಮುಂಚೆ ಗಿಡಮರಗಳು ಬೆಳೆಯಲಾರಂಭಿಸಿ ಆಹಾರವನ್ನು ಒದಗಿಸುತ್ತಿದ್ದವು ಎಂಬುದನ್ನು ಭಾವಿಸಿಕೊಳ್ಳಲ್ಪಡುತ್ತದೆ.

ಕೆಲವರು ಅಭಿಪ್ರಾಯ ಪಡುವದೇನೆಂದರೆ, 5ನೇ ವಚನದಲ್ಲಿ, ಲೇಖಕನ ಇಂಗಿತವು ವಾಚಕನನ್ನು ಪುನಃ ಮೂರನೆಯ ದಿನಕ್ಕೆ ಮುಂಚೆ "ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ"[9] (ಅಥವಾ "ಒಂದು ಬರುಡಾದ ಹಾಗೂ ಬರಿದಾದ"[10]; 1:2) ಇದ್ದ ಸಮಯಕ್ಕೆ ಕರೆದೊಯ್ಯುವದಾಗಿತ್ತು ಎಂಬುದೆ. ವಿಷಯವು ಆ ರೀತಿಯಲ್ಲಿ ಇರಲಿಲ್ಲ ಎಂದು ಆದಾಗ್ಯೂ, ಮೂರನೆಯ ದಿನದಲ್ಲಿ ಒಣ ನೆಲವು ಕಾಣಿಸಿಕೊಂಡ ವೇಳೆ, ಅಲ್ಲಿ ಒಂದಿಷ್ಟು ಕಾಲ **ಯಾವ ಗಿಡವಾದರೂ ಭೂಮಿಯಲ್ಲಿ ಇರಲಿಲ್ಲ, ಯಾವ ಪಲ್ಯವೂ ಹುಟ್ಟಿರಲಿಲ್ಲ** ಎಂಬಂತಹ ಪರಿಸ್ಥಿತಿ

ಇತ್ತೆಂದು ಕಾಣಿಸುತ್ತದೆ.

ಇಲ್ಲಿ ಎರಡು ಬೇರೆ ಬೇರೆ ವಿಧವಾದ ಗಿಡಗಳು ಪ್ರಸ್ತಾಪಿಸಲ್ಪಟ್ಟಿವೆ. ಮೊದಲನೆಯದು ಮರುಭೂಮಿಯ "ಪಲ್ಯ" (שִׂיחַ, *ಸಿಯಾಕ್*), ಅದು ಹಳೆಯ ಒಡಂಬಡಿಕೆಯೊಳಗೆ ಇಲ್ಲಿ ಮತ್ತು ಬೇರೆ ಇನ್ನೆರಡು ಸ್ಥಳಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಆದಿಕಾಂಡ 21:15ರಲ್ಲಿ, *ಸಿಯಾಕ್* ಎಂಬುದು ದೇವದೂತನು ಬಂದು ಅವರ ಅಗತ್ಯತೆಗಳನ್ನು ಒದಗಿಸುವ ತನಕ ಹಾಗರಳು ಇಸ್ಮಾಯೇಲನನ್ನು ಆಹಾರ ಅಥವಾ ನೀರು ಇಲ್ಲದೆ ಬಿಟ್ಟಿದ್ದಂಥ ಅರಣ್ಯದಲ್ಲಿ ಒಂದು ಪೊದೆಯನ್ನು ಸೂಚಿಸುತ್ತದೆ. ಕೊನೆಯದಾಗಿ ಅದು ಕಾಣಿಸಿಕೊಳ್ಳುವ ಸ್ಥಳವು ಯೋಬನು ತನ್ನ ಪರಿಸ್ಥಿತಿಯನ್ನು ಅರಣ್ಯದಲ್ಲಿನ ಪೊದೆಗಳೊಳಗೆ *(ಸಿಯಾಕ್)* ಎಸೆಯಲ್ಪಟ್ಟು, ಕೊರತೆಯಿಂದ ಮತ್ತು ಕ್ಷಾಮದಲ್ಲಿರುವವನಾಗಿ ಸಹಾಯಕ್ಕಾಗಿ ರೋದಿಸುತ್ತಾ ಒಣ ನೆಲದ ಮೇಲೆ ಮಲಗಿರುವ ಮೂರ್ಖನಿಗೆ ಹೋಲಿಕೆ ಮಾಡುವ ಕಡೆಯಲ್ಲಿ ಆಗಿದೆ (ಯೋಬ 30:4, 7).

ಇತರ "ಗಿಡ" ಎಂಬುದಕ್ಕಿರುವ ಪದವು עֵשֶׂב (*ಎಸೆಬ*), ಮತ್ತು ಅದು ಸೇವಿಸಬಹುದಾದದ್ದೋ ಅಥವಾ ಅಲ್ಲವೋ ಎಂಬುದರಲ್ಲಿ ವ್ಯತ್ಯಾಸವು ಇರುವಂತೆ ಕಾಣಿಸುತ್ತದೆ. *ಎಸೆಬ* ಎಂಬುದು ಅನೇಕ ಸಾರಿ ತಿನ್ನಲು ಯೋಗ್ಯವಾದ "ಗಿಡಮೂಲಿಕೆ[ಗಳನ್ನು]" (2:5; KJV; NRSV) ಸೂಚಿಸುತ್ತದೆ; ಅದಕ್ಕೆ ಸಂಬಂಧಿಸಿದ ಗಿಡಗಳಲ್ಲಿ ಹಸಿರು ಸೊಪ್ಪುಗಳು, ಗೆಡ್ಡೆಯ ಗಿಡಗಳು, ಪಲ್ಯಗಳು, ಮತ್ತು ಪ್ರಾಣಿಗಳು ಮೇಯುವಂಥ ಹುಲ್ಲು ಇತ್ಯಾದಿಗಳು ಸೇರಿರುತ್ತವೆ.[11] ಇದು ಮನುಷ್ಯನು ಸೃಷ್ಟಿಸಲ್ಪಡುವದಕ್ಕೆ ಮುಂಚೆ ಅಸ್ತಿತ್ವದಲ್ಲಿ ಇಲ್ಲದೆ ಇದ್ದ ಗಿಡಗಳ ವಿಧವೆಂದರೆ ಕೃಷಿ ಮಾಡಬೇಕಾದ ಅಗತ್ಯವಿದ್ದ ಗಿಡಗಳೆಂಬ ಸೂಚ್ಯಾರ್ಥವನ್ನು ನೀಡಬಹುದಾಗಿದೆ. ಈ ಪರಿಸ್ಥಿತಿಗಾಗಿ ಲೇಖಕನು ಎರಡು ಕಾರಣಗಳನ್ನು ಕೊಡುತ್ತಾನೆ: **ಯಾಕಂದರೆ ಯೆಹೋವದೇವರು ಭೂಮಿಯ ಮೇಲೆ ಮಳೆಯನ್ನು ಸುರಿಸಿರಲಿಲ್ಲ; ಭೂಮಿಯನ್ನು ವ್ಯವಸಾಯ ಮಾಡುವದಕ್ಕೆ ಮನುಷ್ಯನೂ ಇರಲಿಲ್ಲ.** ಭೂಮಿಯ ಮೇಲೆ ಮಳೆಯು ಇರಲಿಲ್ಲ ಎಂಬ ಮೊದಲನೆಯ ಹೇಳಿಕೆಯು ಏದೆನ್ ಇದ್ದಂಥ ಸ್ಥಳವಾದ ದಕ್ಷಿಣ ಮೆಸಪೊತಾಮ್ಯವನ್ನು ಮಾತ್ರವೇ ಸೂಚಿಸುತ್ತಿರುವ ಹೊರತು, ಇದು ಗೊಂದಲಕರವಾಗಿರುತ್ತದೆ. ಈ ಕ್ಷೇತ್ರವು ಮಳೆಯನ್ನು ಪಡೆಯದಂತಹ ಸ್ಥಳವಾಗಿದೆ.[12]

**ವಚನ 6.** ಮಳೆಯ ಬದಲಾಗಿ, 6ನೇ ವಚನವು **ಭೂಮಿಯಿಂದ ಮಂಜು** (אֵד, *ಎಡ್*) **ಹಬ್ಬಿ ನೆಲವನ್ನೆಲ್ಲಾ ತೋಯಿಸುತ್ತಿತ್ತು** ಎಂದು ಹೇಳುತ್ತದೆ. ಹಳೆಯ ಒಡಂಬಡಿಕೆಯೊಳಗೆ ಈ ಪದವು ಬಳಸಲ್ಪಟ್ಟಿರುವ ಕೇವಲ ಎರಡು ವಾಕ್ಯಭಾಗಗಳೆಂದರೆ ಆದಿಕಾಂಡ 2:6 ಮತ್ತು ಯೋಬ 36:27, ಮತ್ತು ಎರಡೂ ಸ್ಥಳಗಳಲ್ಲಿ NASBಯು "ಮಂಜು" ಎಂದು ಹೊಂದಿರುತ್ತದೆ. ಕೆಲವು ಮುದ್ರಣಗಳು ಬದಿಯ ಟಿಪ್ಪಣಿಗಳೊಳಗೆ, ಕ್ರಮವಾಗಿ "ಹರಿವು" ಮತ್ತು "ಪ್ರವಾಹ" ಎಂಬುವುಗಳನ್ನು ಸಂಭಾವ್ಯ ಅರ್ಥಗಳಿರಬಹುದೆಂದು ಸೇರ್ಪಡೆಗೊಳಿಸಿರುತ್ತವೆ. ಇಬ್ರಿಯ ಪದ *ಎಡ್* ಎಂಬುದು ಅಕ್ಕಾಡಿಯರ *ಎಡು* ಎಂಬ ಪದದಿಂದ ಬಂದಿರುವಂತೆ ತೋರುತ್ತದೆ, ಇದು ಪ್ರಾಚೀನ ಬಾಬೆಲನ್ನು ನೀರಿನಲ್ಲಿ ಮುಳುಗುವಂತೆ ಮಾಡುತ್ತಿದ್ದ ಯೂಫ್ರೇಟಿಸ್ ನದಿಯ ವಾರ್ಷಿಕ ಪ್ರವಾಹವನ್ನು ಸೂಚಿಸುವದಾಗಿದೆ;[13] ಆದದರಿಂದ, NIVಯಲ್ಲಿ "ತೊರೆಗಳು" ಎಂದಿರುತ್ತದೆ (ನೋಡಿರಿ NRSV). ತೋಟಕ್ಕೆ ನೀರು ಒದಗಿಸುತ್ತಿದ್ದ "ಪ್ರವಾಹಗಳು" ಅಥವಾ "ತೊರೆಗಳು" ಟೈಗ್ರಿಸ್ ಮತ್ತು ಯೂಫ್ರೇಟಿಸ್ ನದಿಗಳಂಥವುಗಳ ಮೇಲ್ಗಡೆಯಲ್ಲಿನ ನೀರು ಆಗಿರಬಹುದಾಗಿದೆ, ಆದರೆ ಭೂಮಿಗೆ ನೀರನ್ನು ಒದಗಿಸುವದಕ್ಕೆ ಉಕ್ಕುತ್ತಿದ್ದ ನೆಲದ ಕೆಳಗಿನ ಒರತೆಗಳು ಸಹ ಆಗಿದ್ದಿರಬಹುದು. ವಿವರಣೆಯು ಏನೇ ಇದ್ದರೂ ಸರಿಯೇ, ಭೂಮಿಯ ಮೇಲೆ ಹಸಿರುವ ಗಿಡಮರಗಳಿಲ್ಲದಿರುವಿಕೆಗೆ ಮುಖ್ಯವಾದ ಕಾರಣವು ಮನುಷ್ಯನು ಇಲ್ಲದಿರುವದೇ

ಆಗಿರುವಂತೆ ಕಾಣಿಸುತ್ತದೆ; ಯಾಕೆಂದರೆ ಭೂಮಿಯನ್ನು ಕೃಷಿ ಮಾಡುವದಕ್ಕಾಗಿ ಆತನಿಲ್ಲದೆ, ಒರತೆಗಳಿಂದ ಯಾವದೇ ಪ್ರಯೋಜನವು ಇರಲಾರದಷ್ಟೆ.

**ವಚನ 7.** ಈ ಹಂತದಲ್ಲಿ, ಪ್ರೇರಿತ ಲೇಖಕನು **ಮನುಷ್ಯನ** ಸೃಷ್ಟಿಯ ಕುರಿತಾಗಿ ಇನ್ನಷ್ಟು ಹೆಚ್ಚು ವಿವರವಾದ ಚರಿತ್ರೆಯನ್ನು ಒದಗಿಸುತ್ತಾನೆ, **ಯೆಹೋವದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿದನು** ಎಂಬುದನ್ನು ದೃಢಪಡಿಸುತ್ತಾನೆ. "ರೂಪಿಸಿದನು" (יָצַר, *ಯಾಟ್ಸಾರ)* ಎಂಬ ಪದವು ಹಳೆಯ ಒಡಂಬಡಿಕೆಯಲ್ಲಿ ವಿವಿಧ ಸನ್ನಿವೇಶಗಳೊಳಗೆ ಕಂಡು ಬರುತ್ತದೆ. ಅದು ಸೃಷ್ಟಿಯ ಕುರಿತಾದ ಒಂದು ಸಾಧೃಶ್ಯಕ್ಕೆ ಸುಸ್ಪಷ್ಟವಾಗಿ ಸರಿಹೊಂದುತ್ತದೆ ಯಾಕೆಂದರೆ ಇದು ಅನಂತರದಲ್ಲಿ ಒಬ್ಬ ಕುಂಬಾರನು ಮಣ್ಣಿನಿಂದ ಪಾತ್ರೆಯೊಂದನ್ನು ರೂಪಿಸುವ ಕುರಿತಾಗಿ ಅನ್ವಯಿಸಲ್ಪಡುತ್ತದೆ (ಯೆರೆಮೀಯ 18:1-6). ಈ ಕುಂಬಾರನು ಯೆಹೋವನಿಗೆ ಸಂಕೇತವಾಗಿದ್ದನು, ಆ ಯೆಹೋವನು ದೈವಿಕ ಸೃಷ್ಟಿಕರ್ತನು, ಮತ್ತು ಕುಂಬಾರನು ಮಣ್ಣಿನಿಂದ ಪಾತ್ರೆಯನ್ನು ರೂಪಿಸುವದು ಕರ್ತನು ಮನುಷ್ಯನನ್ನು ಉಂಟು ಮಾಡಿದ್ದನ್ನು ಸಂಕೇತಿಸುವದಾಗಿತ್ತು (ಅಥವಾ ಅನಂತರದಲ್ಲಿ, ಆತನು ಇಸ್ರಾಯೇಲ್ಯನ್ನು ರೂಪಿಸಿದ್ದಕ್ಕೆ ಸಂಕೇತವಾಗಿತ್ತು).[14] ಎದ್ದು ಕಾಣುವಂತೆ ನಿಲ್ಲುವ ಚಿತ್ರಣವು ಏನೆಂದರೆ ದೈವಿಕ ಕುಂಬಾರನಾದ ದೇವರು, ಅಂತಿಮವಾಗಿ ತನ್ನ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿರುವ ಜೀವಿಯಾಗಿರುವಂತೆ ಮನುಷ್ಯನನ್ನು ಕೌಶಲದಿಂದ ರೂಪಿಸುವದರಲ್ಲಿ ತೊಡಗಿಸಿಕೊಂಡಿದ್ದನು ಎಂಬುದೆ.

ಇಬ್ರಿಯ ವಾಕ್ಯದಲ್ಲಿ ಒಂದು ಶಬ್ದಾಡಂಬರವು ಕಾಣಿಸಿಕೊಳ್ಳುವದಾಗಿ ಹೇಳುವದೇನೆಂದರೆ ದೇವರು "ಮನುಷ್ಯ"ನನ್ನು (אָדָם, *ಆದಾಮ*) "ನೆಲದ" (אֲדָמָה, *ಅದಾಮಾಹ)* ಮಣ್ಣಿನಿಂದ ರೂಪಿಸಿದನು ಎಂಬುದೆ. ಈ ಪರಿಭಾಷೆಯು ಸೂಚಿಸುವದೇನೆಂದರೆ ಮನುಷ್ಯನು ಅಂತಿಮವಾಗಿ ದೇವರಿಗೊಬ್ಬನಿಗೆ ಮಾತ್ರವೇ ಸೇರಿದವನಾಗಿರುವದು ಮಾತ್ರವೇ ಅಲ್ಲ, ಆದರೆ ನೆಲಕ್ಕೆ ಸಹ ಸೇರಿದವನು. "ಮಣ್ಣು" (עָפָר, *'ಅಪಾರ)* ಎಂಬುದು ಈ ವಾಕ್ಯದಲ್ಲಿ "ನೆಲ" ಎಂಬುದರೊಂದಿಗೆ ಸಮಾನಾರ್ಥವುಳ್ಳದ್ದಾಗಿದೆ, 3ನೇ ಅಧ್ಯಾಯದಲ್ಲಿಯೂ ಹಾಗೆಯೇ ಇರುತ್ತದೆ. 3:17ರಲ್ಲಿ ಮಾನವನ ಪಾಪದ ಕಾರಣದಿಂದಾಗಿ ನೆಲದ ಮೇಲೆ ಒಂದು ಶಾಪವು ಬಂದಿತಾದರೂ, ಸ್ವತಃ ಆತನು ತಪ್ಪಿಸಿಕೊಳ್ಳಲಿಲ್ಲ; ಬದಲಾಗಿ, ಆತನು ಯಾವದರಿಂದ ದೇವರು ಆತನನ್ನು ನಿರ್ಮಿಸಿದ್ದನೋ ಅದಕ್ಕೆ, ಅಂದರೆ "ಪುನಃ ಮಣ್ಣಿಗೆ ಸೇರತಕ್ಕವನು" ಆಗಿದ್ದನು. ದೇವರು ಈ ಮುಕ್ತಾಯಕ್ಕೆ ಬಂದನು, "ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ" (3:19).

2:7ನೇ ವಚನವು ದೇವರು **ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು**, ಇದು ಮನುಷ್ಯನು ದೇವರಿಂದ ನಿರ್ಮಿಸಲ್ಪಟ್ಟ ಭೂಮಿಯ ಒಂದು ತುಂಡು ಆಗಿರುತ್ತಾನಷ್ಟೆ. ಆತನು ರಸಾಯನಗಳು, ಗ್ರಂಥಿಗಳು, ಮತ್ತು ವಿದ್ಯುನ್ಮಾನ ಸ್ನಾಯುಗಳು ಆಕಸ್ಮಿಕವಾಗಿ ಸಮ್ಮಿಶ್ರಣಗೊಂಡಿದ್ದರಿಂದಾದ ಜೀವಿವೆಂಬುದಕ್ಕಿಂತಲೂ ಹೆಚ್ಚಿನವನಾಗಿದ್ದಾನೆ. ಆತನೊಳಗೆ ದೇವರು ಮಾತ್ರವೇ ಅನುಗ್ರಹಿಸಬಲ್ಲ ಜೀವದ ವರವು ಇರುತ್ತದೆ. ಮಾನವನ ಮೂಗಿನಲ್ಲಿ "ಊದಿದ" ಶ್ವಾಸವು "ಜೀವಶ್ವಾಸ [נְשָׁמָה, *ನೆಶಮಾಹ]"* ಎಂದು ಗುರುತಿಸಲ್ಪಟ್ಟಿದೆ, ಮತ್ತು ಇದು ಬಾಬೆಲಿನ ಸೆರೆವಾಸದ ವೇಳೆ ಯೆಹೆಜ್ಕೇಲನು ಬೋಧಿಸಿದ್ದಕ್ಕೆ ನಿಕಟವಾದ ಸಮಾನತೆಯನ್ನು ಹೊಂದಿರುತ್ತದೆ (ಯೆಹೆಜ್ಕೇಲ 37:1-10). "ಶ್ವಾಸ" (רוּחַ, *ರೂವಾಕ)* ಎಂಬುದಕ್ಕೆ ಪ್ರವಾದಿಯು ಬಳಸಿದ ಪದವು ಆದಿಕಾಂಡ 2:7ರಲ್ಲಿ ಬಳಸಲಾದ *(ನೆಶಮಾಹ)* ಎಂಬುದಕ್ಕಿಂತ ವ್ಯತ್ಯಾಸವಾಗಿರುವಂಥ ಪದವೆಂಬುದು ಸತ್ಯವೇ ಆಗಿದೆಯಾದರೂ, ಈ

ಎರಡು ಪದಗಳು ಹಲವಾರು ವಾಕ್ಯಭಾಗಗಳಲ್ಲಿ ಪರ್ಯಾಯವಾಗಿ ಬಳಸಲ್ಪಟ್ಟಿವೆ: "ಆದರೆ ಮನುಷ್ಯರಲ್ಲಿ ಆತ್ಮವೊಂದುಂಟು, ಸರ್ವಶಕ್ತನ ಶ್ವಾಸದಿಂದ ಅವರಿಗೆ ವಿವೇಕ ದೊರೆಯುತ್ತದೆ" (ಯೋಬ 32:8; ನೋಡಿರಿ ಆದಿಕಾಂಡ 7:22; ಯೋಬ 27:3; 33:4; 34:14; ಯೆಶಾಯ 57:16).

ದೇವರು ಪ್ರವಾದಿಯಾದ ಯೆಹೆಜ್ಕೇಲನಿಗೆ, ಸೆರೆವಾಸದಲ್ಲಿ ನಿರೀಕ್ಷೆಯನ್ನು ಕಳೆದುಕೊಂಡಿದ್ದ ಇಸ್ರಾಯೇಲ್ಯರೊಂದಿಗೆ ಮಾತಾಡು ಎಂದು ಹೇಳಿದನು. ಆತನು ಅವರಿಗೆ ಹೀಗೆ ಹೇಳಬೇಕಿತ್ತು, "ಒಣಗಿದ ಎಲುಬುಗಳೇ, ಯೆಹೋವನ ವಾಕ್ಯವನ್ನು ಕೇಳಿರಿ" (ಯೆಹೆಜ್ಕೇಲ 37:4). ತರುವಾಯ, ನುಡಿದ ವಾಕ್ಯದ ಮೂಲಕ, ಯೆಹೋವನು ದೃಢಪಡಿಸಿದ್ದೇನೆಂದರೆ, "ಇಗೋ, ನಾನು ನಿಮ್ಮೊಳಗೆ ಶ್ವಾಸವನ್ನು ಹೊಗಿಸುವೆನು; ನೀವು ಬದುಕುವಿರಿ" (ಯೆಹೆಜ್ಕೇಲ 37:5). ದೇವರು ಪ್ರವಾದಿಗೆ ಹೀಗೆ ಹೇಳಿದನು, "ನರಪುತ್ರನೇ, ನೀನು ಶ್ವಾಸಕ್ಕೆ *[ರೂವಾಕ]* ನುಡಿ, ನುಡಿ; ಶ್ವಾಸವೇ, ಕರ್ತನಾದ ಯೆಹೋವನು ಇಂತೆನ್ನುತ್ತಾನೆ - ... ಬೀಸಿ ಹತಶರೀರಗಳು ಬದುಕುವಂತೆ ಅವುಗಳ ಮೇಲೆ ಸುಳಿ ಎಂಬದಾಗಿ ಶ್ವಾಸಕ್ಕೆ ನುಡಿ" (ಯೆಹೆಜ್ಕೇಲ 37:9). ದೇವರು ನಿರ್ದೇಶಿಸಿದಂತೆಯೇ ಯೆಹೆಜ್ಕೇಲನು ಮಾಡಿದನು; ಮತ್ತು ಆತನು ಪ್ರವಾದಿಸುತ್ತಿದ್ದಂತೆ, "ಇಗೋ, ಶ್ವಾಸವು ಅವುಗಳಲ್ಲಿ ಹೊಕ್ಕಿತು, ಬದುಕಿದವು, ಕಾಲೂರಿ ನಿಂತವು ..." (ಯೆಹೆಜ್ಕೇಲ 37:10).

ಈ ಚರಿತ್ರೆಯಲ್ಲಿ, ಬಾಬೆಲವು ಇಸ್ರಾಯೇಲಿನ ಸಮಾಧಿಯನ್ನು ಪ್ರತಿನಿಧಿಸುವದಾಗಿದೆ, ಮತ್ತು ಸೆರೆಯಾಳುಗಳು ಒಣಗಿ, ನಿರ್ಜೀವವಾಗಿ ಯಾವ ನಿರೀಕ್ಷೆಯೂ ಇಲ್ಲದೆ ಒಂದು ಕಣಿವೆಯಲ್ಲಿ ಬಿದ್ದಿರುವ ಶವಗಳಂತೆ ಇದ್ದರು. ಯೆಹೆಜ್ಕೇಲನು ಅವರಿಗೆ ನಿರೀಕ್ಷೆಯ ಮಾತುಗಳನ್ನು ನುಡಿದನು, ಅದು ಒಂದು ಆತ್ಮೀಕ ಪುನರುತ್ಥಾನವನ್ನೊಳಗೊಂಡಿತ್ತು ಮತ್ತು ಅವರು ಯಾವ ದೇಶದಿಂದ ಸೆರೆಯಾಳಾಗಿ ಕರೆದುಕೊಂಡು ಬರಲ್ಪಟ್ಟಿದ್ದರೋ ಆ ದೇಶಕ್ಕೆ ಹಿಂದಿರುಗುವದು ಸೇರಿತ್ತು. ಅವರು ಈ ಸಂದೇಶವನ್ನು ಪಡೆದುಕೊಂಡ ಹಾಗೆ, ದೇವರ ಶ್ವಾಸವು *(ರೂವಾಕ)* ಅವರೊಳಗೆ ಪ್ರವೇಶಿಸಿತು ಮತ್ತು ಅವರಿಗೆ ಜೀವವನ್ನುಂಟು ಮಾಡಿತು. ಯೆಹೆಜ್ಕೇಲ 37:1-10 ಮತ್ತು ಆದಿಕಾಂಡ 2:7ರ ನಡುವೆ ಸಮಾನಾರ್ಥಕತೆಯು ಇರುವದು ಸ್ಪಷ್ಟವಾಗಿ ತಿಳಿಯುತ್ತದೆ, ಆದರೆ "ಶ್ವಾಸ" ಎಂದು ಮೇಲಿನ ವಾಕ್ಯಭಾಗಗಳೊಳಗೆ ಅನುವಾದಿಸಲ್ಪಟ್ಟಿರುವ *ರೂವಾಕ,* ಸನ್ನಿವೇಶಕ್ಕಗುಣಗುಣವಾಗಿ "ಆತ್ಮ" ಅಥವಾ "ಗಾಳಿ" ಎಂದು ಸಹ ಅರ್ಥವನ್ನು ಕೊಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವಾಗ ಅದು ಮತ್ತಷ್ಟು ಬಲಗೊಳ್ಳುತ್ತದೆ. ದೇವರ ಆತ್ಮನು (ಶ್ವಾಸ) ಆತನ ಮೌಖಿಕ ವಾಕ್ಯದೊಂದಿಗೆ ಸಂಬಂಧ ಹೊಂದಿರುವದು ಸೆರೆವಾಸದಿಂದ ಇಸ್ರಾಯೇಲ್ಯರಿಗಾದ ಆತ್ಮೀಕ ಪುನರುತ್ಥಾನದ ಕುರಿತಾಗಿ ವಾಕ್ಯಭಾಗವು ಮಾಡುವ ಮುಕ್ತಾಯದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ದೇವರು ಹೀಗೆ ಹೇಳಿದನು, "ನಾನು ನನ್ನ ಶ್ವಾಸವನ್ನು *[ರೂವಾಕ]* ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಿಸುವೆನು; ಆಗ ಯೆಹೋವನಾದ ನಾನೇ ಇದನ್ನು *ನುಡಿದು* ನಡಿಸಿದ್ದೇನೆ ಎಂದು ತಿಳಿದುಕೊಳ್ಳುವಿರಿ; ಇದು ಯೆಹೋವನ ಸಂಕಲ್ಪ" (ಯೆಹೆಜ್ಕೇಲ 37:14; ಒತ್ತಿ ಹೇಳಿದ್ದು ನನ್ನದು).

ಆತ್ಮನು ಮತ್ತು ದೇವರ ಮೌಖಿಕ ವಾಕ್ಯದ ನಡುವಿನ ನಿಕಟ ಸಂಬಂಧವು ಆದಿಕಾಂಡದ ಮೊದಲ ಎರಡು ಅಧ್ಯಾಯಗಳಲ್ಲಿ ಬಹಳ ಸ್ಪಷ್ಟವಾಗಿರುತ್ತದೆ. 1:1-3ರಲ್ಲಿ, ದೇವರಾತ್ಮನು (*ರೂವಾಕ,* "ಶ್ವಾಸ" ಅಥವಾ "ಗಾಳಿ") ಆದಿಸಾಗರದ (ಜಲಸಮೂಹ) ಕತ್ತಲೆಯ ಮೇಲೆ ಚಲಿಸುತ್ತಿತ್ತು. ದೇವರು ನುಡಿದಾಗ, ಆಕಾರವಿಲ್ಲದೆಯೂ ಜೀವಿಲ್ಲದೆಯೂ ಇದ್ದಂಥದ್ದು ಆಕಾರ ಪಡೆಯುವದಕ್ಕೆ ಆರಂಭಿಸಿತ್ತು. ಆತನು ಮಾತಾಡುವದನ್ನು ಮುಂದುವರೆಸಿದಂತೆ ಜೀವವು

ಚಿಗುರುವದಕ್ಕೆ ಆರಂಭಿಸಿತ್ತು. ಅಂತಿಮವಾಗಿ, ಸೃಷ್ಟಿಯ ಸರ್ವೋಚ್ಚತೆಯಲ್ಲಿ, ದೇವರು ಪುನಃ ನುಡಿದನು ಮತ್ತು "ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ" ಎಂದು ಹೇಳಿದನು (1:26). ನಾವು ಇದನ್ನು 2:7ರೊಂದಿಗೆ ಜೋಡನೆ ಮಾಡುವದಾದರೆ, ದೇವರ ಮೌಖಿಕ ಮಾತು (1:26) ಮಾನವನು ಒಬ್ಬ ಜೀವಿಸುವ ಪ್ರಾಣಿಯಾಗುವಂತೆ ಆತನ ಮೂಗಿನಲ್ಲಿ ಊದಲಾದ ದೇವರ ಶ್ವಾಸವನ್ನು *(ನೆಶಮಾಹ)* ಒಳಗೊಂಡಿತ್ತು.

"ಊದಿದನು" ಎಂಬುದರ ನಿಕಟತೆಯು "ಸ್ನೇಹಯುತವಾದಷ್ಟು ವೈಯಕ್ತಿಕ, ಒಂದು ಮುದ್ದಿನ ಮುಖಾಮುಖಿಯಾದ ನಿಕಟತೆ ಮತ್ತು ಇದೊಂದು ಕೊಡುವ ಮಾತ್ರವಲ್ಲದೆ ರೂಪಿಸುವ ಕ್ರಿಯೆಯಾಗಿತ್ತೆಂಬುದು ಅದರ ಮಹತ್ವಪೂರ್ಣತೆಯಾಗಿದೆ; ಮತ್ತು ಅದರಲ್ಲಿ ತನ್ನನ್ನು-ಅರ್ಪಿಸುವದು ಆಗಿದೆ."[15] ಇದು ಯೇಸುವಿನ ಕ್ರಿಯೆಯೊಂದರಲ್ಲಿ ಸಹ ಹುಟ್ಟಿಕೊಂಡಿತ್ತು, ಆತನು ತನ್ನ ಪುನರುತ್ಥಾನದ ಬಳಿಕ ಅಪೊಸ್ತಲರಿಗೆ ಕಾಣಿಸಿಕೊಂಡ ವೇಳೆ ಸಂಭವಿಸಿತ್ತು. ಯೋಹಾನ 20:22 ಹೀಗೆ ಹೇಳುತ್ತದೆ, "ಅವರ ಮೇಲೆ ಊದಿ ಅವರಿಗೆ - ಪವಿತ್ರಾತ್ಮವರವನ್ನು ತಕ್ಕೊಳ್ಳಿರಿ" ಎಂದನು. ಪುನರುತ್ಥಾನಗೊಂಡ ಕರ್ತನ ಶ್ವಾಸವು ಒಂದು ಹೊಸ ಸಮುದಾಯದ (ಒಂದು ಹೊಸ ಸೃಷ್ಟಿಯ) - ಕ್ರಿಸ್ತನ ಆತ್ಮೀ ದೇಹದ - ಕೇಂದ್ರಬಿಂದು ಆಗಲಿದ್ದ ಶಿಷ್ಯರ ಸಮೂಹದೊಳಗೆ ಹೊಸ ಜೀವ ಮತ್ತು ನಿರೀಕ್ಷೆಯನ್ನು ತುಂಬಿತ್ತು.

2:7ರಲ್ಲಿನ ಮಾತು **ಮನುಷ್ಯನು ಬದುಕುವ ಪ್ರಾಣಿಯಾದನು** (נֶפֶשׁ חַיָּה, *ನೆಪೆಶ್ ಚಯ್ಯಾಹ)* ಎಂಬುದನ್ನು ದೃಢಪಡಿಸುವದಾಗಿದ್ದು, ಅದು "ಮಾನವನು ಒಂದು ಜೀವಿಸುವ ಆತ್ಮನಾದನು" (KJV) ಎಂಬ ಅನುವಾದದ ಕಾರಣದಿಂದಾಗಿ ಅನೇಕ ಸಾರಿ ಅಪಾರ್ಥಕ್ಕೊಳಗಾಗಿರುತ್ತದೆ. ಕೆಲವರು ಅಭಿಪ್ರಾಯ ಪಡುವದೇನೆಂದರೆ ಈ ಹೇಳಿಕೆಯು ಮರಣದ ನಂತರವೂ ಬದುಕುವಂತಹ ಮಾನವ ನಿರ್ಲಯತ್ವದ ಭಾಗವನ್ನು ಸೂಚಿಸುತ್ತದೆ, ಅದು ಪ್ರಾಣಿಗಳಿಗಿಂತ ಭಿನ್ನವಾದದ್ದು. ಸಮಸ್ಯೆಯು ಏನೆಂದರೆ *ನೆಪೆಶ್ ಚಯ್ಯಾಹ* ಎಂಬುದು ಹಳೆಯ ಒಡಂಬಡಿಕೆಯಲ್ಲಿ ಮಾನವನಿಗೆ ವಿಶಿಷ್ಟವಾಗಿರುವದಿಲ್ಲ. ಅದು 1:20, 21ರಲ್ಲಿ ಮೀನುಗಳಿಗೆ ಮತ್ತು ಸಕಲ ವಿಧವಾದ ಸಮುದ್ರ ಜೀವಿಗಳಿಗೆ; 1:24ರಲ್ಲಿ ಪ್ರಾಣಿಗಳಿಗೆ; ಮಾತ್ರವಲ್ಲದೆ 1:30ರಲ್ಲಿ ಮೃಗಗಳು, ಪಕ್ಷಿಗಳು, ಮತ್ತು ಇತರ ಪ್ರಾಣಿಗಳಿಗೆ ಸಹ ಬಳಸಲ್ಪಟ್ಟಿದೆ. ಮಾನವನು ಪ್ರಾಣಿಗಳಿಗೆ ತದ್ವಿರುದ್ಧವಾಗಿ ಒಂದು ನಿರ್ಲಯವಾದ "ಆತ್ಮ"ವನ್ನು[16] ಹೊಂದಿದ್ದಾನೆಂದು ಈ ವಾಕ್ಯಭಾಗವು ಹೇಳುತ್ತಿಲ್ಲ. ಅಂಥಹ ಬೋಧನೆಯು ಯೇಸು ಕ್ರಿಸ್ತನ ಸಂಪೂರ್ಣ ಪ್ರಕಟನೆಗೋಸ್ಕರ ಕಾದುಕೊಂಡಿತ್ತು, ಆತನು "ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು" (2 ತಿಮೊಥೆ 1:10). ಆತನು ತನ್ನ ಶಿಷ್ಯರಿಗೆ ನಿರ್ದಿಷ್ಟವಾಗಿ "ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ" ಎಂದು ಬುದ್ಧಿವಾದ ನೀಡಿದನು (ಮತ್ತಾಯ 10:28). ಆದಿಕಾಂಡ 2:7ರ ಮುಖ್ಯ ವಿಷಯವು ಆತ್ಮನ ನಿರ್ಲಯತ್ವದ ಕುರಿತಾಗಿ ಅಲ್ಲವಾದಾಗ್ಯೂ, ಪುಸ್ತಕವು ಖಂಡಿತವಾಗಿಯೂ ಅದನ್ನು ಕಲಿಸುತ್ತದೆ, ಮನುಷ್ಯ ಮತ್ತು ಪ್ರಾಣಿಗಳು ಎರಡೂ "ಬದುಕುವ ಪ್ರಾಣಿ[ಗಳು]" ಆಗಿದ್ದಾರಾದರೂ, ಮನುಷ್ಯನು ಮಾತ್ರವೇ ದೇವರೊಂದಿಗೆ ಮುಖಾಮುಖಿಯಾದ ಆಪ್ತ ಸಂಬಂಧವನ್ನು ಹೊಂದಿದವನಾಗಿದ್ದಾನೆ ಯಾಕೆಂದರೆ ಆತನೊಬ್ಬನೇ ದೇವರ ಸ್ವರೂಪದಲ್ಲಿ ರೂಪಿಸಲ್ಪಟ್ಟಿದ್ದಾನೆ (1:26, 27).

# ತೋಟದಲ್ಲಿ ಮನುಷ್ಯನ ಜೀವನ (2:8-17)

2ನೇ ಅಧ್ಯಾಯವು ಏದೆನ್ ತೋಟದ ಬಣ್ಣನೆಯೊಂದಿಗೆ ಮುಂದುವರೆಯುತ್ತದೆ. ದೇವರು ಮಾನವನಿಗೆ ಭೂಮಿಯ ಮೇಲಿನ ಆತನ ಮೊದಲ ಮನೆಗೋಸ್ಕರ ಸಕಲ ಏರ್ಪಾಡುಗಳನ್ನು ಮಾಡಿದನು ಎಂಬುದನ್ನು ಒತ್ತಿ ಹೇಳುವದಕ್ಕೋಸ್ಕರ, ಲೇಖಕನು ಸಮೃದ್ಧವಾಗಿ ನೀರು ಹರಿಸಲ್ಪಟ್ಟಿರುವ, ಗಿಡಗಳು ಹಾಗೂ ಎಲ್ಲಾ ವಿಧವಾದ ಮರಗಳಿಂದ ತುಂಬಿರುವಂಥ ತೋಟವೆಂದು ಮುಂದಿಡುತ್ತಾನೆ.

### ಏದೆನ್ ತೋಟ (2:8, 9)

**8ಇದಲ್ಲದೆ ಯೆಹೋವದೇವರು ಮೂಡಣ ದಿಕ್ಕಿನಲ್ಲಿರುವ ಏದೆನ್ ಸೀಮೆಯಲ್ಲಿ ಒಂದು ಉದ್ಯಾನವನವನ್ನು ಮಾಡಿ ತಾನು ರೂಪಿಸಿದ ಮನುಷ್ಯನನ್ನು ಅದರಲ್ಲಿ ಇರಿಸಿದನು. 9ಮತ್ತು ಯೆಹೋವದೇವರು ನೋಟಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರದ ಮರಗಳನ್ನು ಆ ಭೂಮಿಯಲ್ಲಿ ಬೆಳೆಯ ಮಾಡಿದನು. ಅದಲ್ಲದೆ ಆ ವನಮಧ್ಯದಲ್ಲಿ ಜೀವದಾಯಕ ವೃಕ್ಷವನ್ನೂ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷವನ್ನೂ ಬೆಳೆಯಿಸಿದನು.**

**ವಚನ 8.** 2:7ನೇ ವಚನವು ಮನುಷ್ಯನ ಸೃಷ್ಟಿಯು ಗಿಡಮರಗಳ ಸೃಷ್ಟಿಗೆ ಮುಂಚೆ ಆಯಿತೆಂದು ಹೇಳುವದಾಗಿದೆ, ಮತ್ತು ಈ ವಾಕ್ಯವು 1ನೇ ಅಧ್ಯಾಯದಲ್ಲಿನ ಸೃಷ್ಟಿಯ ಚರಿತ್ರೆಗೆ ತದ್ವಿರುದ್ಧವಾಗಿರುತ್ತದೆ ಎಂಬುದರ ಕುರಿತು ವಾಗ್ವಾದ ಮಾಡಲಾಗಿರುತ್ತದೆ. ಅವುಗಳು ಪ್ರಸ್ತಾಪಿಸಲ್ಪಟ್ಟಿರುವ ಕ್ರಮವು ಹಿಂದಿನ ಅಧ್ಯಾಯದಲ್ಲಿನ ಕ್ರಮಕ್ಕೆ ಹಿಮ್ಮೊಗವಾಗಿರುತ್ತದೆಂಬುದು ಸತ್ಯವಾಗಿದೆಯಾದರೂ, 2:8, 9 ವಚನಗಳು ಭೂಮಿಯ ಮೇಲಿನ ಮೊದಲ ಗಿಡಗಳ ಸೃಷ್ಟಿಯನ್ನು ಉಲ್ಲೇಖಿಸುವದಾಗಿರುವದಿಲ್ಲ. ಬದಲಾಗಿ, ಈ ವಚನಗಳು ಮಾನವನಿಗೆ ಪ್ರಥಮ ಭೂನಿವಾಸ ಆಗಲಿದ್ದ ಒಂದು ವಿಶೇಷ ಸ್ಥಳವನ್ನು ದೇವರು ಸಿದ್ಧಗೊಳಿಸುವ ಕುರಿತಾಗಿ ಮಾತಾಡುತ್ತವೆ. ಮಾನವನ ಸೃಷ್ಟಿಯಲ್ಲಿ **ದೇವರು** ಮನುಷ್ಯನನ್ನು ನೆಲದ ಮಣ್ಣಿನಿಂದ ರೂಪಿಸಿದಂಥ ಕುಂಬಾರನೆಂದು ಸಾಂಕೇತಿಕವಾಗಿ ಬಣ್ಣಿಸಲ್ಪಟ್ಟಿರುವ ಹಾಗೆ (2:7), ಇಲ್ಲಿ ಆತನು ಭೂಮಿಯ ಮೇಲೆ ಮಾನವನಿಗೆ ಒಂದು ನಿವಾಸವನ್ನು ಒದಗಿಸುವದಕ್ಕಾಗಿ ಬಹಳಷ್ಟು ಕಾಳಜಿಯನ್ನು ವಹಿಸಿದ ಉದ್ಯಾನ ಕುಶಲಿಯಾಗಿ (ನೇಡುವವನಾಗಿ) ಬಣ್ಣಿಸಲ್ಪಟ್ಟಿರುತ್ತಾನೆ. ಆತನು **ಮೂಡಣ ದಿಕ್ಕಿನಲ್ಲಿರುವ ಏದೆನ್ ಸೀಮೆಯಲ್ಲಿ ಒಂದು ಉದ್ಯಾನವನವನ್ನು ಮಾಡಿ** ಮಾನವನಿಗೋಸ್ಕರ ಒಂದು ಪರಿಪೂರ್ಣವಾದ ಪರಿಸರವನ್ನು ಒದಗಿಸಿ ಕೊಟ್ಟನು.

"ತೋಟ" ಎಂಬುದಕ್ಕಿರುವ ಇಬ್ರಿಯ ಪದವು (גָּן, *ಗಾನ್)* ಕೃಷಿಗೋಸ್ಕರ ಮುಚ್ಚಲ್ಪಟ್ಟಿರುವ ಭೂ ಪ್ರದೇಶವನ್ನು ಸೂಚಿಸುತ್ತದೆ, ಮತ್ತು ಅದರ ರಕ್ಷಣೆಗೋಸ್ಕರ ಒಂದು ಗೋಡೆ ಅಥವಾ ಬೇಲಿ ಹಾಕಲ್ಪಟ್ಟಿರುತ್ತದೆ. ಇದು ಹೂಗಳನ್ನು, ಹಣ್ಣುಗಳನ್ನು, ಮತ್ತು ವಿವಿಧ ತರಕಾರಿಗಳನ್ನು ಬೆಳೆಸಲ್ಪಡುವ ಸ್ಥಳವಾಗಿರುತ್ತಿತ್ತು.[17] ದೇವರು ಈ ತೋಟವನ್ನು "ಮೂಡಣದಿಕ್ಕಿ ['ನಲ್ಲಿ'; NIV; NRSV]" ನಿರ್ಮಿಸಿದನು ಎಂಬ ವಾಸ್ತವಾಂಶದ ಅರ್ಥವು, ಮೂಲ ವಾಚಕರ ದೃಷ್ಟಿಕೋನದಿಂದ ನೋಡುವದಾದರೆ, ಅದು ಇಸ್ರಾಯೇಲ್ಯರ ದೇಶದ ಮೂಡಣ ದಿಕ್ಕು ಆಗಿತ್ತು ಎಂಬುದೆ. "ಏದೆನ್ ಸೀಮೆಯಲ್ಲಿ" ಎಂಬುದು ಸೂಚಿಸುವದೇನೆಂದರೆ ದೇವರು ತೋಟವನ್ನು ಇಟ್ಟ ಕ್ಷೇತ್ರವು ಮೂಲತಃ "ಏದೆನ್" ಎಂದು ಕರೆಯಲ್ಪಡುತ್ತಿತ್ತು, ಅದು ಬಹುಶಃ ಮಹಾ

ಮೆಸಪೋತಾಮ್ಯದ ಕಣಿವೆಯಲ್ಲಿ ಇದ್ದಿರಬಹುದು.

ಅರಂಭಿಕ ಮಧ್ಯಪ್ರಾಚ್ಯದ ಅಧ್ಯಯನಗಳು ಅಭಿಪ್ರಾಯ ಪಟ್ಟದ್ದೇನೆಂಧರೆ "ಏದೆನ್" ಎಂಬುದಕ್ಕಿರುವ ಇಬ್ರಿಯ ಪದವು עֵדֶן *('ಏದೆನ್')* ಎಂಬುದು, ಇದು "ಸಮಭೂಮಿ" ಅಥವಾ "ಹುಲ್ಲುಗಾವಲು" ಎಂಬ ಅರ್ಥವಿರುವಂಥ ಸುಮೆರಿಯನ್ನ ಭಾಷೆಯ ಪದವೊಂದರಿಂದ ಬಂದಿರಬಹುದಾಗಿದೆ; ಹೇಗೂ, ಬಹಳ ಇತ್ತೀಚಿನ ದತ್ತಾಂಶದ ಪ್ರಕಾರವಾಗಿ ಅದು "ವಿಲಾಸ, ಸಮೃದ್ಧಿ, ಸಂಭ್ರಮ, ಅಥವಾ ಸೊಂಪಾಗಿರುವಿಕೆ"[18] ಇವುಗಳಿಗೆ ಸಂಬಂಧಿಸಿದ ಒಂದು ಪಶ್ಚಿಮ ಯೆಹೂದಿ ಭಾಷಾ ಕುಲವೊಂದರ ಕಡೆಗೆ ಬೆರಳು ಮಾಡುತ್ತದೆ. LXXನ ಅನುವಾದಕರು ಈ ಪದವನ್ನು ಇಬ್ರಿಯ ಮೂಲವಾದ עֵדֶן *(ಅದಾನ)* ಎಂಬುದರೊಂದಿಗೆ ಜೋಡಿಸಿದರು, ಇದರ ಅರ್ಥವು "ಸುಖಾನುಭವ ಅಥವಾ ಸಂಭ್ರಮ" ಎಂದಾಗಿದೆ. ಅವರು ಏದೆನ್ ಎಂಬುದನ್ನು ಪ್ರಥಮ **ಮನುಷ್ಯನನ್ನು ಇರಿಸಿದ** "ಸಂಭ್ರಮದ ತೋಟ" ಎಂಬುದಾಗಿ ಅರ್ಥಮಾಡಿಕೊಂಡರು. "ತೋಟ" ಎಂಬುದಕ್ಕಿರುವ ಇಬ್ರಿಯ ಪದಕ್ಕೆ ಸಮಾನವಾದ ಗ್ರೀಕ್ ಪದವು παράδεισος *(ಪಾರಾಡೆಯಿಸೊಸ)* ಎಂದಾಗಿತ್ತು, ಮತ್ತು ಅದು ಅಂತಿಮವಾಗಿ ಆದಿಕಾಂಡದಲ್ಲಿರುವ ಅಕ್ಷರಶಃ ಏದೆನ್ ತೋಟವನ್ನು ಹೊಸ ಒಡಂಬಡಿಕೆಯಲ್ಲಿರುವ ಪರಲೋಕದ ಪರದೈಸಿನೊಂದಿಗೆ ಸಾಂಕೇತಿಕವಾಗಿ ಸಂಬಂಧಗೊಳಿಸುವಂತೆ ನಡಿಸಿತ್ತು (ಲೂಕ 23:43; 2 ಕೊರಿಂಥ 12:4; ಪ್ರಕಟನೆ 2:7).[19]

**ವಚನ 9.** ತೋಟದಲ್ಲಿ ಸಕಲ ವಿಧವಾದ **ಮರ**[ಗಳನ್ನು] **ಬೆಳೆಯ** ಮಾಡುವ ಮೂಲಕ **ದೇವರು** ಮನುಷ್ಯನಿಗೋಸ್ಕರ ಸಮೃದ್ಧಿಯಾಗಿ ಅಗತ್ಯತೆಗಳನ್ನು ಒದಗಿಸಿ ಕೊಟ್ಟನು. ಅವುಗಳಲ್ಲಿ ಬಹುಪಾಲು **ನೋಟಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ** ಇದ್ದವು, ಆದರೆ ಆತನು ಆ **ವನಮಧ್ಯದಲ್ಲಿ ಜೀವದಾಯಕ ವೃಕ್ಷವನ್ನೂ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷವನ್ನೂ** ಕುರಿತು ವಿಶೇಷವಾಗಿ ಪ್ರಸ್ತಾಪಿಸಿದನು. ಎರಡನೆಯ ಮರವು 3:3ರಲ್ಲಿ ಸಹ ತೋಟದ "ಮಧ್ಯದಲ್ಲಿ" ಇರುವದಾಗಿ ಪ್ರಸ್ತಾಪಿಸಲ್ಪಟ್ಟಿರುತ್ತದೆ.

ಮೊದಲನೆಯ ಮರವು "ಜೀವವೃಕ್ಷ" ಎಂದು ಗುರುತಿಸಲ್ಪಟ್ಟಿದೆ, ಅದು ಆದಿಕಾಂಡ ಪುಸ್ತಕದೊಳಗೆ ಕೇವಲ 2:9 ಮತ್ತು 3:22, 24ರಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಅದು ಮಾನವನು ಹಣ್ಣನ್ನು ಕಿತ್ತುಕೊಳ್ಳಲು ಸಾಧ್ಯವಿದ್ದಂಥ ನಿಜವಾದ ಒಂದು ಮರವಾಗಿತ್ತಾದಾದರೂ (3:22), ಅದು ದೇವರಿಂದ ಮಾತ್ರವೇ ಬರಬಲ್ಲದಾದ ಶಾಶ್ವತವಾದ ಜೀವವನ್ನು ಪ್ರತಿನಿಧಿಸುವಂತೆ ಕಾಣಿಸುತ್ತದೆ. ಆದದರಿಂದ, ಪುರುಷ ಮತ್ತು ಸ್ತ್ರೀಯರು ಪಾಪ ಮಾಡಿದಾಗ, ಅವರು ತಮ್ಮ ಸೃಷ್ಟಿಕರ್ತನಿಗೆ ಅವಿಧೇಯರಾಗಿ ಜೀವಿಸುವ ವೇಳೆ ಆತನಿಂದ ಬರುವಂತ ನಿತ್ಯವಾದ ಜೀವದ ವರವನ್ನು ಅನುಭವಿಸುವದಕ್ಕೆ ಅಶಕ್ತರಾದ ಕಾರಣ ಅವರನ್ನು ತೋಟದಿಂದ ಹೊರಗಿಡಲಾಯಿತು (3:24).

"ಜೀವವೃಕ್ಷ" ಎಂಬ ಪದಗುಚ್ಛವು ಜ್ಞಾನೋಕ್ತಿಗಳಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ (ಜ್ಞಾನೋಕ್ತಿ 3:18; 11:30; 13:12; 15:4); ಆದರೆ ಈ ಎಲ್ಲಾ ವಾಕ್ಯಭಾಗಗಳಲ್ಲಿ, ಅದು ಜ್ಞಾನ, ನೀತಿಯ ಜೀವನ, ನಿರೀಕ್ಷೆಯು ನೆರವೇರಲ್ಪಟ್ಟದ್ದನ್ನು, ಮತ್ತು ತನ್ನ ನಾಲಿಗೆಯಿಂದ ಸುಖಗೊಳಿಸುವ ಮಾತುಗಳನ್ನಾಡುವವನನ್ನು ಪ್ರತಿನಿಧಿಸುತ್ತದೆ. ಸರಳವಾಗಿ ಹೇಳುವದಾದರೆ, ಒಂದು "ಜೀವವೃಕ್ಷ"ವು ನಿಜವಾದ "ಜ್ಞಾನ" ಉಳ್ಳವನಾಗಿ "ಯೆಹೋವನ ಭಯ" ತೋರಿಸುವ ವ್ಯಕ್ತಿಯಲ್ಲಿರುವ ದೇವರ ಜೀವಕ್ಕೆ ಸಂಕೇತವಾಗಿರುತ್ತದೆ (ಜ್ಞಾನೋಕ್ತಿ 3:18; 9:10). "ಜೀವವೃಕ್ಷ"ದ (ಜ್ಞಾನ) "ಹಣ್ಣು" ಸಂತೈಸುವ, ಚೈತನ್ಯಗೊಳಿಸುವ ಮಾತುಗಳ ಮೂಲಕ ಬೇರೆಯವರಿಗೆ ಆಶೀರ್ವಾದಕರವಾಗುವ, ಮತ್ತು ಒಬ್ಬ "ಇಷ್ಟಾರ್ಥಗಳನ್ನು" (ನಿರೀಕ್ಷೆಗಳು)

ನೆರವೇರಿಸುವ (ಜ್ಞಾನೋಕ್ತಿ 13:12; 15:4) "ನೀತಿಯುಳ್ಳ" ಜೀವಿತವನ್ನು (ಜ್ಞಾನೋಕ್ತಿ 11:30) ತೋರ್ಪಡಿಸುವದಾಗಿತ್ತು. ಹೊಸ ಒಡಂಬಡಿಕೆಯಲ್ಲಿ, ಒಂದು "ಜೀವವೃಕ್ಷ"ವು ದೇವರು ವಿಮೋಚಿಸಲ್ಪಟ್ಟವರಿಗೆ ನಿತ್ಯಕಾಲಕ್ಕೂ ಪರಲೋಕದಲ್ಲಿ ಒದಗಿಸುವಂಥ ಸಮೃದ್ಧವಾದ ಜೀವಿತವನ್ನು (ಒಂದು ಏದೆನ್ ತೋಟದ ಅಸ್ತಿತ್ವವನ್ನು) ಪ್ರತಿನಿಧಿಸುತ್ತದೆ (ಪ್ರಕಟನೆ 2:7; 22:2, 14, 19).

ಎರಡನೆಯ ಮರವು "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷ" ಎಂದು ಗುರುತಿಸಲ್ಪಟ್ಟಿದೆ. ಈ ಮರದ ಅರ್ಥವೇನು? ಹಲವಾರು ಅರ್ಥನಿರೂಪಣೆಗಳನ್ನು ಮುಂದಿಡಲಾಗಿರುತ್ತದೆ.

1. ಒಂದು ಅಭಿಪ್ರಾಯವು ಹೇಳುವದೇನೆಂದರೆ ಪ್ರಥಮ ದಂಪತಿಗಳು ಗಳಿಸಿಕೊಂಡ ಜ್ಞಾನವು ಲೈಂಗಿಕತೆಗೆ ಸಂಬಂಧಿಸಿದ್ದಾಗಿತ್ತು ಯಾಕೆಂದರೆ ಅವರು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದಾಗ ಪ್ರತಿಕ್ರಿಯೆಯು ಏನಾಗಿತ್ತೆಂದರೆ "ತಾವು ಬೆತ್ತಲೆಯಾಗಿದ್ದೇವೆಂದು ತಿಳಿದರು" (3:7). ಪುರುಷ ಮತ್ತು ಸ್ತ್ರೀಯರು ಪಾಪ ಮಾಡುವದಕ್ಕೆ ಮುಂಚೆ, ಅವರು ಬೆತ್ತಲೆಯಾಗಿದ್ದರು ಮತ್ತು ಅದಕ್ಕೆ ನಾಚಿಕೆಯಿಲ್ಲದವರಾಗಿದ್ದರು; ಆದರೆ ಅವರ ಅಪರಾಧದ ಬಳಿಕ, ಅವರಿಗೆ ನಾಚಿಕೆ ಅನ್ನಿಸಿತು. ಕೆಲವರಿಗಾದರೋ, ಇದು ಸೂಚಿಸುವಂತೆ ತೋರುವದೇನೆಂದರೆ ಒಳ್ಳೇದು ಮತ್ತು ಕೆಟ್ಟದ್ದರ ಅರುಹು ಅಂದರೆ ಅವರಿಗೆ ತಮ್ಮ ಲೈಂಗಿಕ ವ್ಯತ್ಯಾಸಗಳ ಪ್ರಜ್ಞೆಯು ಉಂಟಾಗಿತ್ತು ಎಂಬುದೆ.[20]

ಹೇಗೂ, ಕೆಲವೊಂದು ಕಾರಣಾಂಶಗಳು ಈ ಅಭಿಪ್ರಾಯವನ್ನು ಸಮರ್ಥನೀಯವಲ್ಲದ್ದಾಗಿ ಮಾಡುತ್ತವೆ. ಮೊದಲನೆಯದಾಗಿ, ಆದಾಮ ಮತ್ತು ಹವ್ವಳು ಪಡೆದುಕೊಂಡ ಜ್ಞಾನವು ಲೈಂಗಿಕ ಅರುಹು ಆಗಿತ್ತು ಎಂಬ ಅಭಿಪ್ರಾಯದಲ್ಲಿ ಸಾಮಂಜಸ್ಯತೆಯಿಂದಿರಬೇಕಾದರೆ, ಒಬ್ಬನು ಲೈಂಗಿಕತೆಯನ್ನು ದೇವರಿಗೆ ಅನ್ವಯಿಸತಕ್ಕದ್ದು. ಆದಾಮನು ಪಾಪ ಮಾಡಿದ ಬಳಿಕ, ಯೆಹೋವನು ಹೀಗಂದನು, "ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು *ನಮ್ಮಲ್ಲಿ ಒಬ್ಬನಂತಾದನಲ್ಲಾ*" (3:22; ಒತ್ತಿ ಹೇಳಿದ್ದು ನನ್ನದು). ಪ್ರಾಚೀನ ಜಗತ್ತು ಅವರ ಅನ್ಯಧರ್ಮಿಯ ದೇವರುಗಳು ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರೆಂದು ಸಾಮಾನ್ಯವಾದ ನಂಬಿಕೆಯನ್ನು ಹೊಂದಿತ್ತು, ಮತ್ತು ಫಲವತ್ತತೆಯ ಪಾಷಂಡ ಮತಗಳು ಆರಾಧಕರನ್ನು ಅವುಗಳ ಅನ್ಯಧರ್ಮಿಯ ದೇವಾಲಯಗಳಲ್ಲಿರುತ್ತಿದ್ದ ಪವಿತ್ರ ವೇಶ್ಯೆಯರೊಂಧಿಗೆ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತಿದ್ದವು. ಹಾಗಿದ್ದರೂ, ಇದು "ಯೆಹೋವದೇವರು" ಒಬ್ಬ ಶಾರೀರಿಕ ಜೀವಿಯಾಗಿದ್ದು ಮನುಷ್ಯನ ರೀತಿಯಲ್ಲಿ ವ್ಯಕ್ತಪಡಿಸುವ ಅಗತ್ಯವಿರುವಂಥ ಒಂದು ಲೈಂಗಿಕ ಸ್ವಭಾವವನ್ನು ಹೊಂದಿರುವವನು ಎಂಬ ಅರ್ಥ ಬರುವಂತೆ ವಾಕ್ಯವನ್ನು ಹಿಸುಕಿ ಹೊರತೆಗೆದ ಅರ್ಥನಿರೂಪಣೆಯಾಗಿರುತ್ತದೆ.[21] ಇಂತಹ ಒಂದು ಭಾವನೆಯು ಬೈಬಲಿನಿಂದ ಸಂಪೂರ್ಣ ಅನುಪಸ್ಥಿತವಾಗಿರುತ್ತದೆ ಮತ್ತು ಅದು ದೇವರು ಮತ್ತು ಮನುಷ್ಯ ಇಬ್ಬರಿಗೂ ಕೀಳುತನವಾಗಿರುತ್ತದೆ.

ಎರಡನೆಯದಾಗಿ, "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ" ಎಂಬ ಪದಗುಚ್ಛವು ಲೈಂಗಿಕತೆಯನ್ನು ಸೂಚಿಸಿದ್ದಾದರೆ, ಯಾರನ್ನು ತಾನು ಲೈಂಗಿಕ ಜೀವಿಗಳನ್ನಾಗಿ ನಿರ್ಮಿಸಿದ್ದನೋ ಆ ಪುರುಷ ಮತ್ತು ಸ್ತ್ರೀಯನ್ನು ಆತನು ಏಕೆ ನಿಷೇಧಿಸಲಿಲ್ಲ? ಆದಾಮ ಮತ್ತು ಹವ್ವಳು ಪಾಪ ಮಾಡುವದಕ್ಕೆ ಮುನ್ನ ಅವರಿಗೆ ದೇವರು ನೀಡಿದ್ದ ಆಜ್ಞೆಯು "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು" ಇರಿ ಎಂದಾಗಿತ್ತು (1:28).

ಇದು ಲೈಂಗಿಕತೆಯ ಒಂದಿಷ್ಟು ಜ್ಞಾನವನ್ನು ಸೂಚಿಸುತ್ತದೆ, ಅದೇ ರೀತಿಯಲ್ಲಿಯೇ ಒಬ್ಬ ಪುರುಷನು "ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು" (2:24) ಎಂಬುದು ಸಹ ಸೂಚಿಸುತ್ತದೆ. ಇದೆಲ್ಲವೂ ಆದಾಮ ಮತ್ತು ಹವ್ವಳರು ನಿಷೇಧಿತ ಹಣ್ಣನ್ನು ತಿನ್ನುವದಕ್ಕೆ ಮುನ್ನ ಲೈಂಗಿಕ ಸಂಭೋಗವನ್ನು ಹೊಂದಿದ್ದರೆಂಬುದನ್ನು ಸೂಚಿಸುತ್ತದೆ ಯಾಕೆಂದರೆ ದೇವರು ನಿಖರವಾಗಿ ಇದನ್ನೇ ಆಜ್ಞಾಪಿಸಿದ್ದನು.[22] ಅದು ಖಂಡಿತವಾಗಿಯೂ ಆತನು ನಿಷೇಧಿಸಿದ್ದ ಸಂಗತಿಯಾಗಿರಲಿಲ್ಲ.

2. ಇನ್ನೊಂದು ಅಭಿಪ್ರಾಯವು ಏನೆಂದರೆ "ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ" ಎಂಬ ಪದಗುಚ್ಛದ ಅರ್ಥವು ಪುರುಷ ಮತ್ತು ಸ್ತ್ರೀಯು ದೇವರ ಹಾಗೆ ಅಪಾರವಾದ ಜ್ಞಾನವನ್ನು, ಹೆಚ್ಚುಕಡಿಮೆ ಸರ್ವಜ್ಞಾನವನ್ನು (ಎಲ್ಲವನ್ನೂ ತಿಳಿದಿರುವದು) ಹೊಂದಲಿದ್ದರು. "ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ" (3:5) ಎಂದು ಸರ್ಪವು ಶೋಧನೆ ಮಾಡಿದ್ದು, ಬಹಳ ಮಟ್ಟಿಗೆ ಅದೇ ರೀತಿಯೇ ಅನ್ನಿಸುತ್ತದೆ. ಇದರ ಒಂದು ದೃಷ್ಟಾಂತವು ದಾವೀದನು ಅಬ್ಷಾಲೋಮನಿಂದ ಬೇರ್ಪಟ್ಟಿದ್ದರಲ್ಲಿ ಕಂಡು ಬರುತ್ತದೆ, ಆ ವೇಳೆ ಅಮ್ನೋನನ್ನು ಆತನು ಕೊಲೆ ಮಾಡಿದ್ದಾಗ್ಯೂ ತನ್ನ ಮಗನನ್ನು ಯೆರೂಸಲೇಮಿಗೆ ಹಿಂದಿರುಗುವಂತೆ ಅನುಮತಿ ನೀಡಬೇಕೆಂಬುದಾಗಿ ದಾವೀದನಿಗೆ ಬೇಡಿಕೊಳ್ಳುವಂತೆ ಯೋವಾಬನು ತೆಕೋವದ ಸ್ತ್ರೀಯನ್ನು ಕಳುಹಿಸಿದನು. ಬುದ್ಧಿವಂತ ಸ್ತ್ರೀಯು ದಾವೀದನು "ನ್ಯಾಯಾನ್ಯಾಯಗಳನ್ನು ಕಂಡುಹಿಡಿಯುವದರಲ್ಲಿ" ತನಗಿರುವ ಸಾಮರ್ಥ್ಯದೊಳಗೆ ಆತನು "ದೇವದೂತನಂತಿರುತ್ತಾನೆ" ಎಂದು ಪ್ರಶಂಸೆ ಮಾಡಿದಳು; ಹಲವು ವಚನಗಳ ನಂತರದಲ್ಲಿ, ಅರಸನು "ದೇವದೂತನಂಥ ಜ್ಞಾನಿಯು; ಅವನು ಭೂಲೋಕದಲ್ಲಿ ನಡೆಯುವದನ್ನೆಲ್ಲಾ ತಿಳುಕೊಳ್ಳುವನು" ಎಂದು ಆಕೆಯು ಹೇಳಿದಳು (2 ಸಮುವೇಲ 14:17, 20).

ಹೀಗಿದ್ದರೂ, ಈ ವಾಗ್ವಾದವು ಕನಿಷ್ಠ ಎರಡು ಕಾರಣಗಳಿಗಾಗಿ ಮನವೊಲಿಸುವದಕ್ಕೆ ವಿಫಲವಾಗುತ್ತದೆ. ಮೊದಲನೆಯದಾಗಿ, ತೆಕೋವದ ಸ್ತ್ರೀಯು ದಾವೀದನಿಗಿದ್ದ ಜ್ಞಾನವನ್ನು ಅತ್ಯಧಿಕಗೊಳಿಸಿ ಹೇಳುತ್ತಿದ್ದಳು, ಯಾಕೆಂದರೆ ಆತನಿಗೆ ಭೂಲೋಕದಲ್ಲಿ ನಡೆಯುವದೆಲ್ಲಾ ಗೊತ್ತಿರಲಿಲ್ಲ. ಎರಡನೆಯದಾಗಿ, ಬೈಬಲಿನ ಕಥೆಯ ಪ್ರಕಾರ, ಆದಾಮ ಮತ್ತು ಹವ್ವಳರು ಸಾರ್ವತ್ರಿಕ ಜ್ಞಾನವನ್ನು ಪಡೆದುಕೊಳ್ಳಲಿಲ್ಲ; ವಾಸ್ತವಿಕದಲ್ಲಿ, ಅವರಿಗೆ ದೇವರು, ಸರ್ಪ, ಅಥವಾ ಸ್ವತಃ ಜೀವನದ ಕುರಿತು ಅಷ್ಟಾಗಿ ಅರಿವು ಇಲ್ಲದವರಂತೆ ಕಂಡರು. ಅಪೊಸ್ತಲನಾದ ಪೌಲನು - ಸಾವಿರಾರು ವರ್ಷಗಳ ನಂತರದಲ್ಲಿ - ತನಗೆ "ಅಪೂರ್ಣವಾಗಿ" ತಿಳಿದದೆ ಎಂದು ಹೇಳಬಲ್ಲವನಾದರೆ (1 ಕೊರಿಂಥ 13:9), ಭೂಮಿಯ ಮೇಲೆ ಮಾನವರ ಯಾತ್ರೆಯ ಆರಂಭ ಕಾಲದಲ್ಲಿದ್ದ ಆದಾಮ ಮತ್ತು ಹವ್ವಳರ ವಿಷಯದಲ್ಲಿ ಇದನ್ನು ಇನ್ನೂ ಎಷ್ಟು ಅಧಿಕವಾಗಿ ಹೇಳಬಹುದಾಗಿದೆ!

3. ಮೂರನೆಯ ಅಭಿಪ್ರಾಯವೊಂದು ಏನೆಂದರೆ "ಒಳ್ಳೇದರ ಕೆಟ್ಟದ್ದರ ಅರುಹು ಹುಟ್ಟಿಸುವ" ಎಂಬ ಪದಗುಚ್ಛವು ಒಳ್ಳೇದರ ಮತ್ತು ಕೆಟ್ಟದ್ದರ ನಡುವೆ ವ್ಯತ್ಯಾಸವನ್ನು ಗುರುತಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ, ಅದು ಇಲ್ಲದೆ ವ್ಯಕ್ತಿಗಳು ಅವರ ಕ್ರಿಯೆಗಳಿಗೆ ಜವಾಬ್ದಾರರಾಗುವದಿಲ್ಲ. ಅರಣ್ಯದಲ್ಲಿ, ಇಸ್ರಾಯೇಲ್ಯರು ಅವರ ಅವಿಧೇಯತೆಯ ಕಾರಣದಿಂದ ಕಾನಾನ್ ದೇಶವನ್ನು ಪ್ರವೇಶಿಸುವದಿಲ್ಲವೆಂದು ದೇವರು ಹೇಳಿದನು; ಆದರೆ "ಒಳ್ಳೇದು ಕೆಟ್ಟದ್ದು ಅರಿಯದ" ಅವರ "ಮಕ್ಕಳು" ಒಂದು ದಿನ ಒಳ್ಳೇ ದೇಶವನ್ನು ಪ್ರವೇಶಿಸಿ ಅದನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತರಾಗುವರು ಎಂದನು (ಧರ್ಮೋಪದೇಶಕಾಂಡ 1:39). ಇಸ್ರಾಯೇಲ್ಯರ ಅನಂತರದ ಇತಿಹಾಸದಲ್ಲಿ ಬರ್ಜಿಲ್ಲೈನು ಇದೇ ರೀತಿಯ ಹೇಳಿಕೆಯನ್ನು

ನೀಡಿದನು. ದಾವೀದನು ಆತನಿಗೆ ಸಮಾಲೋಕನಾಗಿ ರಾಜನ ಆಸ್ಥಾನದಲ್ಲಿ ಒಂದು ಸ್ಥಾನವನ್ನು ಕೊಟ್ಟ ವೇಳೆ, ಆತನು "ಇಲ್ಲ" ಎಂದು ಎದುರುನೋಡುವಂಥ ಪ್ರಶ್ನೆಯೊಂದನ್ನು ಕೇಳಿದನು: "ಒಳ್ಳೇದು, ಕೆಟ್ಟದ್ದು ['ದುಷ್ಟತನ; KJV] ಇವುಗಳ ಭೇದವು ನನಗಿನ್ನು ತಿಳಿಯುವದೋ?" (2 ಸಮುವೇಲ 19:35). ಎಂಭತ್ತನೆಯ ವಯಸ್ಸಿನಲ್ಲಿ, ತಾನು ಅರಸನಿಗೆ ಕೊಡಬಹುದಾದ ಸಲಹೆಯಲ್ಲಿನ ಒಳ್ಳೇದು ಮತ್ತು ಕೆಟ್ಟದ್ದರ ಬೇಧವನ್ನು ತಿಳಿಯಲಾಗದಷ್ಟು ವೃದ್ಧನೆಂದು ಭಾವಿಸಿಕೊಂಡಿದ್ದನು. ಆತನ ಮಾನಸಿಕ ಮತ್ತು ದೈಹಿಕ ಇಂದ್ರಿಯಗಳು ಎಷ್ಟೊಂದು ಹದಗೆಟ್ಟಿದ್ದವೆಂದರೆ ಆತನು ಅರಸನ ಆಮಂತ್ರಣವನ್ನು ನಿರಾಕರಿಸಿದನು.[23]

ಹೇಗೂ, ಈ ಮೇಲಿನ ಯಾವದೇ ಉದಾಹರಣೆಗಳು ತೋಟದಲ್ಲಿದ್ದ ಆದಾಮ ಮತ್ತು ಹವ್ವಳರಿಗೆ ಅನ್ವಯಿಸುವದಕ್ಕಾಗುವದಿಲ್ಲ. ದೇವರು ಹೊಣೆಗಾರಿಕೆಯ ವಯಸ್ಸಿಗೆ ಬಂದಿರದಂಥ ಮಕ್ಕಳನ್ನು, ಅರಣ್ಯದಲ್ಲಿ ಇಸ್ರಾಯೇಲ್ಯರು ತೋರಿಸಿದ ಅವಿಧೇಯತೆಗೋಸ್ಕರ ಜವಾಬ್ದಾರರನ್ನಾಗಿ ಪರಿಗಣಿಸಲಿಲ್ಲ, ಅವರು ಅದರಲ್ಲಿ ಭಾಗಿಗಳಾಗಿದ್ದರೋ ಅಥವಾ ಇಲ್ಲವೋ ಎಂಬುದು ಲೆಕ್ಕಕ್ಕೆ ಬರುವದಿಲ್ಲ. ಬರ್ಜಿಲ್ಲೈನ ಪ್ರಕರಣದಲ್ಲಿ ನೋಡುವದಾದರೆ, ಹೊರೆಯುಳ್ಳ ವಿವಾದಾಂಶಗಳನ್ನು ಒತ್ತಡವನ್ನು ಸಹಿಸಿಕೊಂಡು ನಿಲ್ಲುವದಕ್ಕೆ ಮತ್ತು ಅರಸನಿಗೆ ಸ್ವಸ್ಥಕರವಾದ ಸಲಹೆಗಳನ್ನು ಕೊಡುವಷ್ಟರ ಮಟ್ಟಿಗೆ ಸ್ಪಷ್ಟವಾದ ಆಲೋಚನೆಯನ್ನು ಮಾಡುವದಕ್ಕೆ ಆಗದಷ್ಟು ವೃದ್ಧನಾಗಿದ್ದನು. ಈ ಉದಾಹರಣೆಗಳಿಗೆ ತದ್ವಿರುದ್ಧವಾಗಿ, ಆದಾಮ ಮತ್ತು ಹವ್ವಳರು ಒಳ್ಳೇದರ ಮತ್ತು ಕೆಟ್ಟದ್ದರ ಅರುಹು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಕೊಟ್ಟಿದ್ದ ನಿಷೇಧಾಜ್ಞೆಯನ್ನು ಗ್ರಹಿಸಿಕೊಳ್ಳಲಿಕ್ಕಾಗದಷ್ಟು ಕಿರಿಯರಾಗಲಿ ಅಥವಾ ವೃದ್ಧರಾಗಲಿ ಆಗಿರಲಿಲ್ಲ. ಅವರು ಅದರ ಹಣ್ಣನ್ನು ತಿಂದದ್ದಾದರೆ ನಿಶ್ಚಯವಾಗಿಯೂ ಸಾಯುವರು ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು; ಆದ್ದರಿಂದ ಅವರ ಅವಿಧೇಯತೆಗೆ ಅವರು ಜವಾಬ್ದಾರರಾಗಿದ್ದರು.

ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಮಹತ್ವಪೂರ್ಣತೆಯನ್ನು ನಿರ್ಧರಿಸುವದಕ್ಕೆ ಮಾಡುವ ಯಾವದೇ ಪ್ರಯತ್ನವು ಸರ್ಪದ ಹೇಳಿಕೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು: "ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ" (3:5). ಸರ್ಪದ ಮಾತಿನಲ್ಲಿ ಒಂದಿಷ್ಟು ಸತ್ಯಾಂಶವು ಇತ್ತು. ಅವರು ಬಿದ್ದು ಹೋದ ಬಳಿಕ, ದೇವರು ಹೀಗೆ ಆಶ್ಚರ್ಯದಿಂದ ಹೇಳಿದನು, "ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ" (3:22). ಶೋಧನೆ ಮತ್ತು ಮನುಷ್ಯನು ಮಾಡಿದ ಪ್ರಥಮ ಪಾಪದ ಸನ್ನಿವೇಶದಲ್ಲಿ, ಮನುಷ್ಯನು ಒಂದೇ ಒಂದು ಅರ್ಥದಲ್ಲಿ ದೇವರ "ಅಂತೆ" ಆಗಿದ್ದನು, ಏನೆಂದರೆ ಪಾಪ ಮತ್ತು ಕೆಟ್ಟದ್ದರ ಕುರಿತಾದ ಅರುಹು. ಜ್ಞಾನಿಯು ಹೀಗೆ ಬರೆದನು, "ಯೆಹೋವನ ಭಯವೇ ಜ್ಞಾನಕ್ಕೆ ಮೂಲ" (ಜ್ಞಾನೋಕ್ತಿ 1:7). ಈ ರೀತಿಯ ಅಭಿಪ್ರಾಯವಿರುತ್ತದೆ, ಏನೆಂದರೆ "ಮನುಷ್ಯನು ನಿಜವಾಗಿಯೂ ಜ್ಞಾನಿಯಾಗಿದ್ದು ದೇವರಲ್ಲಿ ಪೂರ್ಣ ಜೀವಿತವನ್ನು ನಡಿಸುವವನಾಗಿ ಸ್ವ-ಸಂತೃಪ್ತಿಯೆಂದು ಹೇಳಿಕೊಳ್ಳುವ ಜ್ಞಾನವಲ್ಲವಾದರೆ ಮಾತ್ರವೇ ಮನುಷ್ಯನ ಸಮರ್ಪಕವಾದ ಭಂಗಿಯಾಗಿರುತ್ತದೆ."[24]

ಯೆಹೆಜ್ಕೇಲ 28:1-19 ವಾಕ್ಯಭಾಗವು ಆದಿಕಾಂಡದಲ್ಲಿನ ಚರಿತ್ರೆಗೆ ಅತ್ಯಂಥ ನಿಕಟವಾಗಿರುವ ಸಮಾನಾರ್ಥವೊಂದನ್ನು ಒದಗಿಸುತ್ತದೆ. ಅತ್ಯಂಥ ಸಾಂಕೇತಿಕವಾದ ಭಾಷೆಯಲ್ಲಿ, ಪ್ರವಾದಿಯು ತೂರಿನ ಪ್ರಭುವಿನ ಹೃದಯವು ಗರ್ವದಿಂದ ಎತ್ತಲ್ಪಟ್ಟಿದ್ದರ ನಿಮಿತ್ತವಾಗಿ ಹೇಗೆ ದೇವರ (ಏದೆನ್) ತೋಟದಿಂದ ಹೇಗೆ ಹೊರಗೆ ಹಾಕಲ್ಪಟ್ಟನು

ಎಂಬುದನ್ನು ಬಣ್ಣಿಸುತ್ತಾನೆ. ತನಗೆ ದಾನಿಯೇಲನಿಗಿಂತ ಅಧಿಕ ಜ್ಞಾನವಿದೆ ಮತ್ತು ತಾನೊಬ್ಬ ದೇವರು ಎಂಬುದಾಗಿ ಆತನು ಭಾವಿಸಿಕೊಂಡಿದ್ದನು (ಯೆಹೆಜ್ಕೇಲ 28:1-6, 12-17). ಈ ತೂರಿನ ಅರಸನ ಗರ್ವ ಮತ್ತು ದುರಹಂಕಾರಗಳು ತೋಟದಲ್ಲಿ ಮನುಷ್ಯನಿಗಿದ್ದ ಮನೋಭಾವವನ್ನು ಜ್ಞಾಪಿಸುತ್ತವೆ; ಯಾಕೆಂದರೆ ದೇವರಿಂದಲ್ಲದೆ ಬೇರೊಂದು ಮೂಲದಿಂದ ಜ್ಞಾನವನ್ನು (ಅರುಹು) ಹೊಂದಿಕೊಳ್ಳಲು ಇಚ್ಛಿಸುವದರಲ್ಲಿ, ಒಬ್ಬನು ನೈತಿಕ ಸ್ವಯಾಮಾಧಿಕಾರವಾಗಿ ಘೋಷಿಸಿಕೊಂಡು ದೇವರಿಂದ ಪ್ರಕಟಗೊಂಡಿರುವ ಚಿತ್ತವನ್ನು ಹೊರಗಿಟ್ಟು ಸರಿ ಅಥವಾ ತಪ್ಪು ಯಾವದೆಂದು ನಿರ್ಧರಿಸಿಕೊಳ್ಳುವ ಮೂಲಕ ತನಗೆ ತಾನೇ ದೇವರಾಗುತ್ತಾನೆ. ಸಮಸ್ತವನ್ನೂ ಉಂಟು ಮಾಡಿರುವ ಮತ್ತು ಕಾಲ ಹಾಗೂ ಸ್ಥಳಕ್ಕೆ ಸೀಮಿತನಾಗಿರದ, ಏಕೈಕ ದೇವರಿಗೆ ಮಾತ್ರವೇ ಮನುಷ್ಯನ ಜೀವಿತಕ್ಕೆ ನಿಜವಾಗಿಯೂ ಯಾವುದು ಒಳ್ಳೇದು ಮತ್ತು ಕೆಟ್ಟದ್ದು ಎಂಬುದನ್ನು ತಿಳಿಯುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಹಾಗಿದ್ದರೂ, ದುರ್ಬಲರಾದ ಮತ್ತು ಮಿತಿಯುಳ್ಳ ಮಾನವ ಜೀವಿಗಳಿಗೆ, ದೈವಿಕ ಪರಮಾಧಿಕಾರವನ್ನು ತಾನೇ ಆಕ್ರಮಿಸಿಕೊಳ್ಳಬೇಕೆಂಬ ಶೋಧನೆಯು ಯಾವಾಗಲೂ ಇದ್ದೇ ಇರುತ್ತದೆ.

## ನಾಲ್ಕು ನದಿಗಳು (2:10-14)

**[10]ಏದೆನ್ ಸೀಮೆಯಲ್ಲಿ ಒಂದು ನದಿ ಹುಟ್ಟಿ ಆ ವನವನ್ನು ತೋಯಿಸುತ್ತಿತ್ತು. ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು. [11]ಮೊದಲನೆಯದರ ಹೆಸರು ಪೀಶೋನ್; ಅದು ಬಂಗಾರ ದೊರಕುವ ಹವೀಲ ದೇಶವನ್ನೆಲ್ಲಾ ಸುತ್ತುವದು. [12]ಆ ದೇಶದ ಬಂಗಾರವು ಶ್ರೇಷ್ಠವಾದದ್ದು; ಅಲ್ಲಿ ಬದೋಲಖ ಧೂಪವೂ ಗೋಮೇಧಿಕ ರತ್ನವೂ ಸಿಕ್ಕುತ್ತವೆ. [13]ಎರಡನೆಯ ನದಿಯ ಹೆಸರು ಗೀಹೋನ್; ಅದು ಕೂಷ್ ದೇಶವನ್ನೆಲ್ಲಾ ಸುತ್ತುವದು. [14]ಮೂರನೆಯ ನದಿಯ ಹೆಸರು ಹಿದ್ದೆಕೆಲ್; ಅದು ಅಶ್ಶೂರ್ ದೇಶದ ಮುಂದೆ ಹರಿಯುವದು. ನಾಲ್ಕನೆಯದು ಯೂಫ್ರೇಟೀಸ್ ನದಿ.**

**ವಚನ 10.** ತೋಟಕ್ಕೆ **ಏದೆನ್ ಸೀಮೆಯಲ್ಲಿ ಹುಟ್ಟಿ** ಹರಿಯುತ್ತಿದ್ದ ನದಿಯ ಮೂಲಕ ಚೆನ್ನಾಗಿ ನೀರು ದೊರಕುತ್ತಿತ್ತು, ಅಂದರೆ "ಏದೆನ್" ಎಂದು ಕರೆಯಲ್ಪಡುತ್ತಿದ್ದ ದೊಡ್ಡದಾದ ಪ್ರಾಂತ್ಯ (2:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನದಿಯು ಬಳಿಕ **ತೋಟವನ್ನು ತೋಯಿಸುವದಕ್ಕೆ** ಹರಿಯುತ್ತಿತ್ತು; **ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು**. "ಶಾಖೆಗಳು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು (רָאשִׁים, *ರೋ ಶಿಮ್*) ಎಂದಾಗಿದ್ದು ಅದು רֹאשׁ *(ರೋಶ್)* ಎಂಬ ಮೂಲ ಪದದಿಂದ ಬರುತ್ತದೆ, ಅದು "ಶಿರಸ್ಸು"[25] ಎಂಬ ಒಂದು ಪ್ರಾಥಮಿಕ ಅರ್ಥವನ್ನು ಹೊಂದಿದೆ. ಹೇಗೂ, ಈ ಸನ್ನಿವೇಶದಲ್ಲಿ ಆ ಪದವು ಹೇಗೆ ಅನುವಾದಿಸಲ್ಪಡಬೇಕು ಎಂಬುದು ಸ್ಪಷ್ಟವಾಗಿರುವದಿಲ್ಲ. NIVಯು "ಏದೆನ್ ಸೀಮೆಯಿಂದ ಹರಿದ" ನದಿಯು "ನಾಲ್ಕು *ಸರೋಭಾಗಗಳಾಗಿ* ವಿಂಗಡಗೊಂಡಿತು" ಎಂದು ಹೇಳುತ್ತದೆ, ಆದರೆ NRSV ಮತ್ತು NJPSV ಎರಡೂ ತರ್ಜುಮೆಗಳು ಹೇಳುವದೇನೆಂದರೆ ಏದೆನ್ ನದಿಯು "ವಿಭಾಗಗೊಂಡು ನಾಲ್ಕು *ಶಾಖೆಗಳಾ*ಗುತ್ತದೆ" (ಒತ್ತಿ ಹೇಳಿದ್ದು ನನ್ನದು).

10ನೇ[26] ವಚನದಲ್ಲಿನ ಭಾಷೆಯಲ್ಲಿರುವ ಕಠಿಣತೆಯನ್ನು ಗಮನಕ್ಕೆ ತರುತ್ತಾ, ಲೇಕಕನು ಮಾನವರ ಪ್ರಥಮ ನಿವಾಸವಾಗಿ ಏದೆನ್ ಆದರ್ಶ ರಾಜ್ಯದಂತೆ ಇತ್ತೆಂಬ ಒಂದು ಪೌರಾಣಿಕ ವರ್ಣನೆಯನ್ನು ನೀಡುತ್ತಿದ್ದಾನೆಂದು ಕೆಲವರು ಹೇಳಿಕೊಳ್ಳುತ್ತಾರೆ. ಹೇಗೂ, ಈ ಅಭಿಪ್ರಾಯವು

ತ್ವರಿತವಾಗಿ ಅಲ್ಲಗಳೆಯಲ್ಪಡಬಲ್ಲದು, ಯಾವ ಪ್ರಾಂತ್ಯದಿಂದ "ಟೈಗ್ರೀಸ್" ಮತ್ತು "ಯೂಫ್ರೇಟೀಸ್" ನದಿಗಳು ಹರಿಯುತ್ತಿದ್ದವೋ ಆ ಮೆಸಪೋತಾಮ್ಯದ ಪ್ರಾಂತ್ಯದಲ್ಲಿ ತೋಟವು ಇತ್ತೆಂದು ಲೇಖಕನು ತಿಳಿಸುತ್ತಾನೆ (2:14).

ಇನ್ನು ಕೇಲವರು ಈ ಭಾಷೆಯು ಅಕ್ಷರಶಃವಾದದ್ದೆಂದು ಅರ್ಥಮಾಡಿಕೊಂಡಿರುವದು ಸರಿಯಾಗಿಯೇ ಇರುತ್ತದೆ, ಮತ್ತು ಅವರು ಏದೆನ್ ತೋಟವು ಇದ್ದಿರಬಹುದಾದ ಎರಡು ಸಂಭಾವ್ಯ ಸ್ಥಳಗಳನ್ನು ಗುರುತಿಸಿರುತ್ತಾರೆ. ಒಂದು ಕಡೆಯಲ್ಲಿ, *ರೋ ಶಿಮ್* ಎಂಬುದರ ಅರ್ಥವು "ಸರೋಭಾಗಗಳು" ಎಂದಾಗಿರುವದಾದರೆ, ತೋಟವು ತುರ್ಕಿಯ (ಐತಿಹಾಸಿಕ ಅರ್ಮೆನಿಯಾ) ಮೂಡಣ ದಿಕ್ಕಿನಲ್ಲಿರುವ ಪರ್ವತಗಳ ಮೇಲೆ ಇದ್ದಿರಬಹುದಾಗಿದೆ, ಅಲ್ಲಿಂದಕೇ ಟೈಗ್ರೀಸ್ ಮತ್ತು ಯೂಫ್ರೇಟೀಸ್ ನದಿಗಳು ಉಗಮವಾಗುತ್ತವೆ.[27] ಇನ್ನೊಂದೆಡೆಯಲ್ಲಿ, ಆ ಪದದ ಅರ್ಥವು "ಶಾಖೆಗಳು" ಎಂದಾಗಿರುವದಾದರೆ, ತೋಟವು ದಕ್ಷಿನ ಇರಾಕ್ ಅಥವಾ ಕುವೈತ್ ಎಂಬಲ್ಲಿ, ಪರ್ಸಿಯನ್ ಕೊಲ್ಲಿಯ ಉತ್ತರಕ್ಕೆ (ಅಥವಾ ಅದರ ಅಡಿಯಲ್ಲಿ) ಇದ್ದಿರಬಹುದು, ಹೀಗಿರುವದಾದಲ್ಲಿ ಏದೆನ್ ತೋಟವು ಕೊಲ್ಲಿಯ ಹತ್ತಿರ (ಅಥವಾ ಅದರ ಕೆಳಗಡೆಯಲ್ಲಿ) ಇತ್ತು ಎಂದಾಗುತ್ತದೆ, ಇದಕ್ಕೆ ಬೆಂಬಲವಾಗಿ ಹೆಚ್ಚು ಪುರಾವೆ ಇರುವಂತೆ ಕಾಣಿಸುತ್ತದೆ.

**ವಚನಗಳು 11, 12.** ಆದಿಕಾಂಡದಲ್ಲಿ ಪ್ರಸ್ತಾಪಿಸಲಾಗಿರುವ **ಮೊದಲನೆಯ** ನದಿಯನ್ನು ಖಚಿತವಾಗಿ ಗುರುತಿಸುವದಕ್ಕೆ ಸಾಧ್ಯವಿಲ್ಲ. ಅದಕ್ಕೆ ಪೀಶೋನ್ ಎಂದು ಹೆಸರಿತ್ತು, ಮತ್ತು **ಅದು ಬಂಗಾರ ದೊರಕು**[ತ್ತಿದ್ದ]**ವ ಹವೀಲ ದೇಶವನ್ನೆಲ್ಲಾ ಸುತ್ತುವದು**. "ಪೀಶೋನ್" ಹಳೆಯ ಒಡಂಬಡಿಕೆಯಲ್ಲಿ ಬೇರೆ ಇನ್ನೆಲ್ಲಿಯೂ ಕಾಣಿಸಿಕೊಳ್ಳುವದಿಲ್ಲ ಎಂಬುದೇ ಸಮಸ್ಯೆಯಾಗಿರುತ್ತದೆ, ಮತ್ತು ಅದರ ಇಬ್ರಿಯ ಪದದ ಮೂಲವು ಯಾವದೆಂದು ವೇದ ಪಂಡಿತರಿಗೆ ನಿಶ್ಚಯವಾಗಿ ತಿಳಿಯದು. ಕೆಲವರು ಅದನ್ನು ಭಾರತದ ಇಂಡಸ್ ಅಥವಾ ಗಂಗಾ ನದಿ ಎಂದು ಗುರುತಿಸುತ್ತಾರೆ, ಆದಾಗ್ಯೂ ಇವುಗಳು ಟೈಗ್ರೀಸ್ ಮತ್ತು ಯೂಫ್ರೇಟೀಸ್ ನದಿಗಳಿಂದ ಬಹಳ ದೂರದಲ್ಲಿರುತ್ತವೆ. ಇನ್ನು ಕೆಲವರು ಯೂಫ್ರೇಟೀಸ್ ನದಿಯೊಳಗೆ ಹರಿದು ಬರುವಂಥ ಇರಾನಿನಲ್ಲಿರುವ ಕಾರುನ ನದಿ, ಅಥವಾ ಹವೀಲ ಮತ್ತು ಅಲ್ಲಿ ಬಂಗಾರ ದೊರಕುವದೆಂದು ಪ್ರಸ್ತಾಪಿಸಿರುವ ಕಾರಣದಿಂದ ಇದು ಅರಬಿಯ ನದಿಯಾಗಿರುವ ಸಾಧ್ಯತೆಯಿದೆ ಎಂದು ಅಭಿಪ್ರಾಯ ಪಡುತ್ತಾರೆ. ದೇಶಗಳ ಕೋಷ್ಟಕದಲ್ಲಿ, ಹವೀಲ ಎಂಬ ಹೆಸರು ಅಂತಿಮವಾಗಿ ಆಫ್ರಿಕಾ (10:6, 7) ಮತ್ತು ಅರಬಿಯ (10:29; ನೋಡಿರಿ 25:18) ಪ್ರಾಂತ್ಯಗಳಲ್ಲಿ ನೆಲಗೊಂಡ ಜನರ ಗುಂಪುಗಳೊಂದಿಗೆ ಸಂಬಂಧ ಹೊಂದಿರುತ್ತದೆ.

**ಬಂಗಾರ ಬದೋಲಖ ಧೂಪವೂ** ಮತ್ತು **ಗೋಮೇಧಿಕ ರತ್ನವೂ** ಇವುಗಳನ್ನು ಹವೀಲಕ್ಕೆ ಸಂಬಂದಪಟ್ಟಂತೆ ಪ್ರಸ್ತಾಪಿಸಲ್ಪಟ್ಟಿವೆ, ಮತ್ತು ಇವುಗಳೆಲ್ಲವು ಸೌದಿ ಅರಬಿಯದಲ್ಲಿರುವ ಕೆಂಪು ಸಮುದ್ರ ದಡಗಳುದ್ದಕ್ಕೂ ಸಿಕ್ಕುತ್ತವೆ, ಈ ಉಲ್ಲೇಖವು ಅರಬಿಯದಲ್ಲಿರುವ ಪ್ರಾಂತ್ಯವೊಂದನ್ನು ಸೂಚಿಸಬಹುದಾಗಿದೆ. ಇಂದು, ಸೌದಿ ಅರಬಿಯದಲ್ಲಿರುವ ಅತ್ಯಂಥ ಐಶ್ವರ್ಯಭರಿತ ಗಣಿಗಳಲ್ಲೊಂದು ಮದೀನಾದ ಬಳಿಯಲ್ಲಿ ಇದ್ದು, ಅದು ಮಹ್ದ ಅದ್ಧ-ಧ್ಹಾಹಾಬ ಎಂದು ಕರೆಯಲ್ಪಡುತ್ತದೆ, ಅದರರ್ಥವು "ಬಂಗಾರದ ತೊಟ್ಟಿಲು"; ಈ ಪ್ರಾಂತ್ಯವು ಪ್ರಾಚೀನ ಸಮಯಗಳಲ್ಲಿ ಬಹಳವಾಗಿ ಗಣಿಗಾರಿಕೆಗೆ ಸಹ ಒಳಗಾಗಿತ್ತು. ಪೀಶೋನ್ ನದಿಯ ಮೂಲವು ಈ ಪ್ರಾಂತ್ಯದ ಆಸುಪಾಸಿನಲ್ಲಿ ಇದ್ದಿರಬಹುದಾಗಿದೆ. ಅರಬಿಯದ ಮರುಭೂಮಿಯಲ್ಲಿನ ಮರಳು ನಮೂನೆಗಳ ಉಪಗ್ರಹ ಛಾಯಾಚಿತ್ರಗಳು ಒಂದು ನದೀತಳವು ದಡವು "ಈಶಾನ್ಯಕ್ಕೆ ಸೌದಿ ಅರಬಿಯದ ಮೂಲಕ ಹಾಯ್ದು ಮದೀನದ ಸಮೀಪವಿರುವ ಹಜೀಝು ಪರ್ವತಗಳಿಂದ

ಆರಂಭಗೊಂಡು ಟೈಗ್ರೀಸ್ ಮತ್ತು ಯೂಫ್ರೇಟೀಸ್ ನದಿಗಳ ಉಗಮ ಸ್ಥಾನದ ಸಮೀಪವಿರುವ ಪರ್ಷಿಯನ್ ಕೊಲ್ಲಿಯ ತನಕ"[28] ಇರುವದನ್ನು ಬೆಳಕಿಗೆ ತಂದಿರುತ್ತವೆ. ಈ ಒಣ ನದೀತಳವು, ಭಾಗಶಃ ಮರಳು ದಿಣ್ಣೆಗಳಿಂದ ಮುಚ್ಚಲ್ಪಟ್ಟು ಭಾಗಶಃ ಹೊರಗೆ ಕಾಣಿಸುವದಾಗಿದ್ದು (ವಾಡಿ ಅಲ್-ಬಾಟಿನ), ಇದನ್ನು ಕುವೈತ್ ನದಿ ಎಂದು ಕರೆಯಲಾಗಿರುತ್ತದೆ.

**ವಚನ 13. ಎರಡನೆಯ ನದಿಯ ಹೆಸರು ಗೀಹೋನ್** ಆಗಿತ್ತು; ಇದು **ಅದು ಕೂಷ್ ದೇಶವನ್ನೆಲ್ಲಾ ಸುತ್ತುವ**[ದಾಗಿತ್ತು]. ಈ ನದಿಯ ಸ್ಥಳವು ಸಹ ಬಹಳವಾಗಿ ವಿವಾದಕ್ಕೊಳಗಾಗಿದೆ ಯಾಕೆಂದರೆ ಹಳೆಯ ಒಡಂಬಡಿಕೆಯಲ್ಲಿ ಗೀಹೋನ್ ನದಿಯ ಕುರಿತಾಗಿರುವ ಮಿಕ್ಕ ನಾಲ್ಕು ಉಲ್ಲೇಖಗಳೆಲ್ಲವು ದಾವೀದನ ನಗರದ ಕೆಳಗಿನಿಂದ ಉಕ್ಕಿ ಕಿದ್ರೋನ್ ಕಣಿವೆಯೊಳಗೆ ಹರಿಯುತ್ತಿದ್ದ ಸಿಹಿ ನೀರಿನ ಒರತೆಯನ್ನು ಸೂಚಿಸುತ್ತವೆ ಇದು ಹಳೆಯ ಒಡಂಬಡಿಕೆಯ ಕಾಲದಲ್ಲಿ ಯೆರೂಸಲೇಮಿಗೆ ಇದ್ದಂಥ ಏಕೈಕ ಸಿಹಿ ನೀರಿನ ಮೂಲವಾಗಿತ್ತು (1 ಅರಸು 1:33, 38, 45; 2 ಪೂರ್ವಕಾಲವೃತ್ತಾಂತ 32:30; 33:14). ಗೀಹೋನ್ ನದಿಯು ಕುಷ್ ದೇಶದಲ್ಲೆಲ್ಲಾ ಹರಿಯುತ್ತಿದ್ದದರಿಂದ, ಇದನ್ನು ಯೆರೂಸಲೇಮಿನಲ್ಲಿರುವ ಈ ಒರತೆಯೊಂದಿಗೆ ಗುರುತಿಸುವದಕ್ಕೆ ಸಾಧ್ಯವಿರುವದಿಲ್ಲ.

ಕೆಲವರು ಗೀಹೋನ್ ನದಿಯನ್ನು ಭಾರತದಲ್ಲಿರುವ ಒಂದು ನದಿ ಎಂದು ಅಥವಾ ಆಫ್ರಿಕಾದಲ್ಲಿರುವ ನೈಲ್ ನದಿಯೆಂದು ಗುರುತಿಸುತ್ತಾರೆ, ಆದರೆ ಈ ಅಭಿಪ್ರಾಯಗಳು ಸಂದೇಹಕರವಾಗಿವೆ. ಇದು ತುರ್ಕಿಯ (ಐತಿಹಾಸಿಕ ಅರ್ಮೆನಿಯಾ) ಪೂರ್ವ ಭಾಗದಲ್ಲಿ ಏದೆನ್ ತೋಟವಿತ್ತೆಂದು ಗುರುತಿಸುವವರು ಗೀಹೋನ್ ನದಿಯನ್ನು ಆ ಪ್ರಾಂತ್ಯದಲ್ಲಿರುವ ಒಂದು ನದಿಯೊಂದಿಗೆ ಗುರುತಿಸುತ್ತಾರೆ. ನಿರ್ದಿಷ್ಟವಾದ ನದಿಯೆಂದು ಗುರುತಿಸುವದರಲ್ಲಿರುವ ಪ್ರಮುಖ ಸಮಸ್ಯೆಯು 2:13ರಲ್ಲಿ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದ್ದು ಅದೇನೆಂದರೆ "ಕುಷ್ ದೇಶ" ಎಂಬುದರ ಅರ್ಥವೇ. ಸಾಮಾನ್ಯವಾಗಿ, ಹಳೆಯ ಒಡಂಬಡಿಕೆಯಲ್ಲಿ, ವಿಶೇಷವಾಗಿ ಪ್ರವಾದಿಗಳ ಪುಸ್ತಕದಲ್ಲಿ "ಕುಷ್" (שׁוּכ, *ಕುಷ್*) ಎಂಬುದು ಆಫ್ರಿಕಾದ ನೈಲ್ ನದಿಯ ಒಳನಾಡಿನಲ್ಲಿರುವ ಐತಿಯೋಪ್ಯ ಅಥವಾ ನುಬಿಯಾ[29] ಎಂಬ ದೇಶಗಳನ್ನು ಸೂಚಿಸುತ್ತದೆ. ಹೇಗೂ, ಹಾಮ್ನನ ಪುತ್ರರಲ್ಲೊಬ್ಬನಾದ ಕೂಷ್, ಈತನು ನಿಮ್ರೋದನ ತಂದೆಯಾಗಿದ್ದು, ತನ್ನ ಸಾಮ್ರಾಜ್ಯವನ್ನು "ಶಿನಾರ್ ದೇಶದಲ್ಲಿರುವ ಬಾಬೆಲ್, ಯೆರೆಕ್, ಅಕ್ಕದ್, ಕಲ್ನೇ ಎಂಬ ಪಟ್ಟಣಗಳ" ಮೂಲಕ ಆರಂಭಗೊಳಿಸಿದ್ದನು (10:6-11).

ಹಾಗಾದರೆ, ಆದಿಕಾಂಡದಲ್ಲಿನ ವಂಶಾವಳಿಗಳು ಐಗುಪ್ತದ ದಕ್ಷಿಣಕ್ಕಿದ್ದ ಆಫ್ರಿಕಾದ ಕ್ಷೇತ್ರದೊಳಗೆ ಕುಷನ ಸಂತಾನದವರು ಹರಡಿಕೊಳ್ಳುವದಕ್ಕೆ *ಮುಂಚಿನ* ಪರಿಸ್ಥಿಯೊಂದನ್ನು ಪ್ರತಿಫಲಿಸುತ್ತಿದೆ ಎಂದಾಗುತ್ತದೆ - "ಕುಷ್" (*ಖುಷ್*) ಮೆಸಪೋತಾಮ್ಯದ ಕಣಿಯಲ್ಲಿನ ಮಹಾ ಪಟ್ಟಣಗಳೊಂದಿಗೆ ಜೋಡನೆ ಹೊಂದಿದ್ದಂಥ ಕಾಲವೊಂದನ್ನು ಪ್ರತಿಫಲಿಸುತ್ತದೆ. ಈ ಕಾರಣದಿಂದಲೇ ಇಬ್ರಿಯ ಪದವಾಗಿರುವ *ಖುಷ್* ಕೆಲವು ಸಾರಿ ಅಕ್ಕಾದಿಯ ಭಾಷಾ ಪದವಾದ *ಕಶಶು* ಎಂಬುದಕ್ಕೆ ಸಮಾನವಾಗಿರುತ್ತದೆ, ಇದು ಉತ್ತರ ಮೆಸಪೋತಾಮ್ಯದಲ್ಲಿರುವ ಕಸ್ದೀಯರು ವಾಸವಿದ್ದ ಪರ್ವತಗಳಿಂದ ಕೂಡಿದ ದೇಶದೊಂದಿಗೆ ಗುರುತಿಸುತ್ತದೆ, ಇದರ ಮುಖಾಂತರವಾಗಿಯೇ ಟೈಗ್ರೀಸ್ ನದಿಯು ಹರಿಯುತ್ತಿತ್ತು. ಅಷ್ಟುಮಾತ್ರವಲ್ಲದೆ, ಕುಷನು ಏಕೆ ಕೆಲವು ಸಾರಿ ಕಸ್ದೀಯರ ಪೂರ್ವಜನೆಂದು ಅರ್ಥಮಾಡಿಕೊಳ್ಳಲ್ಪಟ್ಟಿದ್ದಾನೆಂಬುದಕ್ಕೆ ಇದೇ ಕಾರಣವಿರಬಹುದೆಂದು ತೋರುತ್ತದೆ, ಈತನು ಬಾಬೆಲಿನ ಮೇಲೆ ಕ್ರಿ.ಪೂ. ಹನ್ನೆರಡನೆಯ ಶತಮಾನದ ವರೆಗೂ ಆಳ್ವಿಕೆ ಮಾಡಿದನು.[30] ಗೀಹೋನ್ ನದಿಯು ಕುಷ್ (ಕಸ್ದೀಯ) ದೇಶದ ಸುತ್ತಲೆಲ್ಲಾ ಹರಿಯುತ್ತಿತ್ತಾದ್ದರಿಂದ, ನದಿಯು ಪೂರ್ವದ ಕಡೆಯಿಂದ ಮೆಸಪೋತಾಮ್ಯದ

ಕಣಿವೆಯೊಳಗೆ ಬಂದು ಟೈಗ್ರೀಸ್ ನದಿಯೊಳಗೆ ಹರಿಯುವದಾಗಿತ್ತು. ಅಂಥ ಸಾಧ್ಯತೆಯೊಂದು ಸಮಾರ್ಯದ ಪಂಚಪುಸ್ತಕವು "ಗೀಹೋನ್" ಸ್ಥಾನದಲ್ಲಿ *ಅಸ್ಕೋಪ್* ಎಂದು ಸೇರ್ಪಡೆಗೊಳಿಸಿದ್ದರಲ್ಲಿ ಸಹ ಸೂಚಿಸಲ್ಪಟ್ಟಿರುತ್ತದೆ, ಅದು ಖೋವಾಸ್ಪೇಸ ನದಿಯನ್ನು (ಈಗ ಕರ್ಖಾ ಎಂದು ಪರಿಚಿತವಿರುತ್ತದೆ) ಉಲ್ಲೇಖಿಸುವದಾಗಿದ್ದು, ಅದು ಟೈಗ್ರೀಸ್ ನದಿಗೆ ಪೂರ್ವ ದಿಕ್ಕಿನಲ್ಲಿ ಹರಿಯುವದಾಗಿತ್ತು.[31]

**ವಚನ 14.** ಈ ಬಣ್ಣನೆಯಲ್ಲಿರುವ ಮಿಕ್ಕ ನದಿಗಳು ಬಹಳ ಚೆನ್ನಾಗಿ ಪರಿಚಿತವಿರುವಂಥವುಗಳಾಗಿವೆ. **ಮೂರನೆಯ ನದಿಯ ಹೆಸರು ಟೈಗ್ರೀಸ್** ಎಂದಾಗಿತ್ತು. "ಟೈಗ್ರೀಸ್" ಎಂಬುದು ಗ್ರೀಕ್ ಪದವಾದ Τίγρις ಎಂಬುದರ ಲಿಪ್ಯಂತರಣವಾಗಿದ್ದು LXXನಲ್ಲಿ ಕಂಡು ಬರುತ್ತದೆ, "ಹಿದ್ದೆಕೆಲ್" (KJV) ಎಂಬುದಾದರೋ ಮಾಸೊರೆಟಿಕ್ ವಾಕ್ಯದಲ್ಲಿ (MT) ಇಬ್ರಿಯ ಭಾಷೆಯ חִדֶּקֶל (*ಚಿದ್ದೆಕೆಲ್*) ಎಂಬುದರ ಲಿಪ್ಯಂತರಣವಾಗಿದೆ. ಟೈಗ್ರೀಸ್ ನದಿಯು **ಅಶ್ಶೂರ್ ದೇಶದ ಮುಂದೆ ಹರಿಯುವದು** ಎಂಬ ಹೇಳಿಕೆಯ ಕುರಿತು ಕೆಲವರು ಪ್ರಶ್ನೆ ಎತ್ತುತ್ತಾರೆ, ಯಾಕೆಂದರೆ ಟೈಗ್ರೀಸ್ ಆ ದೇಶದ ಮಧ್ಯಭಾಗದ ಮೂಲಕವಾಗಿ ಹರಿಯುತ್ತಿತ್ತು. ಅದಕ್ಕೆ ಒಂದು ವಿವರಣೆಯೆಂದರೆ "ಅಶ್ಶೂರ್" ಎಂದು ಅನುವಾದಿಸಲ್ಪಟ್ಟಿರುವ ಇಬ್ರಿಯ ಹೆಸರು (אַשּׁוּר, *ಅಶಶುರ್*) ಎಂಬುದನ್ನು "ಅಶ್ಶೂರ್" (NEB; REB; NIV; NJPSV; NLT) ಎಂದು ಸಹ ಅನುವಾದಿಸಬಹುದಾಗಿದೆ. ಆದದರಿಂದ, ಈ ಹೆಸರು ಒಂದು ದೇಶವನ್ನಾದರೂ ಸೂಚಿಸಬಹುದು ಅಥವಾ ಆ ದೇಶದ ಹೆಸರಿರುವ ಪಟ್ಟಣವೊಂದನ್ನು ಸೂಚಿಸಬಹುದಾಗಿದೆ. ಪ್ರಾಚೀನ ಅಶ್ಶೂರದ ರಾಜಧಾನಿಯಾಗಿದ್ದ ಅಶ್ಶೂರ್ ಪಟ್ಟಣವು ಟೈಗ್ರೀಸ್ ನದಿಯ ಪಶ್ಚಿಮ ದಡದಲ್ಲಿ ಇತ್ತು. ಆದದರಿಂದ, ಟೈಗ್ರೀಸ್ ನದಿಯು "ಅಶ್ಶೂರಿನ ಪೂರ್ವ ಬದಿಯಲ್ಲಿ ಹರಿಯುತ್ತಿತ್ತು" (NIV) ಎಂದು ಹೇಳುವದು ಸರಿಯಾಗಿರುವದು.

**ನಾಲ್ಕನೆಯದು ಯೂಫ್ರೇಟೀಸ್ ನದಿ.** "ಯೂಫ್ರೇಟೀಸ್" ಎಂಬುದು LXXನಲ್ಲಿ ಸಿಕ್ಕುವ ಗ್ರೀಕ್ ಹೆಸರಾದ Εὐφράτης ಎಂಬುದರ ಲಿಪ್ಯಂತರಣ ಆಗಿರುತ್ತದೆ; ಇದರ ಇಬ್ರಿಯ ಹೆಸರು פְּרָת *(ಪೇರಾಥ್)*. ಯೂಫ್ರೇಟೀಸ್ ಎಂಬುದು ಬೈಬಲಿನಲ್ಲಿ ಅನೇಕ ಸಾರಿ ಹೆಸರಿಟ್ಟು ಉಲ್ಲೇಖಿಸಲ್ಪಟ್ಟಿರುತ್ತದೆ. ಅದು "ಮಹಾ ನದಿ" (ಆದಿಕಾಮಡ 15:18; ಧರ್ಮೋಪದೇಶಕಾಂಡ 1:7; ಯೆಹೋಶುವ 1:4; ಪ್ರಕಟನೆ 9:14; 16:12) ಎಂದು ಸಹ ಕರೆಯಲ್ಪಟ್ಟಿದೆ ಯಾಕೆಂದರೆ ಅದು ನೈಋತ್ಯ ಏಶಿಯಾದಲ್ಲಿಯೇ ಅತ್ಯಂಥ ದೊಡ್ಡ ನದಿಯಾಗಿತ್ತು. ಕೆಲವು ಸಾರಿ ಅದು "ನದಿ" ಎಂದಷ್ಟೇ ಕರೆಯಲ್ಪಟ್ಟಿದೆ (ಯೆಹೋಶುವ 24:2, 3, 14, 15). ಪಶ್ಚಿಮದಲ್ಲಿನ ಯೂಫ್ರೇಟೀಸ್ ನದಿ ಮತ್ತು ಪೂರ್ವದಲ್ಲಿದ್ದ ಟೈಗ್ರೀಸ್ ನದಿಗಳು "ನದಿಗಳ ನಡುವಿನ ಭೂಮಿಯನ್ನು" ಅಥವಾ "ಮೆಸಪೋತಾಮ್ಯ"ವನ್ನು ಸುತ್ತುವರೆದಿದ್ದವು.

## ತೋಟದಲ್ಲಿನ ಮನುಷ್ಯನ ಪಾತ್ರ (2:15-17)

**15ಯೆಹೋವದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು. 16ಇದಲ್ಲದೆ ಯೆಹೋವದೇವರು ಆ ಮನುಷ್ಯನಿಗೆ - ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; 17ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು.**

**ವಚನ 15.** **ಏದೆನ್ ತೋಟದ**ಲ್ಲಿ ಯಾವದೇ ಪೌರಾಣಿಕ ಮಾಂತ್ರಿಕತೆ ಇರಲಿಲ್ಲ.

ತೋಟದಲ್ಲಿದ್ದ ಗಿಡಗಳು ಮತ್ತು ಮರಗಳು ತಮ್ಮನ್ನು ತಾವೇ ಪೋಷಿಸಿಕೊಳ್ಳಲು ಸಾಧ್ಯವಿರಲಿಲ್ಲ, ಮನುಷ್ಯನು ಅವುಗಳಿಗೋಸ್ಕರ ಅದ್ಭುತಕರವಾಗಿ ಪೋಷಣೆ ಮಾಡುವದಕ್ಕೂ ಶಕ್ತನಿರಲಿಲ್ಲ. ಈ ಪರದೈಸು ಒಂದು ತಟಸ್ಥವಾದ ವಿಶ್ರಾಂತಿ ಮತ್ತು ನಿರಂತರವಾಗಿ ನಿರುದ್ಯೋಗದಿಂದ ಕೂಡಿರಬೇಕೆಂಬುದು ದೇವರ ಇಂಗಿತವಾಗಿರಲಿಲ್ಲ. ಬಾಬೆಲಿನವರಲ್ಲಿರುವ ಸೃಷ್ಟಿಯ ಕುರಿತಾದ ಚರಿತ್ರೆಯಲ್ಲಿರುವ ಪ್ರಕಾರವಾದ ಒಂದು ಸ್ಥಳವಾಗಲಿ ಸಹ ಇದಾಗಿರಲಿಲ್ಲ, ಅದರ ಪ್ರಕಾರ ದೇವರುಗಳು ತಮ್ಮ ಜವಾಬ್ದಾರಿಗಳಿಂದ ವಿಶ್ರಾಂತಿ ಪಡೆಯುವಂತೆ ಮತ್ತು ಕಠಿಣವಾಗಿ ಪರಿಶ್ರಮ ಪಡುವ ಅಗತ್ಯವಿಲ್ಲದಂತೆ ಮಾನವನು ಅವರುಗಳ ಕೆಲಸಗಳನ್ನು ಮಾಡುತ್ತಾ ಇರುವದಕ್ಕಾಗಿ ಸೃಷ್ಟಿಸಲ್ಪಟ್ಟಿದ್ದನು.[32] ಅದಕ್ಕೆ ತದ್ವಿರುದ್ಧವೇನೆಂದರೆ, ದೇವರು ಮಾನವನ ಮೇಲೆ ಅವಲಂಭಿತನಾಗಿರಲಿಲ್ಲ - ಆದರೆ ಏದೆನ್ ತೋಟವು ಆತನ ಮೇಲೆ ಅವಲಂಭಿತವಾಗಿತ್ತು. ಮನುಷ್ಯನು ಅದನ್ನು ಆರೈಕೆ ಮಾಡುವ ಮನೆವಾರ್ತೆಯವನಂತೆ ತೋಟದಲ್ಲಿ ದುಡಿಯಬೇಕಾಗಿತ್ತು. ಇದು ತೋಟದ ಪ್ರಯೋಜನಕ್ಕಾಗಿ ಮಾತ್ರವೇ ಆಗಿರಲಿಲ್ಲ, ಆದರೆ ಸ್ವತಃ ಮಾನವನ ಮಾನಸಿಕ ಮತ್ತು ಶಾರೀರಿಕ ಹಿತಕ್ಕೋಸ್ಕರವೇ ಆಗಿತ್ತು. ಆ ಕಾರಣದಿಂದ, ಬೀಳುವಿಕೆಗೆ ಮುಂಚೆಯೇ, ತೋಟವನ್ನು **ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ** ದೇವರು ಮನುಷ್ಯನನ್ನು **ಅದರಲ್ಲಿ ಇಟ್ಟನು**.

"ವ್ಯವಸಾಯ ಮಾಡು" ಎಂಬುದನ್ನು ಅನುವಾದಿಸಿರುವ (עָבַד, *ಅಬಾದ)* ಎಂಬ ಪದದ ಅರ್ಥವು ಭೂಮಿಯನ್ನು ಉಳುವವನಾಗಿ "ಕೆಲಸ ಮಾಡು" ಅಥವಾ "ಸೇವೆ ಮಾಡು" ಎಂದಾಗಿದೆ (2:5; 3:23; 4:2, 12). ಅದು ದೇವರನ್ನು ಸೇವಿಸುವ ಮತ್ತು ಆರಾಧಿಸುವ ಅರ್ಥದಲ್ಲಿ ಧಾರ್ಮಿಕ ಭಾವಾರ್ಥದಲ್ಲಿಯೂ ಬಳಸಲ್ಪಟ್ಟಿದೆ (ವಿಮೋಚನಕಾಂಡ 3:12; 4:23; 7:16; ಧರ್ಮೋಪದೇಶಕಾಂಡ 6:13; 10:12; 11:13; 13:4). ಯಾಜಕತ್ವಕ್ಕೆ ಸಂಬಂಧಿಸಿದ ವಾಕ್ಯಭಾಗಗಳಲ್ಲಿ, ಈ ಕ್ರಿಯಾಪದ ಮತ್ತು ಅದಕ್ಕೆ ಸಂಬಂಧಿಸಿದ ನಾಮಪದವೊಂದು ದೇವದರ್ಶನ ಗುಡಾರದಲ್ಲಿ ಮತ್ತು ಅನಂತರ ದೇವಾಲಯದಲ್ಲಿ ಲೇವಿಯರು ಮಾಡತಕ್ಕ ಧಾರ್ಮಿಕ ಕರ್ತವ್ಯಗಳನ್ನು ಬಣ್ಣಿಸುತ್ತವೆ (ವಿಮೋಚನಕಾಂಡ 38:21; ಅರಣ್ಯಕಾಂಡ 3:7, 8; 4:23, 24, 26; 18:6; 1 ಪೂರ್ವಕಾಲವೃತ್ತಾಂತ 24:3, 19; 2 ಪೂರ್ವಕಾಲವೃತ್ತಾಂತ 8:14).

ಅದೇ ರೀತಿಯಲ್ಲಿಯೇ, "ಕಾಯುವದಕ್ಕೂ" ಎಂಬುದನ್ನು ಅನುವಾದಿಸಿರುವ ಪದವು (שָׁמַר, *ಶಮಾರ)* "ಕಾವಲು ಇರು" ಎಂಬ ಅರ್ಥವನ್ನು ಸಹ ಕೊಡುತ್ತದೆ. ಅದು ಒಂದು ಲೌಕಿಕ ಅರ್ಥದಲ್ಲಿ ಬಳಸಲ್ಪಡಬಹುದು, ಜೀವವೃಕ್ಷಕ್ಎಕ ಹೋಗುವ ದಾರಿಗೆ ಕಾವಲು ಇರುವದು (3:24), ಸಹೋದರನೊಬ್ಬನನ್ನು ಅಪಾಯಕ್ಕೊಳಗಾಗದಂತೆ ಕಾಯುವದು (ಕಾವಲಾಗಿರುವದು) (4:9), ಅಥವಾ ಬೇಟೆಯಾಡುವ ಪ್ರಾಣಿಗಳಿಂದ ಕುರಿಯ ಮಂದೆಯನ್ನು ತಪ್ಪಿಸಿ ಕಾಯುವದು (30:31).[33] ಹೇಗೂ, ಅದರ ಹೆಚ್ಚು ಸಾಮಾನ್ಯವಾದ ಬಳಕೆಯು ಧಾರ್ಮಿಕ ಆಚರಣೆಗೆ ಸಂಬಂಧ ಪಟ್ಟದ್ದಾಗಿದೆ, ಉದಾಹರಣೆಗೆ ದೇವರ ಅಬ್ರಹಾಮ ಮತ್ತು ಆತನ ಸಂತಾನದವರ ಮೇಲೆ ವಿಧಿಸಿದ ಆತನ ಸುನ್ನತಿಯ ಒಡಂಬಡಿಕೆಯನ್ನು ಕೈಕೊಂಡು ನಡೆಯುವದು (17:9, 10).

ದೇವರು ಇಸ್ರಾಯೇಲ್ಯರಿಗೆ ಆತನ ಕಟ್ಟಳೆಗಳನ್ನು ಮತ್ತು ಆಜ್ಞೆಗಳನ್ನು ಕೈಕೊಂಡು ನಡೆಯಬೇಕೆಂದು ಆಜ್ಞಾಪಿಸಿದನು; ಅಂದರೆ, ಅವರ ಜೀವನ ಶೈಲಿಯು ಸದಾಚಾರ ಮತ್ತು ನೈತಿಕತೆಗಳಲ್ಲಿ ಐಗುಪ್ತರ ಮತ್ತು ಕಾನಾನ್ಯರ ಜೀವನ ಶೈಲಿಗಿಂತಲೂ ಸರ್ವೋಚ್ಛವಾಗಿರಬೇಕಾಗಿತ್ತು (ಯಾಜಕಕಾಂಡ 18:3-5). ಲೇವಿಯರಿಗೆ ದೇವದರ್ಶನ ಗುಡಾರದಲ್ಲಿನ ಪೀಠೋಪಕರಣಗಳನ್ನು ಆರೈಕೆ ಮಾಡುವದರ ಜೊತೆಗೆ (ಅರಣ್ಯಕಾಂಡ 3:8),

ಅನಧಿಕೃತ ವ್ಯಕ್ತಿಗಳು ದೇವದರ್ಶನ ಗುಡಾರದೊಳಗೆ ನುಸುಳದಂತೆ ಅದಕ್ಕೆ ಕಾವಲಾಗಿರುವ ಪ್ರಾಮುಖ್ಯವಾದ ಧಾರ್ಮಿಕ ಜವಾಬ್ದಾರಿಯಿತ್ತು (ಅರಣ್ಯಕಾಂಡ 1:51–53).

15ನೇ ವಚನದಲ್ಲಿನ ಪರಿಭಾಷೆಯು ವಿರೋಧಭಾಸಕ್ಕೊಳಗಾಗುತ್ತದೆ ಯಾಕೆಂದರೆ "ಇಟ್ಟನು" ಎಂಬುದರ ಇಬ್ರಿಯ ಪದದ (נוּחַ, *ನ್ಯಾವಾಚ)* ಅರ್ಥವು "ವಿಶ್ರಮಿಸು"[34] ಎಂದಾಗುತ್ತದೆ ಮತ್ತು ಕ್ರಿಯಾಪದವು *ನ್ಯೂವಾಚ*ನ ಕಾರಣಾರ್ಥ ರೂಪವಾಗಿದ್ದು, ದೇವರು ಮಾನವನನ್ನು ಕೆಲಸ ಮಾಡುವಂತೆ ತೋಟದಲ್ಲಿ ಇಡುವದರ ಮೂಲಕ "[ಮನುಷ್ಯನನ್ನು] ವಿಶ್ರಮಿಸುವಂತೆ ಮಾಡಿದನು" ಎಂಬ ಅಕ್ಷರಶಃ ಅರ್ಥವನ್ನು ಹೊಂದಿದೆ. ಇದು ವಿಮೋಚನಕಾಂಡ 20:10, 11ರಲ್ಲಿ ಕಂಡು ಬರುವ ಅದೇ ವಿಧವಾದ ವಿರೋಧಾಭಾಸ ಆಗಿರುತ್ತದೆ, ಅಲ್ಲಿ ದೇವರು ಇಸ್ರಾಯೇಲ್ಯರಿಗೆ ಸಬ್ಬತ್ ದಿನದಂದು ಯಾವದೇ ಕೆಲಸವನ್ನು ಮಾಡಕೂಡದೆಂದು ನಿಷೇಧ ಮಾಡಿದನು. ಬದಲಾಗಿ, ಅವರು ಆರು ದಿನಗಳ ಕಾಲ ಸೃಷ್ಟಿಯನ್ನು ಮಾಡಿದ ಬಳಿಕ, ಏಳನೆಯ ದಿನದಲ್ಲಿ ವಿಶ್ರಾಂತಿ (*ನ್ಯೂವಾಚ*) ತೆಗೆದುಕೊಂಡ ದೇವರನ್ನು ಅನುಕರಣೆ ಮಾಡಬೇಕಿತ್ತು. ದೇವರು ಸ್ವತಃ ತಾನೇನು ಮಾಡಿದನೋ ಅದಕ್ಕಿಂತ ಹೆಚ್ಚಾಗಿ, ಸಕಲ ಚಟುವಟಿಕೆಗಳನ್ನು ಸಬ್ಬತ್ ದಿನದಲ್ಲಿ ನಿಲ್ಲಿಸಿ ಬಿಡಬೇಕೆಂಬ ಇಂಗಿತವನ್ನೇನೂ ದೇವರು ಇಸ್ರಾಯೇಲ್ಯರ ವಿಷಯದಲ್ಲಿ ಹೊಂದಿರಲಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಸಬ್ಬತ್ ದಿನದಂದು ಕುಂಟ ಮನುಷ್ಯನನ್ನು ಗುಣಪಡಿಸಿದ್ದಕ್ಕಾಗಿ ಯೇಸುವು ಖಂಡನೆಗೊಳಗಾದ ವೇಳೆ, ಆತನು ಹೀಗೆ ಹೇಳಿದನು, "ನನ್ನ ತಂದೆಯು ಇಂದಿನವರೆಗೂ ಕೆಲಸಮಾಡುತ್ತಾನೆ, ನಾನೂ ಕೆಲಸಮಾಡುತ್ತೇನೆ" (ಯೋಹಾನ 5:17). ಯೇಸುವು ದೃಢಪಡಿಸಿದ ಭಾವನೆಯು ಏನೆಂದರೆ ದೇವರು ಸೃಷ್ಟಿಯನ್ನು ಪೋಷಣೆ ಮಾಡುವದಕ್ಕೆ, ತನ್ನ ಜನರ ಜೀವಿತಗಳನ್ನು ಆಶೀರ್ವದಿಸುವದಕ್ಕೆ, ಮತ್ತು ಅವರ ಪ್ರಾರ್ಥನೆಗಳಿಗೆ ಪ್ರತ್ಯುತ್ತರ ನೀಡುವದಕ್ಕೆ ಈ ದಿನದ ವರೆಗೂ, ಸಬ್ಬತ್ ದಿನದಲ್ಲಿ ಸಹ ಕೆಲಸವನ್ನು ಮುಂದುವರೆಸಿರುತ್ತಾನೆ ಎಂಬುದೆ. ಆದದರಿಂದ, ಕ್ರಿಸ್ತನು ದೇವರಿಗೆ ಮಹಿಮೆಯುಂಟು ಮಾಡುವದಾಗಿದ್ದ ಗುಣಪಡಿಸುವ ಕ್ರಿಯೆಗಳನ್ನು ಏಳನೆಯ ದಿನದಲ್ಲಿ ಮುಂದುವರೆಸಿದ್ದನು.

ಮೋಶೆಯ ಧರ್ಮಶಾಸ್ತ್ರದಲ್ಲಿ ಇದೇ ನಿಯಮವು ಅನ್ವಯಿಸಲ್ಪಟ್ಟಿರುತ್ತದೆ. ದೇವರ ಜನರು ಇನ್ನಷ್ಟು ದೊಡ್ಡ ಬೆಳೆಗಳನ್ನು ಉತ್ಪಾದಿಸುವಂತಾಗಲು, ಇನ್ನೂ ಹೆಚ್ಚಿನ ಸ್ವತ್ತುಗಳನ್ನು ಸಂಪಾದಿಸಿಕೊಳ್ಳುವಂತಾಗಲು, ಅಥವಾ ಸಬ್ಬತ್ ದಿನದಂದು ಕ್ರಯ ಮತ್ತು ವಿಕ್ರಯಗಳನ್ನು ಮಾಡುವ ಮುಖಾಂತರವಾಗಿ ಹೆಚ್ಚು ಲಾಭವನ್ನು ಮಾಡಿಕೊಳ್ಳುವಂತಾಗಬೇಕು ಎಂಬುದಕ್ಕೋಸ್ಕರವೇ ದೇವರ ಜನರು ಕೆಲಸವನ್ನು (ಪ್ರಾಥಮಿಕವಾಗಿ ತಮಗೋಸ್ಕರವಾಗಿ) ನಿಲ್ಲಿಸಬೇಕಾಗಿತ್ತಷ್ಟೆ (ನೋಡಿರಿ ವಿಮೋಚನಕಾಂಡ 31:13–17; ನೆಹಮೀಯ 13:15–18; ಯೆಶಾಯ 58:13, 14; ಆಮೋಸ 8:4–6). ಹೇಗೂ, ಯೇಸುವು ಅನಂತರದಲ್ಲಿ ತೋರಿಸಿ ಕೊಟ್ಟ ಪ್ರಕಾರವಾಗಿ, ಅವರು ಜನರ ಜೀವಿತಗಳಿಗೆ ಆಶೀರ್ವಾದವನ್ನು ತರುವಂತಹ ಹಾಗೂ ದೇವರಿಗೆ ಮಹಿಮೆಯನ್ನುಂಟು ಮಾಡುವಂತಹ ಕೆಲಸಗಳನ್ನು ಮುಂದುವರೆಸಬೇಕಾಗಿತ್ತು. ಕೆಲಸವು ಮಾನವರಿಗಾಗಿ ದೈವಿಕವಾಗಿ ಪ್ರತಿಷ್ಠಿಸಲ್ಪಟ್ಟಿರುವದು ಮಾತ್ರವೇ ಆಗಿರುವದಿಲ್ಲ, ಆದರೆ ಪ್ರಾಣಿಗಳಂತಲ್ಲದೆ, ಮಾನವರು ಮಾನವ ಜನಾಂಗಕ್ಕೆ ಒಂದು ಆಶೀರ್ವಾದಕರವಾಗುವಂತಹ ಕಟ್ಟುವಂಥ ಮತ್ತು ಪ್ರಯೋಜನಕರವಾದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವದನ್ನು ಹೊರತು ಪಡಿಸಿ ಎಂದಿಗೂ ನಿಜವಾದ "ವಿಶ್ರಾಂತಿ"ಯನ್ನು (ಒಂದು ರೀತಿಯ ಸಮಾಧಾನ, ಸಂತೃಪ್ತಿ, ಮತ್ತು ಜೀವನದಲ್ಲಿ ಏನೋ ಅರ್ಥಗರ್ಭಿತವಾದದ್ದೊಂದನ್ನು ಸಾಧಿಸಿದ್ದೇವೆಂಬದರಿಂದ ಬರುವ ಹಿತವನ್ನು) ಹೊಂದಲಾರರು.

**ವಚನಗಲು 16, 17.** ಲೇಖಕನು ಮಾನವರಿಗೋಸ್ಕರ ದೇವರು ಹೇರಳವಾದ ಏರ್ಪಾಡುಗಳನ್ನು ಮಾಡಿದ್ದರ ಕುರಿತು ಬಣ್ಣನೆಯನ್ನು ನೀಡುವ ಮೂಲಕ ಏದೆನ್ ತೋಟದಲ್ಲಿನ ಜೀವನದ ಕುರಿತಾದ ಕಥೆಯನ್ನು ಮುಂದುವರೆಸುತ್ತಾನೆ. ಯೆಹೋವನ ಆಜ್ಞೆಯು ಅನುಮತಿ ಮತ್ತು ನಿಷೇಧ ಎರಡನ್ನೂ ಒಳಗೊಂಡಿತ್ತು. 2:9ನೇ ವಚನದಲ್ಲಿ, ತೋಟವು ನೋಡುವದಕ್ಕೆ ರಮ್ಯವಾಗಿಯೂ ತಿನ್ನುವದಕ್ಕೆ ಉತ್ತಮವಾಗಿ ಇರುವಂಥ ಸಕಲ ವಿಧವಾದ ಆಹಾರವನ್ನು ಒದಗಿಸುವ ಮರಗಳನ್ನು, ವಿಶೇಷವಾಗಿ ಜೀವವೃಕ್ಷವನ್ನು ಒಳಗೊಂಡಿತ್ತು ಎಂಬುದಾಗಿ ಚರಿತ್ರೆಯು ಹೇಳುತ್ತದೆ. ದೇವರ ಔದಾರ್ಯದಿಂದ ಪುನಃ ಒತ್ತಿ ಹೇಳಿದ್ದೇನೆಂದರೆ ಮನುಷ್ಯನು **ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು**; ಹೇಗೂ, ಈ ಹಂತದಲ್ಲಿ, **ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು** ಎಂದು ಆತನು ಹೇಳಿದನು. ಮನುಷ್ಯನಿಗೆ ತೋಟದಲ್ಲಿ ಬಹಳಷ್ಟುಮಟ್ಟಿಗೆ ಸ್ವಾತಂತ್ರ್ಯವು ಇತ್ತಾದಾದರೂ, ಒಂದು ನಿಷೇಧವು ಇಲ್ಲವಾದರೆ ಆ ಸ್ವಾತಂತ್ರ್ಯಕ್ಕೆ ಅರ್ಥವೇ ಇರುವದಿಲ್ಲ. ತಾನು ಮಿತಿಯುಳ್ಳವನು ಎಂಬುದನ್ನು - ಸೃಷ್ಟಿಜೀವಿಯಂತೆ ಇದ್ದಾನೆ; ಹೊರತು ಸೃಷ್ಟಿಕರ್ತನಲ್ಲ ಎಂಬುದನ್ನು - ಗ್ರಹಿಸಿಕೊಳ್ಳಬೇಕಿತ್ತು. ಹಾಗಿದ್ದಾಗ್ಯೂ, ದೇವರು ಮನುಷ್ಯನ ಮೇಲೆ ಹೇರಿದ್ದ ಮಿತಿಯು ಅಷ್ಟೇನೂ ದೊಡ್ಡದಾಗಿರಲಿಲ್ಲ ಯಾಕೆಂದರೆ ಕೇವಲ ಒಂದೇ ಒಂದು ಮರದ ಹಣ್ಣನ್ನು ತಿನ್ನಬಾರದೆಂದಷ್ಟೇ ಅವನಿಗೆ ನಿಷೇಧವಿತ್ತು: ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರ.

ಇಲ್ಲಿ ಗಮನಿಸತಕ್ಕ ಪ್ರಾಮುಖ್ಯವಾದ ಸಂಗತಿಯು ಏನೆಂದರೆ ದೇವರು ವೈಯಕ್ತಿಕವಾಗಿ ಸಂಬೋಧಿಸುತ್ತಾನೆ. ಪ್ರಾಣಿಗಳಂತಲ್ಲದೆ, ಮನುಷ್ಯನು ವ್ಯಕ್ತಿಯಂತೆ ಯೆಹೋವನು ತನ್ನೊಂದಿಗೆ ಮಾತಾಡುವದನ್ನು ಆಲಿಸುವ ಸದವಕಾಶವನ್ನು ಹೊಂದಿರುತ್ತಾನೆ. ಆತನೊಬ್ಬನೇ ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾನೆ ಮತ್ತು ಸೃಷ್ಟಿಕರ್ತನೊಂದಿಗೆ ಸಹವಾಸವನ್ನು ಆನಂದಿಸಬಲ್ಲನು, ಆದರೆ ದೈವಿಕ ಆಜ್ಞೆಗಳಿಗೆ ವಿಧೇಯನಾಗುವ ಅಥವಾ ಆಗದಿರುವ ಆಯ್ಕೆಗಳನ್ನು ಹೊಂದಿದ್ದ ಏಕೈಕ ಜೀವಿ ಸಹ ಆಗಿದ್ದನು. ಭಾಷೆಯು ಒಂದು ಆಜ್ಞೆಯ ರೂಪದಲ್ಲಿತ್ತು; ಯಾಕೆಂದರೆ ದೇವರ ಆಜ್ಞೆಯು ಅರ್ಥವುಳ್ಳದ್ದೆಂಬಂತೆ ಕಾಣಿಸದಿದ್ದಾಗ್ಯೂ, ಆತನಲ್ಲಿ ಮಾನವನು ಭರವಸವಿಡುವನೋ ಅಥವಾ ಇಲ್ಲವೋ ಎಂಬುದೇ ಇಲ್ಲಿ ವಿಷಯವಾಗಿತ್ತು (ನೋಡಿರಿ 3:6).

ಮಾಡಕೂಡದೆಂಬ ಆಜ್ಞೆಯು ಮುಚ್ಚುಮರೆಯಿಲ್ಲದ್ದಾಗಿತ್ತು: **ತಿನ್ನಬಾರದು.** ಇಬ್ರಿಯ ವಾಕ್ಯವು ಇದೇ ವಿಧವಾದ ವಾಕ್ಯರಚನೆಯನ್ನು ಬಳಸುತ್ತದೆ, ಅದು ನಕಾರಾತ್ಮಕ לֹא *(ಲೋ)* ಎಂಬುದರಿಂದ ಆರಂಭಗೊಳ್ಳುತ್ತದೆ, ಅದು ಅನಂತರದಲ್ಲಿ ದಶಾಜ್ಞೆಯೊಳಗೆ ಕಂಡು ಬರುತ್ತದೆ (ವಿಮೋಚನಕಾಂಡ 20:1-17). "ತಿನ್ನಬಾರದು" ಎಂಬುದರ ಬದಲಾಗಿ NIVಯಲ್ಲಿ "ತಿನ್ನಲೇ ಕೂಡದು" ಎಂದಿರುತ್ತದೆ.

ಅವಿಧೇಯತೆಯ ಪರಿಣಾಮವನ್ನು כִּי (*ಕೀ*, "ಯಾಕೆಂದರೆ") ಕಾರಣಾರ್ಥಕ ಉಪವಾಕ್ಯವು ವಿವರಿಸುತ್ತದೆ: **ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು.** ದೈವಿಕ ಎಚ್ಚರಿಕೆಯನ್ನು ಅರ್ಥನಿರೂಪಣೆ ಮಾಡುವದು ಕಷ್ಟಕರವಾಗಿರುತ್ತದೆ ಯಾಕೆಂದರೆ ಮನುಷ್ಯನು ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದ *ಆ ದಿನದಲ್ಲಿ* ಸಾಯಲಿಲ್ಲ. ಇದಕ್ಕೆ ಮಂಡಿಸಲಾಗುವ ಒಂದು ವಿವರಣೆಯು ಏನೆಂದರೆ, ಕರ್ತನ ದಿನವು ಒಂದು ಸಾವಿರ ವರ್ಷಗಳಿದ್ದಂತೆ (2 ಪೇತ್ರ 3:8; ನೋಡಿರಿ ಕೀರ್ತನೆ 90:4) ಎಂದು ಬೈಬಲ್ ಹೇಳುತ್ತದಾದ್ದರಿಂದ, ಮನುಷ್ಯನು ಸಾವಿರ ವಯಸ್ಸನ್ನು ತಲುಪುವದಕ್ಕೆ ಮುಂಚೆ ಸಾಯುವನು ಎಂಬುದು ದೇವರ ತಾತ್ಪರ್ಯವಾಗಿತ್ತು -

ಮತ್ತು, ಖಂಡಿತವಾಗಿಯೂ, ಆತನು ಹಾಗೆಯೆ ಮರಣಿಸಿದನು. ಹೇಗೂ, ಇದೊಂದು ಕಲ್ಪನಾತ್ಮಕವಾದ ಅರ್ಥನಿರೂಪಣೆಯಾಗಿದ್ದು ಮನವರಿಕೆಯನ್ನುಂಟು ಮಾಡುವಂತದ್ದಲ್ಲ.

ಎರಡನೆಯ ಅಭಿಪ್ರಾಯವು ಏನೆಂದರೆ, ಅದು ಮೊದಲನೆಯ ಅಭಿಪ್ರಾಯವನ್ನು ಹೋಲುವಂಥದ್ದಾಗಿದ್ದು, ಅದೇನೆಂದರೆ "ದಿನ" ಎಂಬ ಪದವನ್ನು ಜಾತಿವಿಶಿಷ್ಟವಾದ ಅರ್ಥವೊಂದರಲ್ಲಿ ಅರ್ಥಮಾಡಿಕೊಳ್ಳತಕ್ಕದ್ದೇ, ಹೊರತು 24-ತಾಸು ಕಾಲಾವಧಿ ಅಲ್ಲ ಎಂಬುದೆ. ಆ "ದಿನ" (בְּיוֹם, *ಬೇಯೊಮ*) ಎಂಬದು 2:4ರಲ್ಲಿ ಕಾಣಿಸಿಕೊಳ್ಳುವ ಅದೇ ಮಾತಾಗಿರುತ್ತದೆ, ಅಲ್ಲಿ ಸೃಷ್ಟಿಯ ಆರು ದಿನಗಳ ಬಗ್ಗೆ ಉಲ್ಲೇಖವಿರುತ್ತದೆ (2:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ನೂರಾರು ವರ್ಷಗಳನ್ನು ಪ್ರತಿನಿಧಿಸುವಂತೆ ಒಂದು ಪದವು ಬಳಸಲ್ಪಡುವದೆಂಬುದು ಸ್ವಲ್ಪ ಅಸಹಜವೆಂಬಂತೆ ಕಾಣಿಸುತ್ತದೆ.

ಮೂರನೆಯ ವಿವರಣೆಯೊಂದು ಯಾವದೆಂದರೆ ಮನುಷ್ಯನು ನಿಷೇಧಿತ ಮರದಿಂದ ಹಣ್ಣನ್ನು ತಿಂದ ದಿನದಲ್ಲಿ ಆತನು ಮರ್ತ್ಯನಾಗುವನು ಎಂಬುದಾಗಿ ದೇವರು ಮನುಷ್ಯನಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದಾನೆ ಎಂಬುದೆ. ಈ ಅರ್ಥೈಸುವ ದಾರಿಯು ಮನುಷ್ಯನನ್ನು ದೇವರು ನಿರ್ಲಯತ್ವವುಳ್ಳವನಾಗಿ ನಿರ್ಮಿಸಿದ್ದನು ಎಂಬದಾಗಿ ಭಾವಿಸಿಕೊಳ್ಳುವಂತೆ ಮಾಡುತ್ತದಾದರೂ, ವಾಕ್ಯದಲ್ಲಿ ಯಾವದೂ ಆ ಅಭಿಪ್ರಾಯವನ್ನು ಸೂಚಿಸುವದಿಲ್ಲ. ಮನುಷ್ಯನು ತನ್ನ ಜೀವವನ್ನು ದೇವರಿಂದ ಪಡೆದುಕೊಂಡನು, ಮತ್ತು ಆ ಜೀವವನ್ನು ಶಾಶ್ವತವನ್ನಾಗಿಸಿಕೊಳ್ಳುವದು ಆತನು ಜೀವವೃಕ್ಷದ ಹಣ್ಣನ್ನು ತಿನ್ನುವದರ ಮೇಲೆ ಆಧಾರಗೊಂಡಿತ್ತು. ಅದು ಇನ್ನು ಮೇಲೆ ಮನುಷ್ಯನಿಗೆ ಲಭ್ಯವಿಲ್ಲದೆ ಹೋದಾಗ, ಅನಿವಾರ್ಯವಾದ ಫಲಿತವು ಮರಣವೇ ಆಗಿತ್ತು. ಅಷ್ಟುಮಾತ್ರವಲ್ಲದೆ, 1 ತಿಮೊಥೆ 6:16 ಪ್ರಕಾರವಾಗಿ, ನಿರ್ಲಯತ್ವವು ಕೇವಲ ದೇವರಿಗಿರುವ ಪ್ರತ್ಯೇಕವಾದ ಒಂದು ಗುಣವಾಗಿರುತ್ತದೆ.

ನಾಲ್ಕನೆಯ ಅರ್ಥನಿರೂಪಣೆಯೊಂದು ಎಂದರೆ ಅವರು ತಿಂದ ಆ ದಿನದಲ್ಲಿ "ಮರಣದ ಕಡೆಗೆ ಸಾಗುವವರಾಗಲಿದ್ದರು"[35] ಅಥವಾ ಅವರು ಒಂದು ದಿನ "ನಿಶ್ಚಯವಾಗಿಯೂ ಸಾಯುವರು" (NIV). ಸರಳವಾಗಿ ಹೇಳುವದಾದರೆ, ಇದು ತಕ್ಷಣವೇ ಮರಣ ಸಂಭವಿಸುವದೆಂಬ ಒಂದು ಬೆದರಿಕೆ ಆಗಿರಲಿಲ್ಲ, ಆದರೆ ದೇವರಿಗೆ ಅವಿಧೇಯರಾಗುವದು "ಅಂತಿಮವಾಗಿ ಮರಣದಲ್ಲಿ ಫಲಿತಗೊಳ್ಳುವದು"[36] ಎಂಬ ಒಂದು ಎಚ್ಚರಿಕೆಯಾಗಿತ್ತು. ಆದಾಮ ಮತ್ತು ಹವ್ವಳರಿಗೆ ಇದ್ದಂಥ ಗ್ರಹಿಕೆಯು ಇದಾಗಿರಲಿಲ್ಲ ಯಾಕೆಂದರೆ ಸರ್ಪವು ಸ್ತ್ರೀಯ ಮಾತನ್ನು ತದ್ವಿರುದ್ಧಗೊಳಿಸುವವನಾಗಿ ಹೀಗೆ ಹೇಳಿತು, "ನೀವು ಹೇಗೂ ಸಾಯುವದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುವವು; ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು" (3:4, 5). ಅವರು ತಿಂದ ಆ "ದಿನ"ವೇ ಸಾಯುವದರ ಬದಲಾಗಿ, ಆ "ದಿನ"ದಲ್ಲಿ ಅವರ ಕಣ್ಣುಗಳು ತೆರೆಯಲ್ಪಟ್ಟವು, ಮತ್ತು ಅವರಿಗೆ ಒಳ್ಳೇದು ಮತ್ತು ಕೆಟ್ಟದ್ದು ಏನೆಂದು ಗೊತ್ತಾಯಿತು (3:22). ಬೆದರಿಕೆ ಮತ್ತು ವಾಗ್ದಾನ ಇವೆರಡೂ ಅದೇ "ದಿನ"ದಂದು ಸಂಭವಿಸುವವೆಂದು ಎದುರು ನೋಡಲಾಗಿತ್ತೇ, ಹೊರತು ಭವಿಷ್ಯದಲ್ಲಿನ ನೂರಾರು ವರ್ಷಗಳಲ್ಲಿ ಅಲ್ಲ.

ಐದನೆಯ ವಿಚಾರವು ಏನೆಂದರೆ ಆದಾಮ ಮತ್ತು ಹವ್ವಳರು ನಿಷೇಧಿತ ಹಣ್ಣನ್ನು ತಿಂದ ವೇಳೆ ಆತ್ಮೀಕವಾಗಿ ಮರಣಿಸಿದರು ಯಾಕೆಂದರೆ ಅವರು ದೇವರಿಂದ ಅಗಲಿಸಲ್ಪಟ್ಟರು ಎಂಬುದೆ. ಇದರಲ್ಲಿ ಸ್ವಲ್ಪ ಸತ್ಯವು ಇರಬಹುದಾದರೂ, ಆದಿಕಾಂಡವು ಕೋರುವಂಥ ಸನ್ನಿವೇಶವು ಇದಾಗಿರುವದಿಲ್ಲ. ಅವರು ತೋಟದಿಂದ ಹೊರಗೆ ಓಡಿಸಲ್ಪಟ್ಟ ಬಳಿಕ

ಆತ್ಮೀಕವಾಗಿ ಮರಣಿಸಿದ ಸ್ಥಿತಿಯೊಂದರಲ್ಲಿ ಮುಂದುವರೆದರು ಎಂಬುದಾಗಿ ವಾಕ್ಯಭಾಗವು ತಿಳಿಸುವದಿಲ್ಲ; ಜೀವವೃಕ್ಷದಿಂದ ಅಗಲಿಸಲ್ಪಡುವದೆಂದರೆ ಅವರಗೆ ಶಾರೀರಿಕ ಮರಣವುಂಟಾಗಲಿದೆ ಎಂದರ್ಥವಾಗಿತ್ತು (3:22, 24). ಆದಾಮ ಮತ್ತು ಹವ್ವಳರ ಜೀವಿತಗಳುದ್ದಕ್ಕೂ ಅವರನ್ನು ಹಿಂಬಾಲಿಸಿದ ಪಾಪದ ಪರಿಣಾಮವು ಪ್ರಾಥಮಿಕವಾಗಿ ಇದಾಗಿತ್ತು: ಸ್ತ್ರೀಗೆ ಪ್ರಸವದ ವೇಳೆ ಹೆಚ್ಚುವರಿಯಾದ ನೋವು, ಪುರುಷನಿಗಾದರೋ ಬೆಳೆಗಳನ್ನು ಬೆಳೆಯಬೇಕಾದರೆ ಬಹಳ ಪ್ರಯಾಸ ಪಡಬೇಕೆಂಬುದು, ಮತ್ತು ಇಬ್ಬರಿಗೂ ಅಂತಿಮವಾಗಿ ದೈಹಿಕ ಮರಣವು ಸಂಭವಿಸುವದು ಎಂಬುದೆ. ಪೌಲನು ಪ್ರಥಮ ಪಾಪವನ್ನು ಅರ್ಥನಿರೂಪಣೆ ಮಾಡಿದ್ದು ಸಹ ಇದೇ ರೀತಿಯಾಗಿದೆ: "ಈ ವಿಷಯ ಹೇಗಂದರೆ - ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾ 5:12).

ಸ್ವಲ್ಪ ಮಟ್ಟಿಗೆ ಕಠಿಣತೆಗಳನ್ನು ಹೊಂದಿರುವಂತೆ ತೋರುವ ಐದನೆಯ ಸಾಧ್ಯತೆಯು ಏನೆಂದರೆ, ಮನುಷ್ಯನು ನಿಷೇಧಿಸಿದ ಮರದಿಂದ ಹಣ್ಣನ್ನು ತಿಂದ ದಿನದಲ್ಲಿ ಅವರನ ಮೇಲೆ ದೈಹಿಕ ಮರಣವು ಬರುವದು ಎಂದು ದೇವರು ಎಚ್ಚರಿಸಿದನು ಎಂಬುದೆ. ತೋಟದಲ್ಲಿ ಎರಡು ವಿಶೇಷವಾದ ವೃಕ್ಷಗಳು ಬೆಳೆದವು ಎಂಬುದನ್ನು ಮರೆಯಕೂಡದು: ಮೊದಲನೆಯದು, ಜೀವವೃಕ್ಷ, ಮನುಷ್ಯನಿಗೆ ಇದು ಆತ್ಮೀಕ ಜೀವವನ್ನುಕೊಡಲಿಲ್ಲ ಆದರೆ ಅದು ಮನುಷ್ಯನಿಗೆ ಲಭ್ಯವಿರುವಷ್ಟು ಕಾಲ ಆತನ ಜೀವನನ್ನು ಪೋಷಿಸಿಕೊಂಡು ಹೋಗುವದಾಗಿತ್ತು. ಅದೇ ರೀತಿಯಲ್ಲಿಯೇ, ಎರಡನೆಯ ಮರವು, ಒಳ್ಳೇದರ ಕೆಟ್ಟದ್ದರ ಅರುಹನ್ನುಂಟು ಮಾಡುವ ಮರವು ಮನುಷ್ಯನ ಆತ್ಮೀಕ ಜೀವಿತವನ್ನು ನಾಶಗೊಳಿಸಲಿಲ್ಲ ಯಾಕೆಂದರೆ ಪಶ್ಚಾತ್ತಾಪ ಮತ್ತು ದೇವರಿಗೆ ಅರಿಕೆ ಮಾಡುವದು ಅದನ್ನು ನವೀಕರಿಸುವದಕ್ಕೆ ಸಾಧ್ಯವಿತ್ತು. ಆದಾಗ್ಯೂ, ಅದು ಮಾಡಿದ್ದು ಏನೆಂದರೆ ಆದಾಮ ಮತ್ತು ಹವ್ವಳರಿಗೆ ಜೀವವೃಕ್ಷದ ಬಳಿಗೆ ಹೋಗಲು ದಾರಿಯು ಮುಚ್ಚಲ್ಪಡುವಂತೆ ಕಾರಣವಾಗುವದು; ತತ್ಫಲಿತವಾಗಿ, ಅವರ ಮೇಲೆ ಮತ್ತು ಇಡೀ ಮಾನವ ಜನಾಂಗದ ಮೇಲೆ ದೈಹಿಕ ಮರಣವು ಬಂದಿತು.

ದೈಹಿಕ ಮರಣವು ಆದಾಮ ಮತ್ತು ಹವ್ವಳರಿಗೆ ಅವರು ತಿಂದ ದಿನದಲ್ಲಿ ಬರಲಿಲ್ಲವಾದ್ದರಿಂದ ಸಮಸ್ಯೆಯು ಹಾಗೆಯೇ ಉಳಿಯುತ್ತದೆ. ಅದಕ್ಕೆ ಬಹಳ ತದ್ವಿರುದ್ಧವಾಗಿ, ಆದಾಮನು ನೂರಾರು ವರ್ಷಗಳ ವರೆಗೂ ಬದುಕಿದ ಮೇಲಷ್ಟೆ ಮರಣವು ಆತನನ್ನು ಸ್ವಾಧೀನಪಡಿಸಿಕೊಂಡಿತ್ತು. ದೇವರು ಸುಮ್ಮನೆ ಏನನ್ನೋ ಹೇಳಿದನೆಂದಾಗಲಿ ಅಥವಾ ತಾನು ಎಚ್ಚರಿಕೆಯಲ್ಲಿ ತಿಳಿಸಿದ್ದನ್ನು ಜಾರಿಗೆ ತರುವದಕ್ಕೆ ಮನಸ್ಸಿಲ್ಲದವನಾಗಿದ್ದನೆಂದಾಗಲಿ ನಾವು ಯೋಚಿಸಕೂಡದು. ನಾವು ಇಲ್ಲಿ ನ್ಯಾಯತೀರ್ಪಿನ ಮಧ್ಯದಲ್ಲಿ ಕೃಪೆಯ ಕುರಿತಾದ ಬೈಬಲಿನ ಪ್ರಥಮ ಮಿನುಗು ನೋಟವನ್ನು ಪಡೆಯುತ್ತಿದ್ದೇವೆಂಬುದಷ್ಟೆ ಇದರ ಅರ್ಥವಾಗಿದೆ. ಮನುಷ್ಯನು ಆ ದಿನದಲ್ಲಿ ಸಾಯುವದಕ್ಕೆ ಅರ್ಹನಾಗಿದ್ದನು; ಆದರೆ ದೇವರು ಕನಿಕರವನ್ನು ತೋರಿಸುವ ಮೂಲಕ, ಮನುಷ್ಯನನ್ನು ಜೀವಿಸುವಂತೆ ಅನುಮತಿಸಿದನು - ಆದಾಗ್ಯೂ ಮರಣದ ನೆರಳಿನಲ್ಲಿಯೇ ಬದುಕಬೇಕಿತ್ತು. ಮನುಷ್ಯನು ಶಿಕ್ಷೆಯ ಅಭಯತೆ, ದೇವರು ಯಾವಾಗಲೂ ಆತನ ಮರಣ ದಂಡನೆಗೆ ತಡೆಯಾಜ್ಞೆ ನೀಡುವನೆಂದು ಯೋಚನೆಯುಳ್ಳವನಾಗಿ ಪಾಪವನ್ನು ಮಾಡುವದಕ್ಕೆ ಸಾಧ್ಯವಿಲ್ಲ. ಇನ್ನೊಂದು ಕಡೆಯಲ್ಲಿ, ಈ ಘಟನೆಯು ಒಂದು ನಿರೀಕ್ಷೆಯನ್ನಂತೂ ಒದಗಿಸುತ್ತದೆ. "ಪಾಪವು ಕೊಡುವ ಸಂಬಳ ಮರಣ" ಮತ್ತು ನಾವು ಮರಣಕ್ಕೆ ಯೋಗ್ಯರಾಗಿದ್ದೇವೆ ಎಂಬುದು ನಮಗೆ ತಿಳಿದದೆಯಾದರೂ, ನಾವು ಬದುಕುತ್ತಲಿರುವಂತೆ ದೇವರು ಅನುಮತಿಸುವನು ಯಾಕೆಂದರೆ ಆತನು "ಯಾವನಾದರೂ ನಾಶವಾಗುವದರಲ್ಲಿ

ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ... ದೀರ್ಘಶಾಂತಿಯುಳ್ಳವನಾಗಿದ್ದಾನೆ" (2 ಪೇತ್ರ 3:9).

## ಪ್ರಾಣಿಗಳೊಳಗೆ ಮನುಷ್ಯನಿಗೆ ಸರಿಹೊಂದುವ ಯಾವ ಸಂಗಾತಿಯೂ ಇಲ್ಲದಿರುವದು (2:18-20)

**18ಮತ್ತು ಯೆಹೋವದೇವರು - ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು ಅಂದನು. 19ಆಗ ಆತನು ಎಲ್ಲಾ ಭೂಜಂತುಗಳನ್ನೂ ಆಕಾಶದ ಪಕ್ಷಿಗಳನ್ನೂ ಮಣ್ಣಿನಿಂದ ನಿರ್ಮಿಸಿ - ಇವುಗಳಿಗೆ ಆ ಮನುಷ್ಯನು ಏನೇನು ಹೆಸರಿಡುವನು ನೋಡೋಣ ಎಂದು ಅವನ ಬಳಿಗೆ ಬರಮಾಡಿದನು. ಮನುಷ್ಯನು ಒಂದೊಂದು ಪ್ರಾಣಿಗೆ ಯಾವ ಯಾವ ಹೆಸರಿಟ್ಟನೋ ಅದೇ ಹೆಸರಾಯಿತು. 20ಹೀಗೆ ಆ ಮನುಷ್ಯನು ಎಲ್ಲಾ ಪಶುಗಳಿಗೂ ಆಕಾಶದ ಪಕ್ಷಿಗಳಿಗೂ ಕಾಡು ಮೃಗಗಳಿಗೂ ಹೆಸರಿಟ್ಟನು. ಆದರೆ ಆ ಮನುಷ್ಯನಿಗೆ ಸರಿಬೀಳುವ ಸಹಕಾರಿ ಕಾಣಿಸಲಿಲ್ಲ.**

**ವಚನ 18.** ಆತನು ಈ ಮುಂಚೆ ಮಾಡಿದ ಘೋಷಣೆಗಳಿಗೆ ತದ್ವಿರುದ್ಧವಾಗಿ - ಅವುಗಳೆಲ್ಲವೂ ಸೃಷ್ಟಿಯು "ಒಳ್ಳೇದು" ಅಥವಾ "ಬಹು ಒಳ್ಳೇದು" ಎಂಬುದಾಗಿ ಸಕಾರಾತ್ಮಕವಾದ ಹೇಳಿಕೆಗಳಾಗಿದ್ದವು - ಈ ಹಂತದಲ್ಲಿ, **ದೇವರು** ಹೀಗೆ ಉದ್ಗರಿಸಿದನು, **ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು.** 1:27ರಲ್ಲಿ ಮಾನವನ ಸೃಷ್ಟಿಯ ಮುಂಚೆ, "ಮನುಷ್ಯನನ್ನು ಉಂಟುಮಾಡೋಣ" (1:26) ಎಂಬ ದೈವಿಕ ಹೇಳಿಕೆಯೊಂದು ನುಡಿಯಲ್ಪಟ್ಟ ಪ್ರಕಾರವೇ, ದೇವರು ಸ್ತ್ರೀಯನ್ನು ಸೃಷ್ಟಿಸುವ ಮುನ್ನ, ಮನುಷ್ಯನು ಒಬ್ಬಂಟಿಗನಾಗಿರುವದು ಒಳ್ಳೇದಲ್ಲ ಎಂದು ಅಭಿಪ್ರಾಯ ಪಟ್ಟನು. ಆದದರಿಂದ, ದೇವರು ಆತನಿಗೋಸ್ಕರ ಒಬ್ಬ ಸರಿಹೊಂದುವ ಸಂಗಾತಿಯನ್ನು ಉಂಟು ಮಾಡಬೇಕೆಂದು ನಿರ್ಧರಿಸಿಕೊಂಡನು. 1:27ರಲ್ಲಿ ಸ್ತ್ರೀಯನ್ನು ಉಂಟು ಮಾಡಿದ ಬಳಿಕವಷ್ಟೆ, ದೇವರು ಸೃಷ್ಟಿಯನ್ನೆಲ್ಲಾ ಪರಿಶೀಲನೆ ಮಾಡಿದಾಗ, 1:31ರಲ್ಲಿ ಆತನು "ಅದು ಬಹು ಒಳ್ಳೇದಾಗಿತ್ತು" ಎಂಬ ದೈವಿಕ ಘೋಷಣೆಯನ್ನು ನೀಡಿದನು.

ಪುರುಷನು ತಾನೊಬ್ಬನೇ ಇರುವದು ಒಳ್ಳೇದಲ್ಲ ಎಂಬ ದೇವರ ಹೇಳಿಕೆಯು ಸಂಗಾತಿಯ ಅಗತ್ಯತೆಯ ಕುರಿತಾಗಿ ವಾಚಕನಲ್ಲಿ ಜಾಗೃತಿಯನ್ನು ಮೂಡಿಸುತ್ತದೆ. "ಯಾವ ಮನುಷ್ಯನೂ ಒಂದು ದ್ವೀಪವಲ್ಲ"[37] ಆದಕಾರಣ, ಕರ್ತನು ಆತನಿಗೋಸ್ಕರ ಸರಿಹೊಂದುವ ಸಹಾಯಕಳನ್ನು ಉಂಟು ಮಾಡಲು ದೃಢನಿರ್ಧಾರ ಮಾಡಿದನು. ಕೆಲವರು "ಸಹಕಾರಿ" ಎಂಬ ಪದವನ್ನು ಅಪಾರ್ಥ ಮಾಡಿಕೊಂಡವರಾಗಿದ್ದು ಅದು ಸ್ತ್ರೀಯನ್ನು ಪುರುಷನಿಗಿಂತ ಕಡಿಮೆಯಾದವಳೆಂದು ತೋರ್ಪಡಿಸುವ ಹೀನಯಿಸುವ ಪದವೆಂದು ಭಾವಿಸಿಕೊಳ್ಳುತ್ತಾರೆ. ಅವರ ಪ್ರಕಾರವಾದರೋ, ಈ ಪದವು ಆಕೆಯನ್ನು ಮನೆಯ ಕೆಲಸಗಳಲ್ಲಿ ಮನೆಯ ಯಜಮಾನಿಗೆ ಸಹಾಯವನ್ನು ಮಾಡುವಂಥ ಸೇವಕಳೊಬ್ಬಳಿಗೆ ಹೋಲಿಕೆ ಮಾಡುವಂತೆ ಅನ್ನಿಸುತ್ತದೆ. ಈ ಪದಗುಚ್ಛದಿಂದ ಮಾಡಲಾಗುವ ಇನ್ನೊಂದು ಸಾದೃಶ್ಯವು ಯಾವದೆಂದರೆ ಪರಿಣಿತಿಯಿಲ್ಲದ ತರಬೇತಿಯಲ್ಲಿರುವ ವ್ಯಕ್ತಿಯೊಬ್ಬನು ಪರಿಣಿತ ವಿದ್ಯುತ್ ಉಪಕರಣಗಳ ದುರಸ್ತಿಗಾರ, ಬಡಗಿ, ಅಥವಾ ಕೊಳಾಯಿ ರೀಪೆರಿಗಾರನ ಬಳಿಯಲ್ಲಿ ಒಂದು ಉದ್ಯೋಗವೊಂದರಲ್ಲಿ ಸಹಾಯ ಮಾಡುವದಕ್ಕೆ ಹೋಗುವದು. ತರಬೇತಿಯಲ್ಲಿರುವವನಿಗೆ ಕೆಲವೊಂದು ನುರಿತವಲ್ಲದ ಕೆಲಸಗಳನ್ನು ಮಾಡುವಂತೆ ಹೇಳಬಹುದು, ಆದರೆ ಆತನಿಗೆ ತರಬೇತಿ ಮತ್ತು ಕೆಲಸದ ಹೆಚ್ಚು ತಾಂತ್ರಿಕ

ಅಂಶಗಳಿಂದ ಕೂಡಿದ ಜವಾಬ್ದಾರಿಯನ್ನು ವಹಿಸುವದಕ್ಕೆ ಅವಶ್ಯಕವಾದಮ ಅನುಭವವು ಇರುವದಿಲ್ಲ.

"ಸಹಕಾರಿ" (עֵזֶר, *'ಏಝೆರ್*) ಎಂಬುದರ ಬೈಬಲ್ ಬಳಕೆಯು ಈ ವಿಚಾರಗಳಿಗಿಂತಲೂ ಬಹಳ ವ್ಯತ್ಯಾಸವಾಗಿರುತ್ತದೆ. ಮೂಲಭೂತವಾಗಿ, ಒಬ್ಬ ವ್ಯಕ್ತಿಗೆ, ಗುಂಪಿಗೆ, ಅಥವಾ ದೇಶ್ಕೆ ಏನಾದರೂ ಏಕಾಂಗಿಯಾಗಿ ಮಾಡುವದಕ್ಕೆ ಸಾಧ್ಯವಿಲ್ಲದ ಕೆಲಸದಲ್ಲಿ ಸಹಾಯವನ್ನು ಮಾಡುವ ಯಾವದೇ ವ್ಯಕ್ತಿ ಎಂಬುದು ಅದರ ಅರ್ಥವಾಗಿರುತ್ತದೆ. ಅದರಲ್ಲಿ "ಒಬ್ಬನ ಶಕ್ತಿಯ ಸಾಕಾಗದೇ ಹೋಗುವ ಸಂದರ್ಭದಲ್ಲಿ [ಕರ್ತೃ] ಮತ್ತು [ವಿಷಯ]ದಲ್ಲಿ ಸಾಮಾನ್ಯ ಕ್ರಿಯೆ ಅಥವಾ ಸಹಕಾರ"[38] ಇವುಗಳ ವಿಚಾರವನ್ನೊಳಗೊಂಡಿರುತ್ತದೆ. ಅನೇಕ ಸಾರಿ, ಸಹಾಯವನ್ನು ಪಡೆಯುವವನಿಗಿಂತಲೂ ಸಹಕಾರಿ ಹೆಚ್ಚು ಶ್ರೇಷ್ಠನಾಗಿರುತ್ತಾನೆ, ಒಂದು ದುರ್ಬಲ ದೇಶವಾದ ಯೆಹೂದವು ಬಾಬೆಲಿನ ವಿರುದ್ಧ ಹೋರಾಟ ಮಾಡುವದಕ್ಕೆ ಐಗುಪ್ತದ ಸಹಾಯವನ್ನು ಕೋರಿದ ರೀತಿಯಲ್ಲಿ ಇದಾಗಿರುತ್ತದೆ (ಯೆಶಾಯ 31:1-3). ಸಹಾಯವನ್ನು ಪಡೆಯುತ್ತಿರುವವನಿಗಿಂತ ಸಹಾಯ ಮಾಡುವವನ ಶ್ರೇಷ್ಠತೆಯು ಹಳೆಯ ಒಡಂಬಡಿಕೆಯಲ್ಲಿ ಸುಮಾರು ನಾಲ್ವತ್ತು ಸಾರಿ ಸ್ಪಷ್ಟಗೊಂಡಿರುತ್ತದೆ, ಅಲ್ಲಿ ದೇವರು ತನ್ನ ಜನರಿಗೆ "ಸಹಾಯಕ" (*ಏಝೆರ್*) ಎಂಬುದಾಗಿ ಚಿತ್ರಿಸಲ್ಪಟ್ಟಿರುತ್ತಾನೆ (ನೋಡಿರಿ ವಿಮೋಚನಕಾಂಡ 18:4; ಧರ್ಮೋಪದೇಶಕಾಂಡ 33:26; 1 ಪೂರ್ವಕಾಲವೃತ್ತಾಂತ 12:18; 2 ಪೂರ್ವಕಾಲವೃತ್ತಾಂತ 26:7; ಕೀರ್ತನೆ 10:14; 46:5; 54:4; 79:9; 119:173; ಯೆಶಾಯ 41:10, 13, 14; 44:2; 49:8).[39] ದೇವರು ತನ್ನಲ್ಲಿ ಭರವಸವಿಟ್ಟು ಕಷ್ಟದ ಕಾಲದಲ್ಲಿ ಸಹಾಯಕ್ಕಾಗಿ ಕೂಗುವಂಥವರಿಗೆ ಸಹಾಯವನ್ನು ಮಾಡಬೇಕೆಂದು ಕೆಳಕ್ಕೆ ಇಳಿಯುವನೆಂಬ ಕಾರಣಕ್ಕಾಗಿ ಆತನನ್ನು ಮನುಷ್ಯನಿಗಿಂತ ಕಡಿಮೆಯಾದವನೆಂದು ಯಾವ ವಿಧದಲ್ಲಿಯೂ ಭಾವಿಸಿಕೊಳ್ಳಲು ಸಾಧ್ಯವಿಲ್ಲ.

ಪುರುಷನಿಗೆ ಸಹಕಾರಿಯಾಗಿರುವ ಸ್ತ್ರೀಯು, ಆತನಿಗಿಂತ ಕಡಿಮೆಯಾದವಳೂ ಅಲ್ಲ ಶ್ರೇಷ್ಠಳೂ ಅಲ್ಲ; ಬದಲಾಗಿ, ಆಕೆಯು ಆತನಿಗೆ ಸಹಕಾರಿಯಾಗಿರಬೇಕಿತ್ತು ಮತ್ತು ಒಂದು ಜೀವನವನ್ನು ಕಟ್ಟಿಕೊಳ್ಳುವದರಲ್ಲಿ ಆತನೊಂದಿಗೆ ಸಮಾನಳಾಗಿ ಇರಬೇಕಾಗಿತ್ತು. ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಗೆ ಬೇರೆ ಬೇರೆ ಪ್ರಕೃತಿಗಳಿರುತ್ತವೆ ಮತ್ತು ದಾಂಪತ್ಯದಲ್ಲಿ ಬೇರೆ ಬೇರೆ ವರಗಳನ್ನು ಮತ್ತು ಗುಣಗಳನ್ನು ಕೊಡುಗೆ ನೀಡುತ್ತಾರೆ. ಇಬ್ಬರು ಸೇರಿಕೊಂಡು ಒಂದು ಜೀವನವನ್ನು ರೂಪಿಸಿಕೊಳ್ಳುವ ವೇಳೆ ಇಬ್ಬರಿಗೂ ಒಂದೊಂದು ಪಾತ್ರವಿರುತ್ತದೆ, ಆದರೆ ಅವರ ಬೇರೆ ಬೇರೆ ಪಾತ್ರಗಳು ಪರಸ್ಪರ ಪೂರಕವಾಗಿರುತ್ತವೆ (ಕಡಿಮೆಯಾದದ್ದನ್ನು ಭರ್ತಿಗೊಳಿಸಿ ಸಂಪೂರ್ಣಗೊಳಿಸುವದು), ಬೇರೆ ವ್ಯಕ್ತಿಯಲ್ಲಿ ಕೊರತೆಯಾಗಿರುವದನ್ನು ಒದಗಿಸಿ ದುರ್ಬಲವಾಗಿರಬಹುದಾದ ಕ್ಷೇತ್ರವನ್ನು ಬಲಗೊಳಿಸುವದಾಗಿದೆ. ಅದರ ಫಲಿತಾಂಶವು ಏನೆಂದರೆ ದಾಂಪತ್ಯದಲ್ಲಿ ಒಬ್ಬ ವ್ಯಕ್ತಿಯು ಒದಗಿಸುವ ಗುಣಗಳು ಮತ್ತು ಸಾಮರ್ಥ್ಯಗಳ ಮೂಲಕವಾಗಿ ಪರಸ್ಪರವಾಗಿ ಇನ್ನಷ್ಟು ಉತ್ತಮ ವ್ಯಕ್ತಿಗಳಾಗುವರು. ಖಂಡಿತವಾಗಿಯೂ, ಆದಿಕಾಂಡದ ಲೇಖಕನು, ಪುರುಷನಿಗೆ ಸಹಕಾರಿಯಾಗಿದ್ದಂಥ ಸ್ತ್ರೀಯ ಸೃಷ್ಟಿಯ ಕುರಿತು ಬಣ್ಣಿಸುತ್ತಿದ್ದಾನೆ; ಆದರೆ ತತ್ವವು ಪ್ರತಿಯೊಬ್ಬ ಗಂಡ/ಹೆಂಡತಿ ಸಂಬಂಧಕ್ಕೆ ಅನ್ವಯವಾಗುತ್ತದೆ (ಮತ್ತಾಯ 19:3-6; ಎಫೆಸ 5:25-33; 1 ಪೇತ್ರ 3:1-7).

ಪುರುಷನಿಗೆ ಒಬ್ಬ ಸಹಕಾರಿ ಆಗಿರುವದರ ಜೊತೆಗೆ, ಸ್ತ್ರೀಯ ಸ್ಥಾನವನ್ನು ಇನ್ನಷ್ಟು ಅರ್ಥನಿರೂಪಣೆ ಮಾಡಿ ಆತನಿಗೆ "ಸರಿಬೀಳುವ" (נֶגֶד, *ನೆಗೆಡ)* ಅಥವಾ ಅಕ್ಷರಶಃ ಆತನಿಗೆ "ಮುಂದೆ" ಇರುವವಳು ಎಂಬುದಾಗಿ ಹೇಳಲ್ಪಟ್ಟಿದ್ದಾಳೆ. ಈ ಪದವು "ಸರ್ವೋಚ್ಚತೆ" ಅಥವಾ "ಗಮನ ಸೆಳೆಯುವವಳಾಗಿರುವದು" ಎಂಬ ಸೂಚ್ಯಾರ್ಥವನ್ನು ಹೊಂದಿರುತ್ತದೆ; ಆದರೆ 2:18,

20ರಲ್ಲಿ, ಆಕೆಯು ಪುರುಷನಿಗೆ "ಹೊಂದಿಕೆಯಾಗುವವಳು"[40] ಎಂಬುದಾಗಿ ಸೂಚಿಸುತ್ತದೆ. ಇಬ್ರಿಯ ಭಾಷೆಯಲ್ಲಿ ಒಂದು ಸಂಯುಕ್ತ ಉಪಸರ್ಗೀಯ ಪದಗುಚ್ಛವನ್ನು ಹೊಂದಿದ್ದು ಅದರ ಅಕ್ಷರಶಃ ಅರ್ಥವು "ಆತನಿಗೆ ತದ್ವಿರುದ್ಧವಾದಂಥವಳು"[41] ಎಂದಾಗಿರುತ್ತದೆ. ಸರಳವಾಗಿ ಹೇಳುವದಾದರೆ, ಆತನಿಗೆ ಸರಿಯಾಗಿ ಆತನಂತೆಯೇ ಇರುವವಳೊಬ್ಬಳ ಅಗತ್ಯವು ಇರುವದಿಲ್ಲ, ಆದರೆ ಕೆಲವೊಂದು ವಿಧಗಳಲ್ಲಿ ಆತನಂತೆ ಮತ್ತು ಇನ್ನು ಕೆಲವೊಂದು ವಿಧಗಳಲ್ಲಿ ಆತನಂತೆ ಇಲ್ಲದವಳು ಅಗತ್ಯವಿರುತ್ತದೆ. ಪುರುಷನಿಗೆ ಆತನ ದೈನಂದಿನ ಕೆಲಸದಲ್ಲಿ ಸಹಾಯ ಮಾಡುವದಕ್ಕೆ ಅಥವಾ ಆತನ ಮಕ್ಕಳನ್ನು ಹೆರುವದಕ್ಕೆ ಸಹಾಯ ಮಾಡುವಂಥವಳಿಗಿಂತಲೂ ಹೆಚ್ಚಿನವಳ ಅಗತ್ಯತೆಯು ಇರುತ್ತದೆ. ಈ ಪಾತ್ರಗಳು ಸಹ ಅದರಲ್ಲಿ ಸೇರ್ಪಡೆಗೊಳ್ಳಬಹುದಾದರೂ, ಆತನು ಪರಸ್ಪರ ಆತ್ಮೀಕ, ಮನೋವೈಜ್ಞಾನಿಕವಾಗಿ, ಮತ್ತು ಒಬ್ಬ ಹೆಂಡತಿಯೊಂದಿಗಿನ ಸಂಬಂಧವು ಮಾತ್ರವೇ ಕೊಡಬಲ್ಲ ವಿರುದ್ಧ ಲಿಂಗದವರೊಂದಿಗಿನ ನಿಕಟ ಸಹವಾಸದ ದೈಹಿಕ ಬೆಂಬಲ ಇವುಗಳು ಸಹ ಆತನಿಗೆ ಅಗತ್ಯವಿರುತ್ತವೆ.[42] ಮನುಷ್ಯನು ನಿವಾಸಿಸುವದಕ್ಕೆ ದೇವರು ಒಂದು ಪರಿಪೂರ್ಣ ಪರಿಸರವನ್ನು ಸೃಷ್ಟಿಸುವದಷ್ಟೇ ಆಗಲಿ ಅಥವಾ ಆತನು ತನ್ನ ಸೃಷ್ಟಿಕರ್ತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿಕೊಳ್ಳುವದಷ್ಟೇ ಸಾಕಾಗಿರಲಿಲ್ಲ; ಇತರ ಮಾನವರೊಂದಿಗೆ, ವಿಶೇಷವಾಗಿ ಹೆಂಡತಿಯೊಬ್ಬಳೊಂದಿಗೆ ಸಂಬಂಧಗಳನ್ನು ಇಟ್ಟುಕೊಳ್ಳುವ ಒಂದು ಸಾಮಾಜಿಕ ಜೀವಿಯಾಗಿ ಮನುಷ್ಯನನ್ನು ದೇವರು ಉಂಟು ಮಾಡಿದನು. ಮನುಷ್ಯನು ಒಬ್ಬಂಟಿಗನಾಗಿರುವದು ಒಳ್ಳೇದಲ್ಲ ಎಂದು ದೇವರು ಅಭಿಪ್ರಾಯ ಪಟ್ಟಾಗ, ಆತನ ಮಾತಿನ ತಿರುಳು ಏನಾಗಿತ್ತೆಂದರೆ ಮಾನವನು "ಪ್ರೀತಿಸಿ, ತನ್ನ ಸ್ವಂತ ಮಟ್ಟಕ್ಕೆ ಅನುಗುಣವಾಗಿರುವ ಬೇರೊಬ್ಬರಿಗೆ ... ತನ್ನನ್ನು ಒಪ್ಪಿಸಿಕೊಡುವ ಹೊರತು"[43] ನಿಜವಾಗಿಯೂ ಜೀವಿಸಲಾರನು ಎಂಬುದೆ.

**ವಚನ 19.** ಮುಂದೆ ತಿಳಿಸಲ್ಪಡುವಂಥದ್ದು **ಎಲ್ಲಾ ಭೂಜಂತುಗಳನ್ನೂ ಆಕಾಶದ ಪಕ್ಷಿಗಳನ್ನೂ** ಸೃಷ್ಟಿಸಿದ್ದರ ಕುರಿತಾಗಿದೆ. ಕೆಲವರು ಈ ವಾಕ್ಯಭಾಗವು ಇಲ್ಲಿರುವದು 1:20-25ಕ್ಕೆ ತದ್ವಿರುದ್ಧವಾಗಿರುವಂಥದ್ದು ಎಂದು ಕಾಣುತ್ತಾರೆ, ಅಲ್ಲಿ ದೇವರು ಮನುಷ್ಯನಿಗೆ ಮುಂಚೆಯೇ ಈ ಜೀವಿಗಳನ್ನು ಅಸ್ತಿತ್ವಕ್ಕೆ ತಂದಿದ್ದನು. ಹೇಗೂ, ನಾವು ಈಗಾಗಲೇ ನೋಡಿರುವ ಪ್ರಕಾರ, 1ನೇ ಅಧ್ಯಾಯವು ಕಾಲಾನುಕ್ರಮದ ಚರಿತ್ರೆಯಾದರೆ, 2ನೇ ಅಧ್ಯಾಯವು ಅಧಿಕವಾಗಿ ವಿಷಯಾಧಾರಿತ ಮತ್ತು ದೈವಶಾಸ್ತ್ರೀಕವಾಗಿರುತ್ತದೆ, ಸೃಷ್ಟಿಯಲ್ಲಿ ದೇವರು ಏನು ಮಾಡಿದನು ಎಂಬುದನ್ನಷ್ಟೆ ಅಲ್ಲ, ಆದರೆ ಆತನು ಈ ಸಂಗತಿಗಳನ್ನು ಏಕೆ ಮತ್ತು ಹೇಗೆ ಮಾಡಿದನೆಂಬುದನ್ನು ಪ್ರಕಟಗೊಳಿಸುತ್ತದೆ. ಇಲ್ಲಿ ತಿಳಿಯಪಡಿಸಲ್ಪಟ್ಟಿರುವದು ಏನೆಂದರೆ ದೇವರು ಪ್ರಾಣಿಗಳ ಜಗತ್ತಿನೊಂದಿಗೆ ಸಾಧ್ಯವಿರುವದಕ್ಕಿಂತಲೂ ಅಧಿಕವಾದ ವೈಯಕ್ತಿಕ ಮತ್ತು ನಿಕಟವಾದ ಸಂಬಂಧವನ್ನು ತನ್ನ ಹಾಗೂ ಮಾನವರ ನಡುವೆ ಏರ್ಪಡಿಸಿಕೊಂಡನು ಯಾಕೆಂದರೆ ಅವರ ಸ್ವಭಾವವೇ ಆ ರೀತಿಯದ್ದಾಗಿತ್ತು (2:7-9, 15-17). ಬಳಿಕ ಲೇಖಕನು ಪುರುಷ ಮತ್ತು ಸ್ತ್ರೀಯರ ಸಂಬಂಧದಲ್ಲಿಯೂ ಅದು ಅಷ್ಟೇ ಸತ್ಯವಾಗಿತ್ತೆಂಬುದನ್ನು ತಿಳಿಸುತ್ತಾನೆ, ಮಾನವರು ಹಾಗೂ ಪ್ರಾಣಿಗಳ ನಡುವೆ ಎಂದಾದರೂ ಸಾಧ್ಯವಿರುವದಕ್ಕಿಂತಲೂ ಅಧಿಕ ನಿಕಟವಾದ ಸಂಬಂಧವು ಅದಾಗಿರಬೇಕೆಂಬುದು ದೇವರ ಇಂಗಿತವಾಗಿತ್ತು (2:18-25).

ಚರಿತ್ರೆಯು ಮೊದಲು ಮಾನವ ಹಾಗೂ ಆತನಿಗಿಂತ ಕೆಳಮಟ್ಟದ ಪ್ರಾಣಿಗಳ ಸೃಷ್ಟಿಯ ನಡುವಿನ ಸಾಮ್ಯತೆಯನ್ನು ಗಮನಕ್ಕೆ ತರುತ್ತಾನೆ. ಮಾನವ ಹಾಗೂ ಈ ಜೀವಿಗಳು ಎರಡನ್ನೂ **ದೇವರು** ಧೂಳಿನಿಂದ, ಅಥವಾ **ಮಣ್ಣಿನಿಂದ ನಿರ್ಮಿಸಿದನು**; ಮತ್ತು ಇಬ್ಬರೂ

"ಜೀವಿ[ಗಳು]" ಅಥವಾ **ಪ್ರಾಣಿ**[ಗಳು] ಎಂದು ಕರೆಯಲ್ಪಟ್ಟಿರುತ್ತಾರೆ (2:7, 19). ಪುರುಷನಿಗೆ ಒಬ್ಬ ನಿಜವಾದ ಸಹಕಾರಿಯ ಅಗತ್ಯವಿರುತ್ತದೆಂದು ದೇವರು ಗುರುತಿಸಿದನೆಂಬ ವಾಸ್ತವಾಂಶದ ಹೊರತಾಗಿಯೂ, ಆತನು ಪುರುಷನಿಗೋಸ್ಕರ ಏರ್ಪಾಡನ್ನು ಮಾಡುವದಕ್ಕೆ ವಿಳಂಬ ಮಾಡಿದನು. ಬದಲಾಗಿ, ಆತನು ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಹೆಸರನ್ನಿಡುವಂತೆ ಅವುಗಳನ್ನು ಆತನ ಬಳಿಗೆ ಬರಮಾಡಿದನು. **ಮನುಷ್ಯನು ಒಂದೊಂದು ಪ್ರಾಣಿಗೆ ಯಾವ ಯಾವ ಹೆಸರಿಟ್ಟನೋ ಅದೇ ಹೆಸರಾಯಿತು**. ಈ ಹಂತದಲ್ಲಿ, ಮನುಷ್ಯನು ದೇವರು 1:26, 28ರಲ್ಲಿ ಪ್ರಾಣಿಗಳ ಜಗತ್ತಿನ ಮೇಲೆ ದೊರೆತನ ನಡಿಸಬೇಕೆಂದು ನೀಡಿದ್ದ ಮಾರ್ಗಸೂಚನೆಯನ್ನು ನೆರವೇರಿಸುತ್ತಿದ್ದಾನೆ. ಅಧಿಕಾರದ ಸ್ಥಾನದಲ್ಲಿದ್ದವನಾಗಿ ಮಾತಾಡುತ್ತಾ, ಆತನು ಅವುಗಳಿಗೆ ಹೆಸರುಗಳನ್ನು ನೀಡಿದನು.

**ವಚನ 20.** ಕಥೆಯು ಮುಂದುವರೆದ ಹಾಗೆ, ದೇವರು **ಮನುಷ್ಯ** ಮತ್ತು ಪ್ರಾಣಿಗಳು ಎರಡನ್ನೂ ಮಣ್ಣಿನಿಂದ ನಿರ್ಮಿಸಿದನಾದರೂ, ಮನುಷ್ಯನಿಗೆ ತನ್ನ ಜ್ಞಾನದ ಮೇರೆಗೆ ಒಪ್ಪಿಕೊಳ್ಳಬೇಕೆಂಬುದರಲ್ಲಿ ಅವರ ನಡುವೆ ಗುಣಾತ್ಮಕ ವ್ಯತ್ಯಾಸವೊಂದಿತ್ತು. ಆತನು ಪ್ರತಿಯೊಂದು ಪ್ರಾಣಿಯನ್ನು ನೋಡಿ ಅದಕ್ಕೆ ಹೆಸರನ್ನಿಟ್ಟ ಹಾಗೆ, ಅವುಗಳೊಳಗೆ ತನಗೆ ಸರಿಬೀಳುವಂಥ ಸಂಗಾತಿ ಸಿಕ್ಕಬಹುದೋ ಎಂಬುದಾಗಿ ಆತನು ಚಕಿತಗೊಂಡವನಾದನು. ಆತನ ಸುತ್ತಲೂ ಪ್ರಾಣಿಗಳು ಇದ್ದಾಗ್ಯೂ, ಆತನಿಗೆ ಏಕಾಂಗಿತನದ ಅನುಭವವಾಗಲಾರಂಭಿಸಿತ್ತು. ಸಮಸ್ಯೆಯು ಏನೆಂದರೆ ಆತನು ಒಬ್ಬಂಟಿಗನಾಗಿದ್ದನು ಯಾಕೆಂದರೆ **ಮನುಷ್ಯನಿಗೆ ಸರಿಬೀಳುವ ಸಹಕಾರಿ ಕಾಣಿಸಲಿಲ್ಲ**, ತನ್ನ ಜೀವಿತವನ್ನು ಒಂದು ಆಳವಾದ ಮಟ್ಟದಲ್ಲಿ ಹಂಚಿಕೊಳ್ಳುವದಕ್ಕೆ ಸಾಧ್ಯವಾಗುವಂಥ ಸಮಾನತೆಯುಳ್ಳ ವ್ಯಕ್ತಿಯನ್ನು ಕಾಣಲಿಲ್ಲ.

## ಪುರುಷಗಾಗಿ ಸ್ತ್ರೀಯನ್ನು ಉಂಟು ಮಾಡಿದ್ದು (2:21-25)

**[21]ಹೀಗಿರುವಲ್ಲಿ ಯೆಹೋವದೇವರು ಆ ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ [22]ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗ ಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು. [23]ಅವನು ಆಕೆಯನ್ನು ನೋಡಿ - ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ; ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರೀ ಎನ್ನಿಸಿಕೊಳ್ಳುವಳು ಅಂದನು. [24]ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು. [25]ಆ ಸ್ತ್ರೀಪುರುಷರಿಬ್ಬರು ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ.**

**ವಚನ 21.** ಪ್ರಾಚೀನ ಮಧ್ಯಪ್ರಾಚ್ಯದಲ್ಲಿನ ಯಾವ ಸಂಪ್ರದಾಯವೂ ಸ್ತ್ರೀಯ ಸೃಷ್ಟಿಯ ಕುರಿತಾಗಿ ಪ್ರತ್ಯೇಕ ಚರಿತ್ರೆಯನ್ನು ಹೊಂದಿರುವದಿಲ್ಲ. ಬೈಬಲಿನ ಕಥಾನಿರೂಪಣೆಯಲ್ಲಿ ಮಾತ್ರವೇ ಆಕೆಯು ಯಾರೊಂದಿಗೆ ಹೊಂದಿಕೆಯಾಗಿದ್ದಳೋ ಆ ಪುರುಷನ ವರ್ಗದ ಕೆಳಗಿನವಳಾಗಿ ಮಾತ್ರವೇ ಇರುವದಿಲ್ಲ. 1:27ರಲ್ಲಿ, ದೇವರು ತನ್ನ ಸ್ವರೂಪವನ್ನು ಹೊಂದಿರಲಿದ್ದ ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯನ್ನು ಉಂಟು ಮಾಡಿದನು ಎಂದು ಹೇಳಲಾಗಿರುತ್ತದೆ, ಆದರೆ ಈಗ ವಾಕ್ಯವು ನಮಗೆ ಆತನು ಬಳಸಿದ ಘಟನೆಗಳನ್ನು ಮತ್ತು ಕಾರ್ಯವಿಧಾನಗಳನ್ನು ಕುರಿತು ತಿಳಿಸುತ್ತದೆ. **ದೇವರು** ಮೊದಲು ಮನುಷ್ಯನನ್ನು ಭೂಮಿಯ

ಮಣ್ಣಿನಿಂದ ರೂಪಿಸಿದನು ಎಂದು ಲೇಖಕನು ಹೇಳಿದನು, ಮತ್ತು ತರುವಾಯ ಆತನು **ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿ**ದನು. "ಗಾಢನಿದ್ರೆ" ಎಂಬುದಕ್ಕೆ ಬಳಸಲಾಗಿರುವ ಪದವು תַּרְדֵּמָה *(ಥಾರ್ದೆಮಾಹ).*[44] ಕೆಲವು ಸಾರಿ ಅಂಥ ನಿದ್ರೆಯು ದೇವರಿಂದ ಬರಮಾಡಲ್ಪಡುತ್ತದೆ (1 ಸಮುವೇಲ 26:12; ಯೆಶಾಯ 29:10); ಒಂದು ಸಂದರ್ಭದಲ್ಲಿ ಅದು ಒಂದು ದೈವಿಕ ಪ್ರಕಟನೆಯನ್ನು ಕೊಡುವ ಉದ್ದೇಶಕ್ಕಾಗಿ (ಆದಿಕಾಂಡ 15:12) ಅಥವಾ ರಾತ್ರಿಯ ದರ್ಶನವೊಂದಕ್ಕಾಗಿ ಆಗಿತ್ತು (ಯೋಬ 4:13; 33:15). ಖಂಡಿತವಾಗಿಯೂ, ಇಲ್ಲಿ ಅದು **ನಿದ್ರೆ**ಯಲ್ಲಿದ್ದ ಮನುಷ್ಯನ ಮೇಲೆ ಶಸ್ತ್ರಚಿಕಿತ್ಸೆಯನ್ನು ಮಾಡುವಕ್ಕಾಗಿ ಆಗಿತ್ತು, ಆ ವೇಳೆ ಯೆಹೋವನು ಮನುಷ್ಯನ ಬದಿಯಲ್ಲಿನ **ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು** ಒಬ್ಬ ಸುಂದರವಾದ ಸ್ತ್ರೀಯಾಗಿ "ಮಾಡಿದನು" (2:22).

ಇಬ್ರಿಯದಲ್ಲಿ "ಪಕ್ಕೆಯ ಎಲುಬುಗಳು" ಎಂಬುದನ್ನು ಅನುವಾದಿಸಿರುವ ಪದವು צֵלָע *(ಟ್ಸೆಲಾ)* ಎಂಬುದರಿಂದ ಬಂದಿರುತ್ತದೆ, ವಾಸ್ತವಿಕವಾಗಿ ಅದರ ಅರ್ಥವು "ಬದಿ" ಎಂದಾಗಿರುತ್ತದೆ. ಅದು ಹಲವಾರು ಸಂಗತಿಗಳ ಬದಿಯನ್ನು ಸೂಚಿಸಬಹುದಾಗಿದೆ, ಉದಾಹರಣೆಗೆ ಒಂದು ಬೆಟ್ಟ, ಒಂದು ಕಟ್ಟಡ, ಒಂದು ಕೋಣೆ, ದೇವಾಲಯ, ಒಂದು ಪೀಠೋಪಕರಣದ ಭಾಗ.[45] ವಾಸ್ತವಾಂಶದಲ್ಲಿ, ಹಳೆಯ ಒಡಂಬಡಿಕೆಯೊಳಗೆ ಈ ಪದವನ್ನು "ಪಕ್ಕೆಯ ಎಲುಬುಗಳು" ಎಂದು ಅನುವಾದಿಸಲ್ಪಟ್ಟಿರುವ ಏಕೈಕ ಸ್ಥಳವು ಆದಿಕಾಂಡ 2:21, 22 ಆಗಿರುತ್ತದೆ. ಸನ್ನಿವೇಶದೊಂದಿಗೆ ಸರಿಹೊಂದಿಕೆಯಾಗುವ ಈ ಅನುವಾದವು, ಬಹುತೇಕ ಆಂಗ್ಲ ಆವೃತ್ತಿಗಳಲ್ಲಿ ಅನುಸರಿಸಲ್ಪಟ್ಟಿದೆ.

"ಆತನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡನು" ಎಂಬುದರ ಬದಲಾಗಿ, NIVಯಲ್ಲಿರುವ ಒಂದು ಅಡಿಟಿಪ್ಪಣಿಯಲ್ಲಿ *ಟ್ಸೆಲಾ* ಎಂಬುದಕ್ಕೆ ಒಂದು ಪರ್ಯಾಯ ಪದವಿರುತ್ತದೆ: "[ದೇವರು] ಮನುಷ್ಯನ *ಬದಿ*ಯನ್ನು ತೆಗೆದುಕೊಂಡು" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಮಾನವನು ಶಸ್ತ್ರಚಿಕಿತ್ಸೆಯ ಕಾರ್ಯವಿಧಾನದ ನಂತರದಲ್ಲಿ ಎಚ್ಚರಗೊಂಡು ನುಡಿದ ಹೇಳಿಕೆಯೊಂದಿಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗುತ್ತದೆ. ದೇವರು ಸ್ತ್ರೀಯನ್ನು ಆತನ ಬಳಿಗೆ ಕರೆದುಕೊಂಡು ಬಂದ ವೇಳೆ, ಆತನು ತಕ್ಷಣವೇ ಹೀಗೆ ಉದ್ಗರಿಸಿದನು, "ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ" (2:23), ಇದರಿಂದ ಸೂಚ್ಯಾರ್ಥವಾಗುವದೇನೆಂದರೆ ಎಲುಬು ಮತ್ತು ಮಾಂಸ ಎರಡನ್ನೂ ಆತನ ದೇಹದಿಂದ ತೆಗೆದು ಸ್ತ್ರೀಯನ್ನಾಗಿ ರೂಪಿಸಲಾಗಿತ್ತು ಎಂಬುದೆ.

ಆರಂಭ ಕಾಲದಲ್ಲಿನ ಕೆಲವು ರಬ್ಬಿಗಳು ಉಪದೇಶಿಸಿದ್ದೇನೆಂದರೆ ಮನುಷ್ಯನು (ಆದಾಮ) ಮೂಲತಃ ಉಭಯಲಿಂಗಿ ಆಗಿದ್ದನು, ಅಂದರೆ, ಪುರುಷ ಮತ್ತು ಸ್ತ್ರೀಯ ಲಕ್ಷಣಗಳೆರಡನ್ನೂ ಅಥವಾ ಸ್ವಭಾವಗಳೆರಡನ್ನೂ ಹೊಂದಿದ್ದನು ಎಂಬುದೆ. ಅವರು ಈ ಅಭಿಪ್ರಾಯವನ್ನು ಆದಿಕಾಂಡ 5:1, 2 ವಚನಗಳಿಂದ ಕಲ್ಪಿಸಿಕೊಂಡಿರುತ್ತಾರೆ, ಆ ವಚನಗಳು ಹೀಗೆ ಹೇಳುತ್ತವೆ, "ದೇವರು ಸೃಷ್ಟಿಕಾಲದಲ್ಲಿ ಮನುಷ್ಯನನ್ನು ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿದನು. ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು. ಇದಲ್ಲದೆ ಅದೇ ದಿವಸದಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯ [אָדָם, *ಆದಾಮ*] ಎಂದು ಹೆಸರಿಟ್ಟನು." ಇತ್ತೀಚಿನ ದಶಕಗಳಲ್ಲಿ, ಸ್ತ್ರೀವಾದಿಗಳು ಈ ರಬ್ಬಿಯರ ಕಲ್ಪನೆಯನ್ನು 2:21, 22 ವಚನಗಳೊಂದಿಗೆ ಜೋಡನೆ ಮಾಡಿರುತ್ತಾರೆ, ಮೂಲತಃ ಪುರುಷ ಮತ್ತು ಸ್ತ್ರೀ ಇಬ್ಬರ ಹೆಸರು ಸಹ "ಆದಾಮ" ("ಮನುಷ್ಯ") ಎಂದಾಗಿತ್ತೆಂದು ಅವರು ಹೇಳಿಕೊಳ್ಳುತ್ತಾರೆ.

ಹೇಗೂ, 1:27, 28 ವಚನಗಳ ಭಾಗವು 5:2ರಲ್ಲಿ ವಂಶಾವಳಿಗೆ ತಳಹದಿಯಾಗಿದ್ದು, ಈ ಭಾಗದಿಂದ ಸ್ಪಷ್ಟವಾಗುವದೇನೆಂದರೆ ಈ ವಚನಗಳಲ್ಲಿ ದ್ವಿಲಿಂಗತೆಯುಳ್ಳ ಒಬ್ಬ ವ್ಯಕ್ತಿ ಎಂಬುದಕ್ಕಿಂತಲೂ ಇಬ್ಬರು ವ್ಯಕ್ತಿಗಳು ಎಂಬುದನ್ನು ಸೂಚಿಸಿ ಹೇಳಲಾಗಿದೆ. ಅಷ್ಟುಮಾತ್ರವಲ್ಲದೆ, 1:27ನೇ ವಚನವು ಇಬ್ಬರು ವ್ಯಕ್ತಿಗಳನ್ನು ಕುರಿತು "ಅವರನ್ನು" ಎಂಬುದಾಗಿ ಬಹುವಚವನ್ನು ಬಳಸುತ್ತದೆ ಮತ್ತು ಅವರನ್ನು "ಅವನನ್ನು" (ಪುಲ್ಲಿಂಗ) ಎಂಬ ಏಕವಚನಕ್ಕೆ ತದ್ವಿರುದ್ಧವಾಗಿ ಗಂಡು ಮತ್ತು ಹೆಣ್ಣು ಎಂದು ಗುರುತಿಸುತ್ತದೆ. ಪ್ರಥಮ ಮನುಷ್ಯನು ಶಾರೀರಿಕವಾಗಿ ದ್ವಿಲಿಂಗಿಯಾಗಿದ್ದನು ಎಂಬುದಾಗಿ ಕಥಾನಿರೂಪಣೆಯಲ್ಲಿರುವ ಯಾವ ಸಂಗತಿಯೂ ಸೂಚಿಸುವದಿಲ್ಲ.[46] ವಾಸ್ತವಿಕದಲ್ಲಿ, 1:26, 27 ಮತ್ತು 5:2ರಲ್ಲಿ *ಆದಾಮ* ಎಂಬ ಇಬ್ರಿಯ ಪದವು "ಮಾನವರು" ಎಂಬುದಾಗಿ ಅರ್ಥವಿರುವ ಪದದ ಒಂದು ಜಾತಿವಿಶಿಷ್ಟ ಬಳಕೆಯಾಗಿರುತ್ತದಷ್ಟೆ, ಅದು ಗಂಡು ಮತ್ತು ಹೆಣ್ಣು ಇಬ್ಬರನ್ನೂ ಒಳಗೊಂಡಿದೆ. 3:17ರಲ್ಲಿಯೇ ಪ್ರಥಮ ಬಾರಿಗೆ ಗಂಡಿನ ವೈಯಕ್ತಿಕ ಹೆಸರಾಗಿ "ಆದಾಮ" ಎಂಬುದು, ಸ್ತ್ರೀಗೆ ತದ್ವಿರುದ್ಧವಾಗಿ ಬಳಸಲ್ಪಟ್ಟಿದೆ, ಆಕೆಯನ್ನು 3:20ರಲ್ಲಿ "ಹವ್ವ" ಎಂದು ಕರೆಯಲಾಗಿರುತ್ತದೆ.

**ವಚನ 22.** ಕಥಾನಿರೂಪಣೆಯು ಮುಂದುವರೆದಂತೆ, ದೇವರು ಹೇಗೆ **ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗ ಮಾಡಿ**ದನು ಎಂಬುದನ್ನು ಅದು ತಿಳಿಸುತ್ತದೆ. "ಮಾಡಿ"ದನು ಎಂಬ ಇಬ್ರಿಯ ಪದದ (בָּנָה, *ಬನಾಹ)* ಅಕ್ಷರಶಃ ಅರ್ಥವು "ನಿರ್ಮಿಸು" ಎಂದಾಗಿದೆ, ಮತ್ತು ಅದು ದೇವರನ್ನು ತನ್ನ ಕರ್ತೃವಾಗಿ ತೆಗೆದುಕೊಳ್ಳುತ್ತದೆ ಯಾಕೆಂದರೆ ಆತನು ಸ್ತ್ರೀಯನ್ನು ಉಂಟು ಮಾಡಿದ ಪರಿಣಿತ ಕುಶಲಕರ್ಮಿಯಾಗಿರುತ್ತಾನೆ. ಬೇರೆ ಸ್ಥಳಗಳಲ್ಲಿ, ದೇವರು ಹಲವಾರು ಸಂಗತಿಗಳನ್ನು ಕಟ್ಟುವನೆಂದು ಹೇಳಲಾಗುತ್ತದೆ, ಉದಾಹರಣೆಗೆ ಬಿದ್ದು ಹೋಗಿದ್ದ ದಾವೀದನ "ಗುಡಿಸಲನ್ನು" (ಆಮೋಸ 9:11), "ಮನೆ" (ಒಂದು ಕುಟುಂಬ ಮತ್ತು ಮಕ್ಕಳು) (ಕೀರ್ತನೆ 127:1, 3-5), ಮತ್ತು "ತನ್ನ ಆಲಯವನ್ನು" (ಕೀರ್ತನೆ 78:69).[47] ಲೇಖಕನು 1:26, 27ರಲ್ಲಿ ಮಾನವರ (ಗಂಡುಹೆಣ್ಣಾಗಿ) ಸೃಷ್ಟಿಯ ಕುರಿತಾಗಿ ಬಣ್ಣಿಸುವ ವೇಳೆ, ಆತನು בָּרָא (*ಬಾರಾ*, "ಸೃಷ್ಟಿಸು") ಮತ್ತು עָשָׂה (*ಆಸಾಹ*, "ನಿರ್ಮಿಸು") ಎಂಬ ಕ್ರಿಯಾಪದಗಳನ್ನು ಬಳಸಿದನು. ಇಲ್ಲಿ, ಕೇವಲ ಸ್ತ್ರೀಯನ್ನು ಮಾತ್ರವೇ ಸೂಚಿಸುವವನಾಗಿ, ಆತನು ದೇವರನ್ನು ಒಬ್ಬ ನುರಿತ "ನಿರ್ಮಾಣಿಕ" ಎಂಬುದಾಗಿ ಚಿತ್ರಿಸುವಂಥ ಪದವನ್ನು ಬಳಕೆ ಮಾಡಿದನು. *ಬನಾಹ* ಎಂಬ ಪದವು ಅದರ ಅರ್ಥನಿರೂಪಣೆಯ ಮೂಲಕವೇ, ದೈವಿಕ ಚಟುವಟಿಕೆಯ ಉತ್ಪನ್ನವು - ಸ್ತ್ರೀ - "ಸೌಂದರ್ಯ, ಸ್ಥಿರತೆ, ಮತ್ತು ಬಾಳಿಕೆ"[48] ಇವುಗಳಿಂದ ಕೂಡಿದ ಜೀವಿಯಾಗಿದ್ದಳು ಎಂಬುದಾಗಿ ಸೂಚಿಸುವದಾಗಿದೆ.

ದೇವರು **ಆಕೆಯನ್ನು** [ಸ್ತ್ರೀಯನ್ನು] **ಅವನ ಬಳಿಗೆ ಕರತಂದ** ವೇಳೆ, ಆತನು "ಜೋಡಿ ಕುದುರಿಸುವವನು" ಅಥವಾ ಸ್ತ್ರೀಯನ್ನು ಆಕೆಯ ಭಾವಿ ಗಂಡನ ಬಳಿಗೆ ಕರೆದುಕೊಂಡು ಹೋಗುವ ವಧುವಿನ ತಂದೆಯ ರೀತಿಯಲ್ಲಿ ಕಾರ್ಯ ಮಾಡಿದನು. ಇದು ಪ್ರಾಚೀನ ಪೂರ್ವಜರ ಸಮಾಜಕ್ಕೆ ಸ್ವಾಭಾವಿಕವಾಗಿಯೇ ಸರಿಹೊಂದಿಕೆಯಾಗುತ್ತದೆ, ಅಲ್ಲಿ ಬಹುಪಾಲು ಮದುವೆಗಳು ವ್ಯವಸ್ಥೆಗೊಳಿಸಲ್ಪಡುತ್ತಿದ್ದವು. ದೇವರು ಗಂಡು ಹಾಗೂ ಹೆಣ್ಣು ಇಬ್ಬರನ್ನೂ ಸೃಷ್ಟಿಸಿದವನಾಗಿದ್ದರಿಂದ, ಪುರುಷನಿಗೆ ನಿಖರವಾಗಿ ಯಾವ ವಿಧವಾದ ಸಂಗಾತಿಯ ಅಗತ್ಯವಿರುವದೆಂದು ಆತನಿಗೆ ಗೊತ್ತಿತ್ತು; ಆದರೆ ದೇವರು ಆಕೆಯನ್ನು ಆತನ ಬಳಿಗೆ ಕರೆ ತಂದಾಗ, ಈ ದೈವಿಕ ವರವು ಎಷ್ಟೊಂದು ಅದ್ಭುತಕರವಾಗಿದೆ ಎಂಬುದನ್ನು ಪುರುಷನು ಸ್ವತಃ ಕಂಡುಕೊಳ್ಳುವಂತೆ ದೇವರು ಅವಕಾಶ ಕೊಟ್ಟನು.

**ವಚನ 23. ಅವನು** ತನ್ನ ಪರಿಪೂರ್ಣ ಸಂಗಾತಿ ಮತ್ತು ತದ್ರೂಪದ ವ್ಯಕ್ತಿಯನ್ನು

ಭೇಟಿಯಾದಾಗ, ಪುರುಷನು ಏಕಾಏಕಿ ಮತ್ತು ವ್ಯಕ್ತಪಡಿಸಲಾಗದಷ್ಟು ಸಂತೋಷಗೊಂಡನು. ಆತನು ಒಮ್ಮೆಲೇ **ಈಗ ಸರಿ; ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ** ಎಂದು ಉದ್ಗರಿಸಿದಾಗ, ಆತನಿಗಾದ ರೋಮಾಂಚಕತೆಯು ಒಂದು ಕಾವ್ಯಾತ್ಮಕ ದ್ವಿಪದಿಯಲ್ಲಿ ದಾಖಲಿಸಲ್ಪಟ್ಟಿದೆ.[49] "ಈಗ" ಎಂಬುದಕ್ಕೆ ಬದಲಾಗಿ NRSVಯಲ್ಲಿ "ಕೊನೆಗೂ" ಎಂದಿರುತ್ತದೆ. ಪುರುಷನಿಗೆ ನಿಖರವಾಗಿ ಏನು ಅಗತ್ಯವಿದೆ ಎಂಬುದನ್ನು ಅಂತಿಮವಾಗಿ ದೇವರು ಒದಗಿಸಿ ಕೊಟ್ಟಿದ್ದನು. ವಾಸ್ತವಿಕದಲ್ಲಿ, ಈ ತನ್ನ ಉತ್ಸಾಹಪೂರ್ಣ ಹೇಳಿಕೆಯಲ್ಲಿ, ಆತನು ಸ್ತ್ರೀಲಿಂಗ ರೂಪದ "ಈ" (זֹאת, *ಝೋಥ)* ಎಂಬುದನ್ನು ಮೂರು ಸಾರಿ ಬಳಸಿದನು: "ಈಗ ಸರಿ; ಈಕೆಯು ['ಈ ವ್ಯಕ್ತಿ'] ನನ್ನ ಎಲುಬುಗಳಿಂದ ಬಂದ ಎಲುಬೂ ..."; **ಈಕೆಯು** ["ಈ ವ್ಯಕ್ತಿ"] **ನರನಿಂದ ಉತ್ಪತ್ತಿಯಾದ ಕಾರಣ** ["ಈ ವ್ಯಕ್ತಿ"] **ನಾರಿ ಅನ್ನಿಸಿಕೊಳ್ಳುವಳು.** ಪುರುಷನು, ಕೊನೆಗೂ ತನ್ನ "ತಕ್ಕ ಜೋಡಿ"ಯನ್ನು ಕಂಡುಕೊಂಡಿದ್ದನು.

ಸ್ತ್ರೀಯು ತನ್ನ ಎಲುಬುಗಳಿಂದ ಎಲುಬೂ ತನ್ನ ಮಾಂಸದಿಂದ ಬಂದ ಮಾಂಸವೂ ಎಂದು ಪುರುಷನು ಹೇಳಿದ್ದು ನಿಕಟವಾದ ಸಂಬಂಧ ಅಥವಾ ರಕ್ತಸಂಬಂಧವನ್ನು ವ್ಯಕ್ತಪಡಿಸುವ ಸಾಮಾನ್ಯವಾದ ಇಬ್ರಿಯ ಪದಕ್ಕೆ ಸಾಮ್ಯತೆಯನ್ನು ಹೊಂದಿರುವದಾಗಿದೆ (29:14; ನ್ಯಾಯಸ್ಥಾಪಕ 9:1, 2; 2 ಸಮುವೇಲ 19:12, 13). ಕೆಲವು ಸನ್ನಿವೇಶಗಳಲ್ಲಿ, ಅದು ಒಂದು ಬಲವಾದ ನಿಷ್ಠಾವಂತಿಕೆಯನ್ನು ಸಹ ವ್ಯಕ್ತಪಡಿಸಬಹುದಾಗಿದೆ (2 ಸಮುವೇಲ 5:1-3; 1 ಪೂರ್ವಕಾಲವೃತ್ತಾಂತ 11:1).

ಪುರುಷನ ಸಂತೋಷದ ಉದ್ಗಾರದ ಕೊನೆಯ ಭಾಗವು ಶಬ್ದಾಡಂಬರವನ್ನು ಒಳಗೊಂಡಿದೆ: "ಈಕೆಯು ನರನಿಂದ [אִישׁ, *ಇಶ್].*" ಉತ್ಪತ್ತಿಯಾದ ಕಾರಣ ನಾರೀ [אִשָּׁה, *ಇಶಶಾಹ]* ಎನ್ನಿಸಿಕೊಳ್ಳುವಳು." ಈ ಎರಡೂ ಇಬ್ರಿಯ ಪದಗಳು ಅನಿಶ್ಚಿತವಾದ ವ್ಯುತ್ಪತ್ತಿಯವುಗಳಾಗಿವೆ, ಆದರೆ ಅವುಗಳು ಇಲ್ಲಿ ಎರಡರ್ಥದ ನುಡಿಯಾಗಿ ಕ್ರಿಯೆ ಮಾಡುತ್ತವೆ ಯಾಕೆಂದರೆ ಅವುಗಳ ಉಚ್ಚಾರಣೆ ಒಂದೇ ರೀತಿಯಂತೆ ಅನ್ನಿಸುತ್ತದೆ. ಪ್ರಾಣಿಗಳನ್ನು ಪರಿಶೀಲಿಸಿ ಅವುಗಳಿಗೆ ಹೆಸರನ್ನಿಟ್ಟ ಬಳಿಕ, ಮನುಷ್ಯನು ತಾನು ಆ ಜೀವಿಗಳಿಗಿಂತಲೂ (ಒಬ್ಬ ಮಾನವ ಜೀವಿಯಾಗಿ) ಎಷ್ಟೊಂದು ವ್ಯತ್ಯಾಸವಾದವೆನಂಬುದನ್ನು ಅರಿತುಕೊಂಡನು. ತರುವಾಯ, ದೇವರು ಸ್ತ್ರೀಯನ್ನು ಆತನ ಬಳಿಗೆ ಕರೆದು ತಂದಾಗ, ಪ್ರಥಮ ಬಾರಿಗೆ, ತನ್ನ ಹಾಗೆಯೇ ಸ್ವಭಾವವುಳ್ಳ (ಒಬ್ಬ ಮಾನವ ಜೀವಿಯಾಗಿ) ಒಂದು ಜೀವಿಯ - ಆದರೆ ಆಕೆಯು ಲೈಂಗಿಕವಾಗಿ ಭಿನ್ನವಾಗಿದ್ದಳು[50] - ಮುಂದೆ ಇರುತ್ತೇನೆಂಬುದನ್ನು ಗ್ರಹಿಸಿಕೊಂಡಿದ್ದನು. ಆದದರಿಂದ, "ಈಕೆಯು ನರನಿಂದ *[ಇಶ್]* ಉತ್ಪತ್ತಿಯಾದ ಕಾರಣ ನಾರೀ *[ಇಶಶಾಹ]"* ಎಂದು ಕರೆದನು. ಸರಳವಾಗಿ ಹೇಳುವದಾದರೆ, ಪುರುಷನು ಒಂದು ಸ್ವರೂಪವನ್ನು ಕಂಡನು ಆದರೆ ತನ್ನ ಹಾಗೂ ಸ್ತ್ರೀಯ ನಡುವಿನ ಒಂದು ಭಿನ್ನತೆಯನ್ನು ಸಹ ಕಂಡನು, ಆದ್ದರಿಂದ ಆತನು ಇದನ್ನು ಪ್ರತಿಫಲಿಸುವಂತಹ ಎರಡು ಬಿರುದುಗಳನ್ನು ಬಳಸಿದನು: *ಇಶ್* ಮತ್ತು *ಇಶಶಾಹ.*

ಸ್ತ್ರೀಯು ಪುರುಷನಿಂದ ತೆಗೆದುಕೊಳ್ಳಲ್ಪಟ್ಟವಳಾದ್ದರಿಂದ, ಆಕೆಯ ಜೀವಿತವೇ ಆತನ ಮೇಲೆ ಅವಲಂಬಿತವಾಗಿತ್ತು ಎಂಬುದನ್ನು ಚರಿತ್ರೆಯು ಸೂಚಿಸುತ್ತದೆ; ಮತ್ತು ಆತನು ಆಕೆಗೆ ಹೆಸರಿಟ್ಟನು ಎಂಬ ವಾಸ್ತವಾಂಶದಿಂದ ಸೂಚಿತವಾಗುವದೇನೆಂದರೆ ಆತನು ಪಕ್ಷಿಗಳಿಗೆ ಮತ್ತು ಪ್ರಾಣಿಗಳಿಗೆ ಹೆಸರಿಟ್ಟಿದ್ದು ಹೇಗೆ ಅವುಗಳ ಮೇಲೆ ಆತನಿಗೆ ಅಧಿಕಾರವಿರುವದನ್ನು ತೋರ್ಪಡಿಸಿತ್ತೋ (2:19, 20) ಹಾಗೆಯೇ ಈಕೆಯ ಮೇಲೆ ಆತನಿಗೆ ಅಧಿಕಾರವಿತ್ತೆಂಬುದನ್ನು

ಸೂಚ್ಯಾರ್ಥವಾಗಿ ತಿಳಿಸುತ್ತದೆ. ಹೇಗೂ, ಗಂಡನಿಗೆ ತನ್ನ ಹೆಂಡತಿಯ ಮೇಲಿದ್ದ ಯಜಮಾನಿಕೆ ಮತ್ತು ಆಕೆಯು ಆತನಿಗೆ ಅಧೀನಳಾಗಿರುವಿಕೆಯನ್ನು ಆಕೆಗೆ ಅಗೌರವನ್ನುಂಟು ಮಾಡುವ ಅಥವಾ ಕೀಳಾಗಿ ಎಣಿಸುವಂತಹ ದರ್ಪಿಷ್ಠ ಅಧಿಕಾರದ ರೀತಿಯಾದದ್ದೆಂದು ಅರ್ಥಮಾಡಿಕೊಳ್ಳಕೂಡದು. ಅದಕ್ಕೆ ತದ್ವಿರುದ್ಧವಾಗಿ, ಹೊಸ ಒಡಂಬಡಿಕೆಯಲ್ಲಿ ಪೌಲನು ಅರ್ಥನಿರೂಪಣೆಯನ್ನು ಮಾಡಿದ ಪ್ರಕಾರ (1 ಕೊರಿಂಥ 11:3, 8-12; ಎಫೆಸ 5:22-33), ಯೇಸುವು ಸಭೆಗೋಸ್ಕರ ತೋರಿಸಿದ ಪ್ರಕಾರವಾಗಿಯೇ ಗಂಡನು ತನ್ನ ಹೆಂಡತಿಯ ಮೇಲೆ ಹೊಂದಿರುವ ಅಧಿಕಾರ/ಯಜಮಾನಿಕೆಯು ಇರತಕ್ಕದ್ದು: ಪ್ರೀತಿಸುವಂತದ್ದು, ಆರೈಕೆ ಮಾಡುವಂತದ್ದು, ಮತ್ತು ತ್ಯಾಗಮಯವಾದದ್ದು. ಸರಳವಾಗಿ ಹೇಳುವದಾದರೆ, ಆತನು ಆಕೆಗೋಸ್ಕರ ಏನು ಬೇಕಾದರೂ ಮಾಡುವದಕ್ಕೆ ಸಿದ್ಧನಾಗಿರತಕ್ಕದ್ದು - ಕ್ರಿಸ್ತನು ಸಭೆಗೋಸ್ಕರ ಮಾಡಿದ ಪ್ರಕಾರವಾಗಿಯೇ, ಆತನು ತನ್ನ ಹೆಂಡತಿಗೋಸ್ಕರ ತನ್ನ ಪ್ರಾಣವನ್ನು ಸಹ ಕೊಡಲು ಸಿದ್ಧನಿರಬೇಕು.

**ವಚನ 24.** ಈ ವಚನವು ಪುರುಷನ ಮಾತುಗಳ ಮುಂದುವರಿಕೆ ಆಗಿರುವದಿಲ್ಲ, ಆದರೆ ಲೇಖಕನ ಒಂದು ಹೇಳಿಕೆಯಾಗಿದೆ, ಅದು ಅಂತಿಮವಾಗಿ ದೇವರಿಗೆ ಅನ್ವಯಿಸಲ್ಪಟ್ಟಿರುತ್ತದೆ (ಮತ್ತಾಯ 19:4, 5). ಪ್ರೇರಿತ ಕಥಾನಿರೂಪಕನು ಪ್ರತಿಯೊಂದು ಮದುವೆಗೂ ಮುನ್ನ ನಡೆದ ಪ್ರಥಮ ಮದುವೆಯಲ್ಲಿ ಕಂಡ ತತ್ವವನ್ನು ಅನ್ವಯಿಸುತ್ತಿದ್ದಾನೆ: **ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು.** ಪುರುಷನು ತನ್ನ ತಂದೆ ಮತ್ತು ತಾಯಿಯನ್ನು ತೊರೆಯುವದರ ಕುರಿತಾದ ಈ ಹೇಳಿಕೆಯು ವ್ಯಾಖ್ಯಾನಕಾರರಿಗೆ ಒಗಟಿನಂತಿರುತ್ತದೆ ಯಾಕೆಂದರೆ ಪ್ರಾಚೀನ ಪೂರ್ವಜರ ಸಮಾಜಗಳಲ್ಲಿರುತ್ತಿದ್ದ ಪದ್ಧತಿಯು ಏನಾಗಿತ್ತೆಂದರೆ ಸ್ತ್ರೀಯು ತನ್ನ ಮನೆಯನ್ನು ತೊರೆದು ತನ್ನ ಗಂಡನ ಸಂಗಡ ಆತನ ತಂದೆತಾಯಿಗಳ ಮನೆಯ ಸಮೀಪದಲ್ಲಿ ಹೊಸ ಜೀವನವನ್ನು ಆರಂಭಿಸುವದಾಗಿತ್ತು. ಖಂಡಿತವಾಗಿಯೂ, ಈ ನಿಮಯಕ್ಕೆ ಕೆಲವೊಂದು ವಿನಾಯಿತಿಗಳಿರುತ್ತಿದ್ದವು: ಯಾಕೋಬನು ತನ್ನ ಮಾವನಾಗಿದ್ದ ಲಾಬಾನನ ಜೊತೆಯಲ್ಲಿ, ಮೆಸಪೊತಾಮ್ಯದ ಒಳನಾಡಿನಲ್ಲಿ ಇಪ್ಪತ್ತು ವರ್ಷಗಳ ವರೆಗೆ ನೆಲೆಸಿದ್ದನು (29:1-31:38); ಮತ್ತು ಮೋಶೆಯು ತನ್ನ ಹೆಂಡತಿಯಾದ ಚಿಪ್ಪೋರಳ ತಂದೆಯಾದ ಇತ್ರೋನ ಕುರಿಗಳನ್ನು ನಾಲ್ವತ್ತು ವರ್ಷಗಳ ಕಾಲ ಸೀನಾಯಿ ಅರಣ್ಯದಲ್ಲಿ ಕಾಯುವವನಾಗಿ ಜೀವಿಸಿದನು (ವಿಮೋಚನಕಾಂಡ 2:15-3:1; ಅಪೊಸ್ತಲರ ಕೃತ್ಯಗಳು 7:29, 30).

ಹೇಗೂ, ಇವುಗಳು ಸರ್ವಸಾಧಾರಣವಾಗಿರುತ್ತಿದ್ದ ಪದ್ಧತಿಗಳಾಗಿರಲಿಲ್ಲ. ಈ ವಚನವು ಪುರುಷನು ತನ್ನ ಹೆತ್ತವರನ್ನು ಶಾರೀರಿಕವಾಗಿ ಎಂಬುದಕ್ಕಿಂತಲೂ ಭಾವನಾತ್ಮಕವಾಗಿ ಮತ್ತು ಮನೋಶಾಸ್ತ್ರೀಕವಾಗಿ ತೊರೆಯುವದನ್ನು ಸೂಚಿಸುತ್ತಿರಬಹುದಾಗಿದೆ. ಒಂದು ಹಳೇ ಗಾದೆಯು ಇಲ್ಲಿ ಅನ್ವಯವಾಗಬಲ್ಲದು: "ಒಬ್ಬ ಮಗನು ತನಗೋಸ್ಕರ ಒಬ್ಬ ಹೆಂಡತಿಯನ್ನು ಹೊಂದುವ ತನಕ ಒಬ್ಬ ಮಗನಾಗಿಯೇ ಇರುವನು; ಒಬ್ಬ ಮಗಳು ತನ್ನ ಜೀವಿತವೆಲ್ಲಾ ಒಬ್ಬ ಮಗಳಾಗಿಯೇ ಇರುವಳು." ಒಬ್ಬ ಹೊಸ ಗಂಡನಿಗಿಂತಲೂ ಅಧಿಕವಾಗಿ ಒಬ್ಬ ಹೊಸ ಹೆಂಡತಿಯು ತನ್ನ ಹೆತ್ತವರೊಂದಿಗೆ ಭಾವನಾತ್ಮಕ ಅನುರಾಗವನ್ನು ಹೊಂದಿರುತ್ತಾಳೆ; ಆದದರಿಂದ, ಮದುವೆಯ ವೇಳೆ, ಒಬ್ಬ ಸ್ತ್ರೀಯು ತನ್ನ ಹೆತ್ತವರಿಂದ ಎಂದಿಗೂ ಬೇರ್ಪಡುವದಕ್ಕಾಗದೆ ಇರಬಹುದಾದಂತಹ ರೀತಿಯಲ್ಲಿಯೇ ಗಂಡನು ತನ್ನ ಹೆತ್ತವರಿಂದ ಬೇರ್ಪಡುತ್ತಾನೆ.[51] ಒಂದು ಪೂರ್ವಜರ ಸಮಾಜದಲ್ಲಿ, ಒಬ್ಬ ಸ್ತ್ರೀಯು ತನ್ನ ಗಂಡನ ಜೊತೆಗೆ ಹೋಗಿ ಆತನ ಕುಟುಂಬ ಒಂದು ಭಾಗವಾಗುವ ವೇಳೆ, ಗಂಡನು ತನ್ನ ಹೆತ್ತವರ ಮೇಲೆ

ಅವಲಂಬಿತನಾಗುವ ಸಂಬಂಧವನ್ನು ಕಡಿದುಕೊಳ್ಳುವದು ಅತ್ಯಾವಶ್ಯಕವಾಗಿತ್ತು. ಸ್ತ್ರೀಯು ತನ್ನ ಹೆತ್ತವರಿಂದ ಬೇರ್ಪಟ್ಟವಳಾಗುವ ಮೂಲಕವಾಗಿ, ಆಕೆಯು ಒಂದಷ್ಟರ ಮಟ್ಟಿಗೆ ಅದನ್ನು ಈಗಾಗಲೇ ಮಾಡಿರುತ್ತಿದ್ದಳು; ಮತ್ತು ಇಬ್ಬರು ಒಬ್ಬರ ಮೇಲೊಬ್ಬರು ಅವಲಂಬಿತರಾಗಿ ಒಟ್ಟುಗೂಡಿ ಒಂದು ಹೊಸ ಜೀವನವನ್ನು ನಿರ್ಮಿಸಿಕೊಳ್ಳಬೇಕಿತ್ತು.

24ನೇ ವಚನದಲ್ಲಿ "ಬಿಟ್ಟು" ಎಂಬುದಕ್ಕೆ ಬಳಸಲ್ಪಟ್ಟಿರುವ ಕ್ರಿಯಾಪದವು (עָזַב, *ಅಝೂಬ)* ಅನೇಕ ಸಾರಿ ಒಂದು ಸಂಗತಿಯನ್ನು ಕೈ ಬಿಟ್ಟು ಬಿಡುವುದು ಎಂಬ ಹೆಚ್ಚುವರಿ ಅರ್ಥವನ್ನು ಸೂಚಿಸುತ್ತದೆ. ಇದು ಈ ವಿಧದಲ್ಲಿ ಹಳೆಯ ಒಡಂಬಡಿಕೆಯೊಳಗೆ ಎರಡು ನೂರಕ್ಕೂ ಅಧಿಕ ಸಾರಿ, ಸಾಮಾನ್ಯವಾಗಿ ವಿಗ್ರಹಗಳ ಹಿಂದೆ ಹೋಗುವದಕ್ಕಾಗಿ ದೇವರನ್ನು ತೊರೆದು ಬಿಡುವುದು ಎಂಬ ಸೂಚ್ಯಾರ್ಥದಲ್ಲಿ ಬಳಸಲ್ಪಟ್ಟಿದೆ. ಅದು ಆದಿಕಾಂಡ 2:24ರ ಸನ್ನಿವೇಶಕ್ಕೆ ಸರಿಹೊಂದುವದಿಲ್ಲ, ಯಾಕೆಂದರೆ ಮದುವೆಯಾಗುವವರು ತಮ್ಮ ಹೆತ್ತವರನ್ನು ಕೈ ಬಿಟ್ಟು ಬಿಡಬೇಕು ಎಂಬ ಅರ್ಥದಲ್ಲಿ ಲೇಖಕನು ಪ್ರೋತ್ಸಾಹಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ.

ಇಬ್ರಿಯ ಪದದ ಒಂದು ಉತ್ತಮವಾದ ಅನುವಾದವೆಂದರೆ "ಪರಿತ್ಯಜಿಸು"; ಮತ್ತು NASBಯು ಹಲವಾರು ವಾಕ್ಯಭಾಗಗಳಲ್ಲಿ ಈ ಅನುವಾದವನ್ನು ಕೊಡುತ್ತದೆ, ದೇವರನ್ನು ಮತ್ತು ಆತನ ಒಡಂಬಡಿಕೆಯನ್ನು ತ್ಯಜಿಸಿ ವಿಗ್ರಹಗಳ ಹಿಂದೆ ಹೋಗುವದನ್ನು ಸೂಚಿಸುವದಾಗಿದೆ (ಧರ್ಮೋಪದೇಶಕಾಂಡ 28:20; 29:25; ನ್ಯಾಯಸ್ಥಾಪಕ 10:10; 1 ಅರಸು 19:10, 14; ಯೆರೆಮೀಯ 1:16; 2:13, 17, 19; 5:7; 16:11; 17:13; 19:4; 22:9). ಹೇಗೂ, "ಕೈ ಬಿಟ್ಟು ಬಿಡು" ಎಂಬ ಅನುವಾದವು ಇರುವ ಪ್ರಕಾರವೇ, "ಪರಿತ್ಯಜಿಸು" ಎಂಬುದರ ಸಂಪೂರ್ಣ ಅರ್ಥವು ಲೇಖಕನ ಮನಸ್ಸಿನಲ್ಲಿದ್ದಂತೆ ಆಗಿರುವದಕ್ಕೆ ಸಾಧ್ಯವಿಲ್ಲ. ಅದಕ್ಕೆ ತದ್ವಿರುದ್ಧವಾಗಿ, *ಅಝೂಬ* ಎಂಬ ಪದವು ಒಬ್ಬ ಪುರುಷನ ಹೆತ್ತವರನ್ನು ಬಿಡುವದಕ್ಕೆ (ಪರಿತ್ಯಜಿಸುವದಕ್ಕೆ) ಸಂಬಂಧ ಪಟ್ಟಂತೆ ಒಂದು ಸಂಬಂಧಿತ ಅರ್ಥದಲ್ಲಿ ಗ್ರಹಿಸಿಕೊಳ್ಳತಕ್ಕದ್ದು. ಒಬ್ಬ ಪುರುಷನು ಮದುವೆಯಾಗುವ ವೇಳೆ, ಆತನ ಆದ್ಯತೆಗಳು ಬದಲಾಗತಕ್ಕದ್ದು ಎಂಬುದು ಇದರಲ್ಲಿರುವ ವಿಚಾರವಾಗಿರುತ್ತದೆಂದು ಕಾಣಿಸುತ್ತದೆ. ಒಬ್ಬ ಹೆಂಡತಿಯನ್ನು ಮಾಡಿಕೊಳ್ಳುವ ಮೊದಲು, ಆತನ ಪ್ರಥಮ ಜವಾಬ್ದಾರಿಯು ಆತನ ಹೆತ್ತವರ ಕಡೆಗೆ ಆಗಿತ್ತು, ಆದರೆ ಅದಾದ ನಂತರ, ಆತನ ಹೆಂಡತಿಗೆ ಪ್ರಥಮ ಆದ್ಯತೆ ಕೊಡತಕ್ಕದ್ದು.[52]

ಪಾಶ್ಚಾತ್ಯ ಸಮಾಜಗಳಲ್ಲಿ ಹೆತ್ತವರ ಕಡೆಗಿರುವ ಜವಾಬ್ದಾರಿಗಳು ಕೆಲವು ಸಾರಿ ಮಿತಿಗೊಳಿಸಲ್ಪಟ್ಟಿರುತ್ತವೆ, ಲೇಖಕನು ತಿಳಿಸುವ ಅಂಶವು ಇಂತ ಸಮಾಜಗಳಲ್ಲಿ ಪ್ರಾಮುಖ್ಯವೆಂದು ಕಾಣಿಸದೆ ಇರಬಹುದು. ಹೇಗೂ, ಹೆತ್ತವರಿಗಿಂತಲೂ ಮೇಲಾಗಿ ದೇವರಿಗೆ ಘನವನ್ನು ಸಲ್ಲಿಸುವದೇ ಏಕೈಕ ಆದ್ಯತೆಯಾಗಿರುವಂಥ ಹೆಚ್ಚು ಹಳೆಯ, ಸಂಪ್ರದಾಯಿಕ ಸಮಾಜಗಳಲ್ಲಿ, ಅವರನ್ನು ಕೈ ಬಿಟ್ಟು ಬಿಡುವದರ ಕುರಿತಾದ ಹೇಳಿಕೆಯು ಆಘಾತಕರವಾಗಿ ಕಾಣಿಸಬಹುದಾಗಿದೆ.[53] ಆಘಾತ ಮೌಲ್ಯವು ಬಹುಶಃ ಯೇಸುವು ತಂದೆ ಮತ್ತು ತಾಯಿ ಕುರಿತಾಗಿ ಹೇಳಿದ ಮಾತುಗಳಿಗೆ ಸಮವಾಗಿರಬಹುದಾಗಿದೆ, ವಾಸ್ತವಿಕವಾಗಿ ಆತನ ಮಾತಿನ ಅರ್ಥವು ನಮ್ಮ ಹೆತ್ತವರಿಗಿಂತಲೂ ಅಧಿಕವಾಗಿ ನಾವು ಕರ್ತನನ್ನು ಪ್ರೀತಿಸಬೇಕು ಎಂದಾಗಿತ್ತು (ಲೂಕ 14:26; ನೋಡಿರಿ ಮತ್ತಾಯ 10:37). ಈ ವಾಕ್ಯಭಾಗದಲ್ಲಿ ಅದೇ ರೀತಿಯಾಗಿರುತ್ತದೆಂಬುದರಲ್ಲಿ ಸಂದೇಹವೇ ಇಲ್ಲ ಯಾಕೆಂದರೆ ಮದುವೆಯಾಗುವ ವೇಳೆ ಜವಾಬ್ದಾರಿಗಳಲ್ಲಿ ಒಂದು ಬದಲಾವಣೆ ಸಂಭವಿಸುತ್ತದೆ. ಗಂಡನು ಈಗಲೂ ತನ್ನ ಹೆತ್ತವರನ್ನು ಸನ್ಮಾನಿಸಬೇಕು (ವಿಮೋಚನಕಾಂಡ 20:12; ಧರ್ಮೋಪದೇಶಕಾಂಡ 5:16), ಅದೇ ವೇಳೆಯಲ್ಲಿ ಈಗ ಅವರಿಗಿಂತ ಮುಂದಾಗಿ ತನ್ನ ಹೆಂಡತಿಗೆ ಆದ್ಯತೆಯನ್ನು

ಕೊಡತಕ್ಕದ್ದಾಗಿರುತ್ತದೆ.

ಪುರುಷನು ತನ್ನ ಹೆತ್ತವರನ್ನು ಬಿಡುವ ಕುರಿತಾಗಿ ಹೇಳಿಕೆಯನ್ನು ನೀಡಿದ ಬಳಿಕ, ಲೇಖಕನು ನಂತರ ಹೇಳಿದ್ದೇನೆಂದರೆ ಆತನು "ತನ್ನ ಹೆಂಡತಿಯನ್ನು ಸೇರಿಕೊಳ್ಳ [דָּבַק, *ಡಬಾಕ್]"* ತಕ್ಕದ್ದು ಎಂಬುದೆ. ಈ ಇಬ್ರಿಯ ಪದದ ಅರ್ಥವು "ಅಂಟಿಕೊಳ್ಳು" ಅಥವಾ "ಹಿಡಿದುಕೊಳ್ಳು" ಎಂದಾಗಿದೆ, ಮತ್ತು ಅದು ಅನೇಕ ಸಾರಿ ದೇವರನ್ನು (ಧರ್ಮೋಪದೇಶಕಾಂಡ 10:20; 11:22; 13:4; 30:20; ಯೆಹೋಶುವ 23:8), ವಸ್ತುಗಳನ್ನು (ಧರ್ಮೋಪದೇಶಕಾಂಡ 13:17), ಜನಾಂಗಗಳನ್ನು (ಯೆಹೋಶುವ 23:12), ಮಾತ್ರವಲ್ಲದೆ ಒಬ್ಬ ಸಂಗಾತಿಯನ್ನು ಗಟ್ಟಿಯಾಗಿ ಅಂಟಿಕೊಂಡಿರುವದು ಅಥವಾ ಹಿಡಿದುಕೊಂಡಿರುವದು ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರುತ್ತದೆ. ಇದು ಆದಿಕಾಂಡ 34:3ರಲ್ಲಿರುವಂತೆ, ವೈಯಕ್ತಿಕ ಸಂಬಂಧಗಳ ವಿಷಯದಲ್ಲಿ ಸಹ ಬಳಸಲ್ಪಟ್ಟಿರುತ್ತದೆ, ಈ ವಾಕ್ಯಭಾಗದಲ್ಲಿ NASBಯು ಹೇಳುವದೇನೆಂದರೆ ಶೆಕೆಮನ "ದೀನಳ ಕಡೆಗೆ ಆಳವಾಗಿ ಮೋಹಗೊಂಡಿದ್ದನು" ಎಂಬುದಾಗಿ ಹೇಳುತ್ತದೆ. ಇಬ್ರಿಯ ವಾಕ್ಯವು ಅಕ್ಷರಶಃ ಆಕೆಯೊಂದಿಗೆ "ಆತನ ಆತ್ಮವು ಅಂಟಿಕೊಂಡಿತ್ತು" ಎಂದು ಹೇಳುತ್ತದೆ. *ಡಬಾಕ್* ಎಂಬುದರ ಇನ್ನೊಂದು ಹೃದಯಸ್ಪರ್ಶ ದೃಷ್ಟಾಂತವೆಂದರೆ ಅದು ರೂತಳ ಕಥೆಯಲ್ಲಿ ಇರುತ್ತದೆ: ನೊವೊಮಿಯು ಬೆತ್ಲೇಹೆಮಿಗೆ ಹಿಂದಿರುಗುವದಕ್ಕಿದ್ದ ಸಂದರ್ಭದಲ್ಲಿ, ಆಕೆಯ ಮೋವಾಬ್ಯದ ಸೊಸೆಯಂದಿರು ಕಣ್ಣೀರಿಟ್ಟರು, ಮತ್ತು ಒರ್ಫಳು ತನ್ನ ಜನರ ಬಳಿಗೆ ಹಿಂದಿರುಗಿದಳು. ಹೇಗೂ, "ರೂತಳಾದರೋ ತನ್ನ ಅತ್ತೆಯನ್ನೇ ಅಂಟಿಕೊಂಡಳು *[ಡಬಾಕ್]"* ಮತ್ತು ಹೀಗೆ ಹೇಳಿದಳು, "ನಿನ್ನನ್ನು ಬಿಟ್ಟು [*ಅಝೂಬ*] ಹಿಂದಿರುಗಬೇಕೆಂದು ನನ್ನನ್ನು ಒತ್ತಾಯಪಡಿಸಬೇಡ" (ರೂತಳು 1:14, 16).

"ಒಂದೇ ಶರೀರ" ಆಗುವಂತೆ "ಸೇರಿಕೊಳ್ಳುವದು" ಎಂಬ ವಿಚಾರವು ಸೂಚಿಸುವದೇನೆಂದರೆ ಒಬ್ಬ ಗಂಡನು ಮತ್ತು ಆತನ ಹೆಂಡತಿಯು ಒಂದು ಒಡಂಬಡಿಕೆಯ ಸಂಬಂಧದಲ್ಲಿ[54] ಪಾಲುಗಾರರಾಗಿದ್ದು ಅದರಲ್ಲಿ ಕುಟುಂಬದ ಮಿಕ್ಕ ಎಲ್ಲಾ ಸಮರ್ಪಣೆಗಳನ್ನೂ ರದ್ದು ಮಾಡುವಂತಹ ದಾಂಪತ್ಯ ನಿಷ್ಠೆಯ ಒಂದು ಪ್ರತಿಜ್ಞೆ ಮತ್ತು ಶಾಶ್ವತತೆಯು ಸೇರಿರುತ್ತದೆ. ಮದುವೆಯು ಒಬ್ಬನ ಸ್ವಂತ ಖಾಸಗಿ ವ್ಯವಹಾರವಾಗಿರುವದಿಲ್ಲ. ಬದಲಾಗಿ, ಇಬ್ಬರು ವ್ಯಕ್ತಿಗಳು (ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀ) ತಮ್ಮ ಕುಟುಂಬಗಳಿಗೆ, ಅವರ ಸ್ನೇಹಿತರಿಗೆ, ಮತ್ತು ಸಮಾಜಕ್ಕೆ ತಾವು ಒಂದು ಹೊಸ ಕುಟುಂಬ ಘಟಕವನ್ನು ರೂಪಿಸಿಕೊಳ್ಳಲು ಈ ವಿಧವಾದ ನಿಕಟ ರೀತಿಯಲ್ಲಿ ಒಂದುಗೂಡುತ್ತಿದ್ದೇವೆಂಬುದಾಗಿ ಘೋಷಿಸುವವರಾಗಿದ್ದಾರೆ. ಪುರುಷ ಮತ್ತು ಸ್ತ್ರೀಯು ಒಂದಾಗುವ ವೇಳೆ, ಅವರು ಸೃಷ್ಟಿಕರ್ತನು ನೀಡಿದ ಪ್ರಥಮ ಆಜ್ಞೆಯನ್ನು ನೆರವೇರಿಸುವದಕ್ಕೆ ಸಮರ್ಥತೆಯನ್ನು ಹೊಂದುವರು: "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" (1:28). "ಒಂದೇ ಶರೀರವಾಗುವರು" ಎಂಬ ಪದಗುಚ್ಛದ ಪ್ರಾಥಮಿಕ ಒತ್ತು ಲೈಂಗಿಕ ಸಂಬಂಧದ ಮೇಲೆ ಅಥವಾ ಒಟ್ಟಾಗಿ ಮಕ್ಕಳನ್ನು ಪಡೆಯುವದರ ಮೇಲೆ ಇರದೆ ಇರಬಹುದು, ಆದಾಗ್ಯೂ ಅವರ ಐಕ್ಯತೆಯಲ್ಲಿ ಅಂತಹ ವ್ಯಕ್ತಪಡಿಸುವಿಕೆಗಳನ್ನು ಕೈ ಬಿಡಲಾಗಿರುವದಿಲ್ಲ. ಬದಲಾಗಿ, ಮುಖ್ಯವಾದ ಗಮನವು "ಹೊಸ ದಂಪತಿಗಳ ಆತ್ಮೀಕ ಹಾಗೂ ಸಾಮಾಜಿಕ ಐಕ್ಯತೆಯ"[55] ಮೇಲೆಯೇ ಇರುವಂತೆ ಕಾಣಿಸುತ್ತದೆ. ಸಂಗಾತಿಯೊಂದಿಗೆ ಒಂದೇ ಶರೀರವಾಗುವಿಕೆಯು ರಕ್ತ ಸಂಬಂಧಕ್ಕಿಂತಲೂ ನಿಕಟವಾದ ಬಾಂಧವ್ಯವೊಂದನ್ನು ಸೃಷ್ಟಿಸುತ್ತದೆ, ಮತ್ತು ಇಬ್ಬರು ತಮ್ಮ ಜೀವಿತಗಳಲ್ಲಿ ಬೇರೆ ಯಾವ ಮಾನವ ಸಂಬಂಧವು ಒದಗಿಸದಂತಹ ಒಂದು ವಿಧದಲ್ಲಿ ಸಂಪೂರ್ಣತೆಯನ್ನು ಮತ್ತು ಸಾರ್ಥಕತೆಯನ್ನು ಕಂಡುಕೊಳ್ಳುವರು.

**ವಚನ 25.** ಅಧ್ಯಾಯವು ಈ ಅವಲೋಕನದೊಂದಿಗೆ ಮುಕ್ತಾಯಗೊಳ್ಳುತ್ತದೆ ಏನೆಂದರೆ **ಆ ಸ್ತ್ರೀಪುರುಷರಿಬ್ಬರು ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ**. ಇದು 3ನೇ ಅಧ್ಯಾಯದಲ್ಲಿ ನಡೆಯುವ ಘಟನೆಗಳಿಗೆ ಒಂದು ವೇದಿಕೆಯನ್ನು ಸಿದ್ಧಪಡಿಸುತ್ತದೆ, ಅಲ್ಲಿ ಪುರುಷ ಮತ್ತು ಸ್ತ್ರೀಯರು ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದ ಬಳಿಕವಷ್ಟೇ ತಮ್ಮ ಬೆತ್ತಲೆಯ ಬಗ್ಗೆ ಪ್ರಜ್ಞೆಯುಳ್ಳವರಾಗುತ್ತಾರೆ. ಅದನ್ನು ಕಂಡುಕೊಂಡ ಬಳಿಕ, ಅವರು ಪ್ರಥಮ ಬಾರಿಗೆ ನಾಚಿಕೆಗೊಂಡರು. ಮೂಲತಃ, ಪುರುಷ ಮತ್ತು ಸ್ತ್ರೀ "ನಾಚಿಕೊಳ್ಳಲಿಲ್ಲ." ಇಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕಾದದ್ದೇನೆಂದರೆ ಇಬ್ರಿಯ ಪದವು בּוֹשׁ *(ಬೊಶ್)* ಅವಶ್ಯಕವಾಗಿ, "ನಾಚಿಕೆ" ಎಂಬುದಕ್ಕಿರುವ ಆಂಗ್ಲದ ಪದವು ಸೂಚಿಸುವಂತೆ ತೋರುವ ರೀತಿಯಲ್ಲಿ ಪಾಪದ ನಿಮಿತ್ತವಾದ ವೈಯಕ್ತಿಕ ಅಪರಾಧಬಾವನೆಯನ್ನು ಸೂಚಿಸುವದಿಲ್ಲ. ಹಳೆಯ ಒಡಂಬಡಿಕೆಯಲ್ಲಿ, *ಬೊಶ್* ಎಂಬುದು ಕೆಲವು ಸಾರಿ ಕಥಾನಿರೂಪಣೆಯಲ್ಲಿ ಪಾಪ ಅಥವಾ ಅಪರಾಧಭಾವನೆಯು ಇರುವಂಥಹ ಸನ್ನಿವೇಶದಲ್ಲಿ "ನಾಚಿಕೆ" ಎಂಬುದಾಗಿ ಅನುವಾದಿಸಲ್ಪಟ್ಟಿರುವದಿಲ್ಲ; ಬದಲಾಗಿ, ಅದು ಅದು "ಕಳವಳ" ಅಥವಾ "ಮುಜುಗರ" ಸೂಚಿಸುವದಾಗಿದೆ. (ನ್ಯಾಯಸ್ಥಾಪಕ 3:25ರಲ್ಲಿ NASBಯು *ಬೊಶ್* ಎಂಬುದನ್ನು "ಕಳವಳ" ಎಂದು ಅನುವಾದಿಸಿರುತ್ತದೆ.) ವಾಸ್ತವಿಕದಲ್ಲಿ, *ಬೊಶ್* ಎಂಬುದು ಒಬ್ಬ ವ್ಯಕ್ತಿಯು ಪ್ರಾಥಮಿಕವಾಗಿ "ಲೈಂಗಿಕ ನಾಚಿಕೆಯೆಡೆಗೆ ಅಭಿಮುಖ"[56] ಆಗಿರದಂಥನ್ನು ಸಹಿಸುವದು ಅಥವಾ ಅನುಭವಿಸುವದು ಎಂಬಂತಹ ಒಂದು ತಟಸ್ಥ ಸೂಚ್ಯಾರ್ಥವನ್ನು ಹೊಂದಿರುತ್ತದೆ. ಈ ಪದದ ಹೆಚ್ಚು ಸಾಮಾನ್ಯ ಅರ್ಥಗಳು ಸೂಚಿಸುವದೇನೆಂದರೆ ವ್ಯಕ್ತಿಗಳು ಅಥವಾ ಸಮುದಾಯಗಳು ತಮ್ಮ ಕ್ರಿಯೆಗಳಿಗೆ ಸಾಕ್ಷಿಯಾದವರ ಸಮ್ಮುಖದಲ್ಲಿ "ಅವಮಾನ," "ಅಗೌರವ," "ತೇಜೋವಧೆ" ಹೊಂದುವರು, ಅಥವಾ "ಮೂರ್ಖರಂತೆ ಕಾಣುವ ಹಾಗೆ ಮಾಡಲ್ಪಡುವರು" (ಯೆಶಾಯ 1:29; 20:5; ಯೆರೆಮೀಯ 2:36; 48:13).[57]

ಅವರು ಪಾಪ ಮಾಡುವ ಕ್ಷಣದ ತನಕವೂ, ವಾಕ್ಯವು ದೃಢಪಡಿಸುವ ಪ್ರಕಾರ ಅವರು ಒಂದು ಆದರ್ಶಕರ ಸ್ಥಿತಿಯಲ್ಲಿದ್ದರು, ತಮ್ಮನ್ನು ಮತ್ತು ತಮ್ಮ ಲೈಂಗಿಕತೆಯನ್ನು ಸಂಪೂರ್ಣತೆ ಹಾಗೂ ಮುಗ್ಧತೆಯಿಂದ (ಚಿಕ್ಕ ಮಕ್ಕಳ ಹಾಗೆ) ನೋಡುವದಕ್ಕೆ ಶಕ್ತರಾಗಿದ್ದರು ಯಾಕೆಂದರೆ ಅವರ ಬೆತ್ತಲೆಯು ಒಂದು ಮುಕ್ತತೆ ಹಾಗೂ ಭರವಸಗಳ ವ್ಯಕ್ತಪಡಿಸುವಿಕೆ ಆಗಿತ್ತು. ಅವರು ಪಾಪದ ಮುಖಾಂತರವಾಗಿ ತಮ್ಮ ಮುಗ್ಧತೆಯನ್ನು ಕಳೆದುಕೊಂಡಾಗ, ಅವರು ನಾಚಿಕೆಯನ್ನು ಅನುಭವಿಸಿದರು ಮತ್ತು ಬಟ್ಟೆಗಳಿಂದ ಮುಚ್ಚಿಕೊಳ್ಳುವ ಮೂಲಕ ತಮ್ಮ ಬೆತ್ತಲೆತನವನ್ನು ರಕ್ಷಿಸಿಕೊಳ್ಳುವ ಅಗತ್ಯವನ್ನು ಗ್ರಹಿಸಿಕೊಂಡರು (3:7).[58] ಅವರು ಮರಗಳ ನಡುವೆ ದೇವರು ನಡೆದು ಬರುವ ಶಬ್ದವನ್ನು ಕೇಳಿಸಿಕೊಂಡಾಗ, ಅಂಜೂರದ ಎಲೆಗಳಿಂದ ಮತ್ತು ತುಂಡು ಬಟ್ಟೆಗಳಿಂದ ತಮ್ಮನ್ನು ಮುಚ್ಚಿಕೊಳ್ಳಲು ಪ್ರಯತ್ನ ಪಟ್ಟರು.

ಆದಿಕಾಂಡ 2:25ನೇ ವಚನವು ಬೆತ್ತಲೆತನವನ್ನು ಇಂದು ಆರೋಗ್ಯಕರ ಹಾಗೂ ಸ್ವಾಭಾವಿಕ ಸ್ಥಿತಿಯಲ್ಲಿರುವ ಪುರುಷ ಮತ್ತು ಸ್ತ್ರೀಯರು ಸಮಾಜದಲ್ಲಿ ಅನುಭವಿಸಲೇ ಬೇಕಾದ ರೀತಿಯಲ್ಲಿ ವೈಭವೀಕರಿಸುತ್ತಿದೆ ಎಂಬುದು ಇದರರ್ಥವಲ್ಲ. ಅದಕ್ಕೆ ತದ್ವಿರುದ್ಧವಾದದ್ದಕ್ಕೆ ಪ್ರತಿರೋಧಗಳ ಹೊರತಾಗಿಯೂ, ಚಿಕ್ಕ ಮಕ್ಕಳಂತಾಗುವದಕ್ಕೆ, ಆದಾಮ ಮತ್ತು ಹವ್ವಳರು ತಮ್ಮ ಬೆತ್ತಲೆತನದ ಕುರಿತು ನಾಚಿಕೆಯಿಲ್ಲದವರಾಗಿದ್ದಂಥ ಆ ಏದೆನ್ ತೋಟದಲ್ಲಿನ ಮುಗ್ಧತೆಯನ್ನು ಅನುಭವಿಸುವದಕ್ಕಾಗಿ ಗಡಿಯಾರವನ್ನು ಹಿಂದಕ್ಕೆ ತಿರುಗಿಸುವದು ಅಸಾಧ್ಯವಾಗಿರುತ್ತದೆ. ಬದಲಾಗಿ, ಮನುಷ್ಯನು ಬಿದ್ದು ಹೋದ ನಂತರ, ಜನರ ಎದುರಿನಲ್ಲಿ ಒಬ್ಬನು ತನ್ನ ಜನನಾಂಗವನ್ನು ಮುಚ್ಚಿಕೊಳ್ಳದಿರುವದು ಅಸಭ್ಯವಾದದ್ದೆಂಬದು ಶಾಸ್ತ್ರದ

ಮೂಲಭೂತ ಭಾವಿಸಿಕೊಳ್ಳುವಿಕೆಯಾಗಿರುತ್ತದೆ (ವಿಮೋಚನಕಾಂಡ 20:26; 28:42, 43). ಅದೇ ರೀತಿಯಲ್ಲಿಯೇ, ಕುಟುಂಬದ ಮತ್ತೊಬ್ಬ ಸದಸ್ಯನ, ಆತನು ಸಲಿಂಗದವನಾಗಿದ್ದರೂ ಸರಿಯೇ, ಆತನ ಬೆತ್ತಲೆತನವನ್ನು ದಿಟ್ಟಿಸುವದು ಅಕ್ಷಮ್ಯವಾಗಿತ್ತು (9:20-27). ರಕ್ತಸಂಬಂಧಿಗಳೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಳ್ಳುವ ಶೋಧನೆಯ ಕಾರಣದಿಂದಾಗಿ, ವಿರುದ್ಧ ಲಿಂಗದವರನ್ನು ಬೆತ್ತಲೆಗೊಳಿಸುವದು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿತ್ತು. ಸ್ಪಷ್ಟವಾಗಿರುವಂತೆ, "ಬೆತ್ತಲೆಗೊಳಿಸು" ಎಂಬುದು ಲೈಂಗಿಕ ಸಂಬಂಧಗಳನ್ನು ಹೊಂದುವದಕ್ಕಾಗಿ ಕೆಲವು ಸಾರಿ ಬಳಸಲ್ಪಡುತ್ತಿದ್ದ ಇಬ್ರಿಯ ಭಾಷೆಯ ಗಾದೆಯಾಗಿರುತ್ತದೆ. ಇದು ಯಾಜಕಕಾಂಡ 18:6-17ರಲ್ಲಿ ಪದೇ ಪದೇ ಕಾಣಿಸಿಕೊಳ್ಳುವದಾಗಿದ್ದು, ಅದು ಒಬ್ಬ ಪುರುಷನನ್ನು ತನ್ನ ಮಹಿಳಾ ಸಂಬಂಧಿಗಳೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಳ್ಳುವುದನ್ನು ನಿಷೇಧಿಸುತ್ತದೆ.[59]

# ಅನ್ವಯಿಸುವಿಕೆ

**ಸಬ್ಬತ್ (2:1-3)**

ಸಬ್ಬತ್ (ವಾರದ ಏಳನೆಯ ದಿನ) ಸೃಷ್ಟಿಕರ್ತನು ವಿಶ್ರಾಂತಿ ತೆಗೆದುಕೊಂಡ ದಿನವಾಗಿತ್ತು. ಆತನಿಗೆ ಬಳಲಿಕೆಯಾಗಿರಲಿಲ್ಲ (ಯೆಶಾಯ 40:28) ಅಥವಾ ಪುನಃ ಚೈತನ್ಯ ಪಡಿಸಿಕೊಳ್ಳಬೇಕಾದ ಅಗತ್ಯತೆಯಲ್ಲಿರಲಿಲ್ಲ; ಆತನು "ಆಕಾಶವನ್ನೂ ಭೂಮಿಯನ್ನೂ" ಮತ್ತು "ಅವುಗಳಲ್ಲಿರುವ ಸಮಸ್ತವನ್ನೂ" ಸೃಷ್ಟಿಸುವ ಚಟುವಟಿಕೆಯನ್ನು ನಿಲ್ಲಿಸಿದನು (2:1-3) ಯಾಕೆಂದರೆ ಆತನು ಸೃಷ್ಟಿಯ ಕೆಲಸವನ್ನು ಪೂರ್ತಿಗೊಳಿಸಿದ್ದನಷ್ಟೆ. ಬೇರೊಂದು ಅರ್ಥದಲ್ಲಿ, ದೇವರು ಮಳೆಯನ್ನು ಬರಮಾಡಿ, ಬೀಜಗಳನ್ನು ಬೆಳೆಯುವಂತೆ ಮಾಡುವ ಮೂಲಕ, ಮತ್ತು ತನ್ನ ಸೃಷ್ಟಿಗೆಲ್ಲಾ ಜೀವ ಮತ್ತು ಶ್ವಾಸಗಳನ್ನು ನೀಡುವ ಮೂಲಕವಾಗಿ (ಕೀರ್ತನೆ 104:1-35; 139:13-16) ತನ್ನ ಲೋಕವನ್ನು ಪೋಷಣೆ ಮಾಡುವ ಕೆಲಸವನ್ನು ಎಂದಿಗೂ ನಿಲ್ಲಿಸಲಿಲ್ಲ. ಆತನು ಯಾವಾಗಲೂ ಕೆಲಸದಲ್ಲಿರುತ್ತಾನೆ, ತನ್ನ ಜನರ ಪ್ರಾರ್ಥನೆಗಳಿಗೆ ಪ್ರತ್ಯುತ್ತರ ನೀಡುವದಕ್ಕೆ, ಅವರ ದೇಹಗಳನ್ನು ಗುಣಪಡಿಸುವದಕ್ಕೆ, ಮತ್ತು ಅವರು ಜೀವಿತಗಳನ್ನು ಆಶೀರ್ವದಿಸುವದಕ್ಕಾಗಿ ಸಬ್ಬತ್ ದಿನದಲ್ಲಿ ಸಹ ಕ್ರಿಯಾಶೀಲನಾಗಿರುತ್ತಾನೆ. ಸಬ್ಬತ್ ದಿನದಂದು ಒಬ್ಬ ಮನುಷ್ಯನನ್ನು ಗುಣಪಡಿಸಿದ್ದಕ್ಕಾಗಿ ಯೇಸುವು ಗದರಿಸಲ್ಪಟ್ಟ ವೇಳೆ, ಆತನು ಈ ವಿಧದಲ್ಲಿ ಪ್ರತ್ಯುತ್ತರ ನೀಡಿದನು, "ನನ್ನ ತಂದೆಯು ಇಂದಿನವರೆಗೂ ಕೆಲಸಮಾಡುತ್ತಾನೆ, ನಾನೂ ಕೆಲಸಮಾಡುತ್ತೇನೆ" (ಯೋಹಾನ 5:17; ನೋಡಿರಿ 7:21-24; 9:4, 14; 17:4).

ಸೀನಾಯಿ ಪರ್ವತದ ಮೇಲೆ ದಶಾಜ್ಞೆಗಳು ಕೊಡಲ್ಪಟ್ಟ ವೇಳೆ, ಸಬ್ಬತ್ ಆಚರಣೆಗಾಗಿ ಕೊಟ್ಟ ಕಾರಣವು ದೇವರು "ವಿಶ್ರಾಂತಿ ತೆಗೆದುಕೊಂಡದ್ದನ್ನು" ಅನುಕರಣೆ ಮಾಡುವದೇ ಆಗಿತ್ತು. ಆತನು ಸೃಷ್ಟಿಯ ಮುಕ್ತಾಯದ ವೇಳೆ ಮಾಡಿದ್ದ ಪ್ರಕಾರವೇ ಇಸ್ರಾಯೇಲ್ಯರು ತಮ್ಮ ದುಡಿಮೆಗಳನ್ನೆಲ್ಲಾ ನಿಲ್ಲಿಸಬೇಕಿತ್ತು (ವಿಮೋಚನಕಾಂಡ 20:8-11).

ಇಸ್ರಾಯೇಲ್ಯರಿಗಾದರೋ ಸಬ್ಬತ್ ಸಂಪೂರ್ಣ ನಿಷ್ಕ್ರಿಯೆಯ ದಿನವಾಗಿರಲಿಲ್ಲ. ಅದು ವಾರದಲ್ಲಿ ರೂಢಿಯಾಗಿ ನಡಿಸುತ್ತಿದ್ದ ದುಡಿಮೆಯಿಂದ ಅವರು ಬಿಡುಗಡೆಗೊಳಿಸಲ್ಪಡುತ್ತಿದ್ದ ದಿನವಾಗಿತ್ತು: ಭೂಮಿಯನ್ನು ಉಳುವದು; ತಮ್ಮ ಬೆಳೆಯನ್ನು ನೆಡುವದು; ಧಾನ್ಯ, ಹಣ್ಣುಗಳನ್ನು, ಮತ್ತು ತರಕಾರಿಗಳನ್ನು ಕಟಾವು ಮಾಡುವದು; ಮತ್ತು ಅವರ ಜೀವಿತಗಳ ಪೋಷಣೆಗೆ ಅವಶ್ಯಕವಾಗಿದ್ದ ಕ್ರಯ ಮತ್ತು ವಿಕ್ರಯಗಳಂತಹ ವಾಣಿಜ್ಯ ಕೆಲಸವನ್ನು

ನಡಿಸುವದು. ಅವರು ಈ ವಿಶ್ರಾಂತಿಯ ದಿನದಲ್ಲಿ ಪಾಲುಗಾರರಾಗುವಂತೆ ತಮ್ಮ ದಾಸರಿಗೆ ಮತ್ತು ಪ್ರಾಣಿಗಳಿಗೆ ಅನುಮತಿ ಕೊಡುವ ಮೂಲಕ ಅವರೊಂದಿಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕಾಗಿತ್ತು (ವಿಮೋಚನಕಾಂಡ 20:8-11; 23:12; ನೋಡಿರಿ 34:21). ಸಬ್ಬತ್ ದಿನದ ತತ್ವವನ್ನು ದುರುಪಯೋಗ ಮಾಡಿಕೊಳ್ಳುವದನ್ನು ದೇವರ ಮನುಷ್ಯರು ಕಠಿಣವಾಗಿ ಖಂಡಿಸುತ್ತಿದ್ದರು (ವಿಮೋಚನಕಾಂಡ 31:15; ನೆಹಮೀಯ 13:15-22; ಆಮೋಸ 8:5).

ಯಥಾಃಕ್ರಮವಾಗಿ ಮಾಡಲಾಗುತ್ತಿದ್ದ ಕೆಲಸವನ್ನು ನಿಲ್ಲಿಸಿ ಬಿಡುವದರ (ಮಾಡಕೂಡದಾದ ಚಟುವಟಿಕೆಗಳು) ನಕಾರಾತ್ಮಕ ಅಂಶಕ್ಕೆ ತದ್ವಿರುದ್ಧವಾಗಿ, ಸಬ್ಬತ್ ಎಂಬುದು ಸಮಸ್ತವನ್ನು ಸೃಷ್ಟಿಸಿದವನು ಮತ್ತು ಇಸ್ರಾಯೇಲ್ಯರ ವಿಮೋಚಕನಾಗಿರುವ ದೇವರಿಗೆ ಸಂಭ್ರಮಾಚಾರಣೆ, ಆರಾಧನೆ, ಮತ್ತು ಸ್ತೋತ್ರವನ್ನು ಸಲ್ಲಿಸುವ ಒಂದು ದಿನವಾಗಿತ್ತು. ಅರಣ್ಯದಲ್ಲಿನ ಅಲೆದಾಟವು ಅಂತ್ಯಗೊಂಡ ಸ್ವಲ್ಪ ಕಾಲಕ್ಕೆ ಮುಂಚೆ, ಮೋಶೆಯು ಇಸ್ರಾಯೇಲ್ಯರ ಹೊಸ ಪೀಳಿಗೆಗೆ ಹೀಗೆ ಹೇಳಿದನು, "ಐಗುಪ್ತದೇಶದಲ್ಲಿ ನೀವೂ ದಾಸತ್ವದಲ್ಲಿದ್ದದ್ದನ್ನೂ ನಿಮ್ಮ ದೇವರಾದ ಯೆಹೋವನು ಭುಜಪರಾಕ್ರಮದಿಂದಲೂ ಶಿಕ್ಷಾಹಸ್ತದಿಂದಲೂ ನಿಮ್ಮನ್ನು ಬಿಡುಗಡೆಮಾಡಿದ್ದನ್ನೂ ಜ್ಞಾಪಕಮಾಡಿಕೊಳ್ಳಿರಿ. ನೀವು ಸಬ್ಬತ್ ದಿನವನ್ನು ಆಚರಿಸಬೇಕೆಂಬದನ್ನು ನಿಮ್ಮ ದೇವರಾದ ಯೆಹೋವನು ಇದಕ್ಕಾಗಿಯೇ ಆಜ್ಞಾಪಿಸಿದ್ದಾನೆ" (ಧರ್ಮೋಪದೇಶಕಾಂಡ 5:15).

ವಾರದ ಸಬ್ಬತ್ ದಿನದ ಜೊತೆಯಲ್ಲಿ, ಇಸ್ರಾಯೇಲ್ಯರಲ್ಲಿದ್ದ ಎಲ್ಲಾ ದೊಡ್ಡ ಹಬ್ಬದ ದಿನಗಳು ವಿಶೇಷ ಸಬ್ಬತ್ ದಿನಗಳಾಗಿದ್ದು ಅವುಗಳಲ್ಲಿ ಯಾವದೇ ಸಾಧಾರಣ ದುಡಿಮೆಯನ್ನು ಮಾಡಕೂಡದಿತ್ತು (ಯಾಜಕಕಾಂಡ 23:5-8, 15-21, 34-39; ಅರಣ್ಯಕಾಂಡ 28:25, 26; 29:1, 12, 35). ಬದಲಾಗಿ, ಪರ್ಣಶಾಲೆಗಳ ಹಬ್ಬದಲ್ಲಿ, ಇಸ್ರಾಯೇಲ್ಯರು ಆರಾಧನೆಯ "ಕೆಲಸ" (עָבַד, *ಅಬಾದ)*[60] (ಒಂದು ಆರಾಧನಾ ಸೇವೆ) ಮಾಡಬೇಕಾಗಿತ್ತು, ಅದರಲ್ಲಿ ಕೊಂಡಾಡ, ಸ್ತುತಿ ಸಲ್ಲಿಸುವದು, ಮತ್ತು ದೇವದರ್ಶನ ಗುಡಾರದಲ್ಲಿ (ಅನಂತರ ದೇವಾಲಯದಲ್ಲಿ) ಒಂದು ಕುಟುಂಬವಾಗಿ ಊಟ ಮಾಡುವದರ ಮೂಲಕ ಅನ್ಯೋನ್ಯತೆಯನ್ನಿಟ್ಟುಕೊಳ್ಳುವದು ಇವುಗಳು ಸೇರಿದ್ದವು. ಈ ಹಬ್ಬವು ಇಸ್ರಾಯೇಲ್ಯರಿಗೆ ತಮ್ಮೊಂದಿಗೆ ಕರ್ತನ ಆರಾಧನೆಯನ್ನು ಭಾಗವಹಿಸುವಂತೆ ಅವರ "ದಾಸದಾಸಿಯರನ್ನು," ಲೇವಿಯರನ್ನು, ಪರದೇಶದವರನ್ನು (ಈ ಪದವು גֵּר, *ಗೇರ* ಎಂಬುದರಿಂದ ಬಂದಿದ್ದು ಅನ್ಯಜನಾಂಗದ ಅಪರಿಚಿತರನ್ನು ಸೂಚಿಸುತ್ತದೆ), ಮತ್ತು ತಂದೆತಾಯಿಗಳಿಲ್ಲದವರನ್ನು ಮತ್ತು ವಿಧವೆತರನ್ನು ಆಮಂತ್ರಿಸುವದಕ್ಕೆ ಒಂದು ಸಂದರ್ಭವನ್ನು ಒದಗಿಸುವದಾಗಿತ್ತು (ಧರ್ಮೋಪದೇಶಕಾಂಡ 16:13-15). ಕಡಿಮೆಯಿರುವವರ ಸಂಗಡ ತಮ್ಮ ಹಬ್ಬದ ಭೋಜನವನ್ನು ಹಂಚಿಕೊಳ್ಳುವದರ ಮೂಲಕ, ದೇವರ ಜನರು ಕಷ್ಟದ ಪರಿಸ್ಥಿತಿಗಳಲ್ಲಿರುವವರ ಕಡೆಗೆ ತಮಗಿರುವ ಕಾಳಜಿಯನ್ನು ತೋರ್ಪಡಿಸುವದಕ್ಕೆ ಶಕ್ತರಾಗಬಹುದಿತ್ತು. ಪ್ರಥಮ ಫಲಗಳ ಹಬ್ಬದ (ವಾರಗಳ ಹಬ್ಬ, ಅಥವಾ "ಪಂಚಾಶತ್ತಮ") ವಿಷಯದಲ್ಲಿ ಸಹ ಇದೇ ರೀತಿಯ ಅಪ್ಪಣೆಗಳು ಕೊಡಲ್ಪಟ್ಟಿರುತ್ತವೆ, ಆ ಹಬ್ಬವನ್ನು ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸುವ ವೇಳೆ ಅನುಭವ ಮಾಡಲಿದ್ದರು.

ಕ್ರೈಸ್ತರಿಗಾದರೋ, ಸಬ್ಬತ್ ಎಂಬುದು ವಾರದ ಏಳನೆಯ ದಿನವಾಗಲಿ (ಶನಿವಾರ) ಅಥವಾ ವಾರದ ಮೊದಲನೆಯ ದಿನವಾಗಲಿ (ಭಾನುವಾರ) ಸಹ ಆಗಿರುವದಿಲ್ಲ, ಆದಾಗ್ಯೂ ವಾರದ ಮೊದಲನೆಯ ದಿನಕ್ಕೆ ಯೇಸುವು ಪುನರುತ್ಥಾನಗೊಂಡ ದಿನವೆಂಬ ಕಾರಣಕ್ಕಾಗಿ ಕ್ರೈಸ್ತೀಯ ಆರಾಧನೆಯಲ್ಲಿ ವಿಶೇಷ ಮಹತ್ವವಿರುತ್ತದೆ. ದೇವರ ಜನರು ಅಂತ್ಯದ ವರೆಗೂ ಕರ್ತನಲ್ಲಿರುವ ತಮ್ಮ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಮೂಲಕ ಕ್ರೈಸ್ತೀಯ

ಯುಗದಲ್ಲಿ ಮತ್ತು ನಿತ್ಯಕಾಲಕ್ಕೂ ವಿಶ್ರಾಂತಿಯನ್ನು ಅನುಭವಿಸಬಹುದು (ಇಬ್ರಿಯ 3:14). ಇಬ್ರಿಯರಿಗೆ ಬರೆದ ಪತ್ರಿಕೆಯ ಲೇಖಕನು ಈ "ವಿಶ್ರಾಂತಿ" (ಪ್ರಶಾಂತ ಮನಸ್ಸು, ಒಂದು ಆತ್ಮೀಕ ಹಿತಾನುಭವ, ಮತ್ತು ರಕ್ಷಣೆಯಲ್ಲಿ ಭರವಸ) ಭಾವನೆಯನ್ನು ಕುರಿತು ಒತ್ತಿ ಹೇಳಿದನು. ಯೇಸು ಕ್ರಿಸ್ತನು ಈ ಸಮಾಧಾನವನ್ನು ಒದಗಿಸುತ್ತಾನೆ, ಆದರೆ ಆತನ ಕೆಲವು ಜನರು "ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯ"ವನ್ನು ಬೆಳೆಸಿಕೊಳ್ಳುವ ಮೂಲಕವಾಗಿ (ಇಬ್ರಿಯ 3:12) ಇದನ್ನು ಕಳೆದುಕೊಳ್ಳಬಹುದಾದ ಅಪಾಯದಲ್ಲಿದ್ದರು. ಲೇಖಕನು ತಾನು ಯಾರಿಗೆ ಬರೆಯುತ್ತಿದ್ದಾನೋ ಆ ಇಬ್ರಿಯ ಕ್ರೈಸ್ತರ ಮತ್ತು ಪ್ರಾಚೀನ ಇಸ್ರಾಯೇಲ್ಯರ ನಡುವೆ ಒಂದು ಸಾದೃಶ್ಯವನ್ನು ಮಾಡುತ್ತಾನೆ, ಆ ಇಸ್ರಾಯೇಲ್ಯರು ತಮ್ಮ ನಂಬಿಕೆಯಿಲ್ಲದಿರುವಿಕೆ ಮತ್ತು ದೇವರಿಗೆ ಅವಿಧೇಯರಾಗುವದರ ನಿಮಿತ್ತವಾಗಿ ಅರಣ್ಯದಲ್ಲಿ ದೇವರ "ವಿಶ್ರಾಂತಿ"ಯನ್ನು ಅನುಭವಿಸುವದಕ್ಕೆ ವಿಫಲರಾದರು (ಇಬ್ರಿಯ 3:18, 19). ಅನಂತರ ಆತನು "ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ" (ಇಬ್ರಿಯ 4:3) ಎಂದು ಹೇಳುವ ಮೂಲಕ ತನ್ನ ವಾಚಕರನ್ನು ಪ್ರೋತ್ಸಾಹಿಸುತ್ತಾನೆ. ಅಂತಿಮವಾಗಿ, ಆತನು "ದೇವರ ಜನರು ಅನುಭವಿಸುವದಕ್ಕಿರುವ ಸಬ್ಬತೆಂಬ ವಿಶ್ರಾಂತಿಯು ಇನ್ನೂ ಉಂಟು" ಎಂಬುದಾಗಿ ಅವರಿಗೆ ಪುನರಾಶ್ವಾಸನೆಯನ್ನು ನೀಡುತ್ತಾನೆ (ಇಬ್ರಿಯ 4:9).

ಇಬ್ರಿಯರಿಗೆ ಬರೆದ ಪತ್ರಿಕೆಯ ವಾಕ್ಯಭಾಗವು ಕ್ರೈಸ್ತೀಯ ಜೀವಿತದ "ಈಗಾಗಲೇ" ಮತ್ತು "ಇನ್ನೂ ಇಲ್ಲ" ಎಂಬ ಭಾವನೆಯನ್ನು ಮುಂದಿಡುತ್ತದೆ. ದೇವರ ಜನರಾಗಿ, ನಾವು ಬರಲಿರುವ ಯುಗದ ಆಶೀರ್ವಾದವನ್ನು (ಸಬ್ಬತ್ ವಿಶ್ರಾಂತಿ) ಈ ಜೀವಿತದಲ್ಲಿ ಅನುಭವಿಸುವದಕ್ಕೆ ಆರಂಭಿಸುತ್ತೇವೆ (ಇಬ್ರಿಯ 6:4, 5) - ಆದರೆ ನಾವು ಪರಲೋಕವನ್ನು ತಲುಪುವ ತನಕವೂ ಅವುಗಳನ್ನು ಪೂರ್ಣವಾಗಿ ಅನುಭವಿಸುವದಕ್ಕೆ ಸಾಧ್ಯವಿರುವದಿಲ್ಲ. ಅದೇ ರೀತಿಯಲ್ಲಿಯೇ, ಕ್ರೈಸ್ತರು ಈಗ ನಿತ್ಯಜೀವವನ್ನು ಪಡೆದುಕೊಳ್ಳುವರು (ಯೋಹಾನ 3:36; 5:24; 6:47, 54) ಆದರೆ ಅಂತಿಮ ನ್ಯಾಯತೀರ್ಪಿನ ನಂತರವಷ್ಟೇ ಅವರು ಅದನ್ನು ಸಂಪೂರ್ಣವಾಗಿ ಆನಂದಿಸಬಲ್ಲರು (ಮತ್ತಾಯ 25:46). ಈಗ ನಾವು ಪರಲೋಕ ರಾಜ್ಯದ ಪ್ರಜೆಗಳಾಗಿರುವೆವು (ಕೊಲೊಸ್ಸೆ 1:12, 13), ಆದರೆ ಕ್ರಿಸ್ತನ ಎರಡನೆಯ ಬರೋಣದ ವೇಳೆ ನಾವು ನಿತ್ಯವಾದ ರಾಜ್ಯದ ಸಕಲ ಐಶ್ವರ್ಯಗಳಲ್ಲಿ ಮತ್ತು ಸಂತೋಷಗಳಲ್ಲಿ ಪ್ರವೇಶಿಸುವೆವು (ಮತ್ತಾಯ 25:31, 34).

ಇನ್ನುಳಿದದ್ದು ಒಬ್ಬ ವ್ಯಕ್ತಿಯು ಯೇಸುವಿನ ಮಹಾ ಆಮಂತ್ರಣವನ್ನು ಸ್ವೀಕರಿಸಿಕೊಳ್ಳುವಾಗ ಸಂಭವಿಸುತ್ತದೆ, ಆತನು ಹೇಳಿದ್ದೇನೆಂದರೆ,

> ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು (ಮತ್ತಾಯ 11:28-30).

ಕರ್ತನು ಶತಮಾನಗಳಿಂದಲೂ ರಬ್ಬಿಗಳು ಅವರ ಮೇಲೆ ಹೇರಿದ್ದ ನೇಮನಿಷ್ಠಾವಾದಿ ಉಪದೇಶಕರುಗಳ ನಿಯಮಗಳಿಂದ, ವಿಧಿಗಳಿಂದ, ಮತ್ತು ಸಂಪ್ರದಾಯಗಳಿಂದ ಬಳಲಿದ್ದಂಥ ಮತ್ತು ಭಾರವಾದ ಹೊರೆಯನ್ನು ಹೊತ್ತಿದ್ದಂಥ ಯೆಹೂದ್ಯರ ಸಂಗಡ ಮಾತಾಡುತ್ತಿದ್ದನು

(ಮತ್ತಾಯ 9:9-13; 12:1-8; 15:1-20; 23:1-12, 23, 24; ಯೋಹಾನ 7:49).

ಕ್ರೈಸ್ತನ ಸಬ್ಬತ್ ದಿನವು ಇಸ್ರಾಯೇಲ್ಯರ ಸಬ್ಬತ್ ದಿನಕ್ಕಿಂತ ಭಿನ್ನವಾದದ್ದು. ಅದು ವಾರಕ್ಕೊಮ್ಮೆ ಅಥವಾ ವರ್ಷದಲ್ಲಿನ ಒಂದು ವಿಶೇಷ ಕಾಲದಲ್ಲಿ ಆಚರಿಸಬೇಕಾದ ಪರಿಶುದ್ಧ ದಿನವಾಗಿರುವದಿಲ್ಲ. "ಸಬ್ಬತ್ ದಿನವನ್ನು ಆಚರಿಸಬೇಕೆಂದರೆ," ನಾವು ನಮ್ಮ ದೇಹಗಳನ್ನು "ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ" (ರೋಮಾ 12:1) ಅರ್ಪಿಸುವ ಮೂಲಕ ಅನುದಿನವು ಕರ್ತನನ್ನು ಘನ ಪಡಿಸಬೇಕು ಮತ್ತು ಮಹಿಮೆಗೊಳಿಸಬೇಕು.

### ಒಂದು ಜೀವವೃಕ್ಷ ಮತ್ತು ಜೀವಜಲ (2:9, 10)

ಜೀವವೃಕ್ಷ ಮತ್ತು ಜೀವಜಲಗಳು ಬೈಬಲಿನಲ್ಲಿ ಹೇಗೆ ಚಿತ್ರಿಸಲ್ಪಟ್ಟಿವೆ? ಈ ಪ್ರಶ್ನೆಗೆ ಉತ್ತರಿಸಬೇಕೆಂದರೆ, ನಾವು ಹಳೆಯ ಒಡಂಬಡಿಕೆಯೊಳಗೆ ಈ ಚಿತ್ರಣಗಳು ಬಳಸಲ್ಪಟ್ಟಿರುವದನ್ನು ಅಧ್ಯಯನ ಮಾಡುವ ಮೂಲಕ ಆರಂಭಿಸೋಣ.

*ಏದೆನ್ ತೋಟದಲ್ಲಿ* (2:9, 10). ಜೀವಸ್ವರೂಪನಾದ ಸೃಷ್ಟಿಕರ್ತ ದೇವರು, ಮಾನವನ ದೈಹಿಕ ಹಿತಾಸಕ್ತಿಗೋಸ್ಕರ ಸಮಸ್ತವನ್ನು ಏದೆನ್ ತೋಟದಲ್ಲಿ ಒದಗಿಸಿ ಕೊಟ್ಟನು:

> ಮತ್ತು ಯೆಹೋವದೇವರು ನೋಟಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರದ ಮರಗಳನ್ನು ಆ ಭೂಮಿಯಲ್ಲಿ ಬೆಳೆಯ ಮಾಡಿದನು. ಅದಲ್ಲದೆ ಆ ವನಮಧ್ಯದಲ್ಲಿ ಜೀವದಾಯಕ ವೃಕ್ಷವನ್ನೂ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷವನ್ನೂ ಬೆಳೆಯಿಸಿದನು. ಏದೆನ್ ಸೀಮೆಯಲ್ಲಿ ಒಂದು ನದಿ ಹುಟ್ಟಿ ಆ ವನವನ್ನು ತೋಯಿಸುತ್ತಿತ್ತು. ಅದು ಆಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು (2:9, 10).

ಪ್ರಥಮ ಪುರುಷ ಮತ್ತು ಸ್ತ್ರೀಯರು ತಮ್ಮ ಸುರಕ್ಷಿತ ವಾತಾವರಣದಲ್ಲಿದ್ದ ಗಿಡಗಳು ಮತ್ತು ಮರಗಳ ಹಣ್ಣುಗಳಿಂದ ಪೋಷಣೆಯನ್ನು ಪಡೆಯುವದರ ಮೇಲೆ ಅವಲಂಬಿತರಾಗಿದ್ದರು. ಪ್ರತಿಯಾಗಿ, ಎಲ್ಲಾ ಗಿಡಗಳು ಮತ್ತು ಮರಗಳು ಭೂಲೋಕದ ಪರದೈಸಿನ ಮೂಲಕವಾಗಿ ಹರಿಯುತ್ತಿದ್ದ ಜೀವದಾಯಕ ನದಿಯ ಮುಖಾಂತರವಾಗಿ ಪೋಷಣೆ ಹೊಂದಿ ಫಲದಾಯಕಗೊಳಿಸಲ್ಪಡುತ್ತಿದ್ದವು. ಜೀವವೃಕ್ಷವು ತೋಟದಲ್ಲಿರುವ ಬೇರೆ ಮರಗಳಂತೆಯೇ ಒಂದು ನಿಜವಾದ ಮರವಾಗಿದ್ದು, ನೀರು ನಾಲ್ಕು ಶಾಖೆಗಳಾಗಿ ಹರಿಯುತ್ತಿದ್ದ ಒಂದು ನಿಜವಾದ ನದಿಯಿಂದ ಬರುವಂಥದ್ದಾಗಿತ್ತಾದರೂ, ಇವೆಲ್ಲವು ದೇವರು - ಸಕಲ ಜೀವದ ನಿಜವಾದ ಮೂಲನು - ತನ್ನ ಸೃಷ್ಟಿಜೀವಿಗಳು ತಮ್ಮ ದೈಹಿಕ ಜೀವಿತವನ್ನು ಪೋಷಿಸಿಕೊಳ್ಳಲು ಒದಗಿಸಿದ್ದ ಆತನ ವರಗಳಾಗಿದ್ದವು.

ಆದಾಮ ಮತ್ತು ಹವ್ವಳರು ಪಾಪ ಮಾಡಿದಾಗ ಮತ್ತು ತೋಟದಿಂದ ಹೊರಕ್ಕೆ ಓಡಿಸಲ್ಪಟ್ಟ ವೇಳೆ, ಮಾನವರು ಜೀವವೃಕ್ಷವು ಸೇರಿದಂತೆ ಭೂಲೋಕದ ಪರದೈಸನ್ನು ಕಳೆದುಕೊಂಡರು. ಏದೆನ್ ತೋಟದಲ್ಲಿ ಅಷ್ಟೇನೂ ಉಳಿದಿರಲಿಲ್ಲ, ಒಂದು ದಿನ ಸ್ತ್ರೀಯ ಸಂತಾನವು ಸರ್ಪದ ತಲೆಯನ್ನು ಜಜ್ಜುವದು ಎಂಬ ಅಸ್ಪಷ್ಟವಾದ ಪ್ರವಾದನೆಯಷ್ಟೇ ಇತ್ತು (3:15). ಕಾಲವು ಗತಿಸಿದಂತೆ, ಈ ವಾಗ್ದಾನವು ಅಬ್ರಹಾಮ ಮತ್ತು ಸಾರಳ ಮೂಲಕವಾಗಿ ಜನಿಸುವ ಆತನ ಸಂತಾನದವರ ಮೇಲೆ ಬಂದು ನಿಂತಿತ್ತು (12:1-3; 17:15-19), ಅವರಿಗೆ ದೇವರು ಕಾನಾನ್ ದೇಶವನ್ನು ಅವರ ಶಾಶ್ವತ ನಿವಾಸವಾಗಿ ಕೊಡುವೆನೆಂದು ವಾಗ್ದಾನ ಮಾಡಿದನು.

*ಅಬ್ರಹಾಮನಿಂದ ದಾವೀದನ ತನಕ - ವಾಗ್ದಾನದ ದೇಶದಲ್ಲಿ.* ಮೂಲ ಏದೆನ್

ತೋಟಕ್ಕೆ ಸಂಬಂಧಿಸಿದ ಪರದೈಸಿನ ಕುರಿತಾದ ಮೊದಲ ಪ್ರಸ್ತಾಪವು ಅಬ್ರಹಾಮ ಮತ್ತು ಲೋಟನ ಕುರಿತಾದ ಐತಿಹಾಸಿಕ ಕಥಾನಿರೂಪಣೆಯಲ್ಲಿ, ಅವರು ಕಾನಾನ್ ದೇಶದೊಳಗೆ ಬಂದ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತದೆ. ಅವರು ಐಶ್ವರ್ಯವಂತರಾಗಿದ್ದರು, ಯಾಕೆಂದರೆ ಅವರಿಗೆ ಹಲವಾರು ಮಂದೆಗಳು ಮತ್ತು ಹಿಂಡುಗಳಿದ್ದವು; ಆದರೆ ಅವರಿಬ್ಬರ ಕುರಿ ಕಾಯುವವರು ತಮ್ಮ ಮಂದೆಗಳಿಗೆ ಸಾಕಷ್ಟು ನೀರು ಮತ್ತು ಹುಲ್ಲುಗಳನ್ನು ಹುಡುಕುವ ವೇಳೆ ಅವರ ನಡುವೆ ವ್ಯಾಜ್ಯವು ಉದ್ಭವವಾಯಿತು. ಈ ಇಬ್ಬರು ವ್ಯಕ್ತಿಗಳು ಉತ್ತಮ ಬಾಂಧವ್ಯಗಳನ್ನು ಕಾಪಾಡಿಕೊಂಡು ಮುಂದುವರೆಯಬೇಕೆಂದರೆ, ವಾಗ್ದಾನ ದೇಶದೊಳಗೆ ಪ್ರತ್ಯೇಕವಾಗಿ ವಾಸಿಸುವದು ಅಗತ್ಯವೆಂಬುದು ಸ್ಪಷ್ಟಗೊಂಡಿತ್ತು. ಅಬ್ರಹಾಮನು ತನ್ನ ಸೋದರ ಸಂಬಂಧಿಯಾದ ಲೋಟನಿಗೆ ಮಹತ್ತರವಾದಂಥ ಕೊಡುಗೆಯನ್ನು ಮುಂದಿಡುವವನಾಗಿ ಆತನು ಮತ್ತು ಆತನ ಪರಿವಾರದವರೆಲ್ಲಾ ವಾಸ ಮಾಡುವ ಭಾಗವನ್ನು ಆಯ್ಕೆ ಮಾಡಿಕೊಳ್ಳುವಂತೆ ಹೇಳಿದನು. ಕಥನವು ಹೇಳುವದೇನೆಂದರೆ, ಬೆಟ್ಟದ ಮಧ್ಯದಲ್ಲಿ ನಿಂತುಕೊಂಡವನಾಗಿ "ಲೋಟನು ಕಣ್ಣೆತ್ತಿ ನೋಡಲಾಗಿ ಯೊರ್ದನ್ ಹೊಳೆಯ ಸುತ್ತಲಿನ ಪ್ರದೇಶವು … ಎಲ್ಲಾ ಕಡೆಯಲ್ಲಿಯೂ ನೀರಾವರಿಯ ಸ್ಥಳವೆಂದು ತಿಳುಕೊಂಡನು … ಆ ಸೀಮೆಯು ಯೆಹೋವನ ವನದಂತೆಯೂ ಐಗುಪ್ತದೇಶದಂತೆಯೂ ನೀರಾವರಿಯಾಗಿತ್ತು. ಆದದರಿಂದ ಲೋಟನು ಯೊರ್ದನ್ ಹೊಳೆಯ ಸುತ್ತಣ ಪ್ರದೇಶವನ್ನು ಆದುಕೊಂಡು …" (13:10, 11).

ವಾಕ್ಯಭಾಗವು ಜೀವವೃಕ್ಷ ಅಥವಾ ಅದರ ಮೂಲಕವಾಗಿ ಹರಿಯುತ್ತಿದ್ದ ನದಿಯ ಬಗ್ಗೆ ನಿರ್ದಿಷ್ಟವಾಗಿ ಪ್ರಸ್ತಾಪಿಸುವದಿಲ್ಲ, ಆದರೆ ಲೋಟನ ದೃಷ್ಟಾಂತವು ಸೂಚಿಸುವದೇನೆಂದರೆ ಯೊರ್ದನ್ ಕಣಿವೆಯು ಮೂಲ ಏದೆನ್ ಸಂಬಂಧಿಸಿದ ಪರದೈಸಿನ "ಹಾಗೆ" ಇತ್ತು ಎಂಬುದೆ. ಪ್ರತಿಯಾಗಿ, ಇದು ಸೂಚಿಸುವದೇನೆಂದರೆ ಅಲ್ಲಿ ಹಣ್ಣುಗಳನ್ನು (ಮತ್ತು ಇತರ ಕಾಯಿಪಲ್ಯಗಳನ್ನು) ಕೊಡುವ ಸಾಕಷ್ಟು ಮರಗಳು ಅಲ್ಲಿ ಬೆಳೆದಿದ್ದವು, ಅವುಗಳು ಯೊರ್ದನ್ ನದಿ ಮತ್ತು ಹತ್ತಿರದ ಒರತೆಗಳಿಂದ ಸಮೃದ್ಧಿಯಾದ ನೀರನ್ನು ಪಡೆದುಕೊಳ್ಳುತ್ತಿದ್ದವು ಎಂಬುದೆ. ಹೇಗೂ, ಅಂತಹ ಒಂದು ಅಂದಾಜು ಮಾಡುವಿಕೆಯು ಲೋಟನಿಗೆ ಮತ್ತು ಆತನ ಕುಟುಂಬಕ್ಕೆ ದುರಂತಕರವಾಗಿ ಮೋಸವೆಂದು ಸಾಭಿತುಗೊಂಡಿತ್ತು; ಆ ಪ್ರಾಂತ್ಯದಲ್ಲಿ ನಡಿಸುತ್ತಿದ್ದ ದುಷ್ಟತನವು ಎಷ್ಟೊಂದು ಹೊಲಸಾಗಿತ್ತೆಂದರೆ ಅದು ಅಂತಿಮವಾಗಿ ಅಲ್ಲಿ ವಾಸಿಸುವವರ ಮೇಲೆ ದೇವರಿಂದ ನ್ಯಾಯತೀರ್ಪು ಇಳಿದು ಬರುವಂತೆ ಮಾಡಿತ್ತು (13:13; 19:1-29).

ಅಬ್ರಹಾಮ ಮತ್ತು ಲೋಟನ ನಂತರದ ಅನೇಕ ಸಂತತಿಯವರ ಬಳಿಕ, ಮೋಶೆಯು ವಾಗ್ದಾನ ದೇಶವನ್ನು "ಹಳ್ಳಗಳಲ್ಲಿ ನೀರು ಯಾವಾಗಲೂ ಹರಿಯುವ" ಒಂದು "ಉತ್ತಮದೇಶ" ಎಂದು ಕರೆದನು, ಆ ಕಣಿವೆಯು ಬಹಳಷ್ಟು ಬಗೆಯ ಹಣ್ಣುಗಳ ಮರಗಳನ್ನೊಳಗೊಂಡಿತ್ತು. ಹಲವಾರು ಇತರ ಬೆಳೆಗಳು ಮತ್ತು ಸೇವಿಸಬಹುದಾದ ಆಹಾರಗಳು ಅಲ್ಲಿ ಸಿಕ್ಕುತ್ತದೆ, ಹೀಗೆ ಜನರು "ಸಮೃದ್ಧಿಯಾಗಿ ಉಂಡು ಯಾವ ಕೊರತೆಯೂ ಇಲ್ಲದೆ ಇರುವದಕ್ಕೆ" ಶಕ್ತರಾಗುವರೆಂದು ಆತನು ತಿಳಿಸಿದನು (ಧರ್ಮೋಪದೇಶಕಾಂಡ 8:7-9; ನೋಡಿರಿ ಅರಣ್ಯಕಾಂಡ 13:25-27). ಮೋಶೆಯು ಕಾನಾನ್ ದೇಶವನ್ನು, ನೀರು ಮತ್ತು ಜೀವವೃಕ್ಷವುಳ್ಳ ಹೆಚ್ಚುಕಡಿಮೆ ಏದೆನ್ ತೋಟವೇ ಎಂಬಂತೆ ಉಲ್ಲೇಖಿಸುತ್ತಿದ್ದಾನೆ.

ಹೇಗೂ, ಅಬ್ರಹಾಮನಿಗೆ ವಾಗ್ದಾನ ಮಾಡಿದ ಸಂತಾನ ಮತ್ತು ಆ ಹಂತದಿಂದ ಮುಂದಿನ ದೇಶದ ಕುರಿತ ಇತಿಹಾಸವು ದುರಂತದಿಂದ ತುಂಬಿದೆ. ಮೂಲಪಿತೃವು ಬದುಕಿದ ನೂರಾರು ವರ್ಷಗಳ ನಂತರದಲ್ಲಿ, ಆತನನ ಸಂತಾನದವರು - ಇಸ್ರಾಯೇಲ್ಯರು - ಅಂತಿಮವಾಗಿ

ಯೆಹೋಶುವನ ನಾಯಕತ್ವದಲ್ಲಿ ವಾಗ್ದಾನ ದೇಶವನ್ನು ಪ್ರವೇಶಿಸಿದರು. ಅವರು ತಮ್ಮ ವೈರಿಗಳ ವಿರುದ್ಧವಾಗಿ ಹಲವಾರು ಯಶಸ್ಸುಗಳನ್ನು ಸಾಧಿಸಿದ್ದರಾದರೂ, ಅವರು ರೂಢಿಯಾಗಿ ವಿಗ್ರಹಾರಾಧನೆ ಮಾಡಿದ್ದರು ಮತ್ತು ಯೆಹೋಶುವನ ಮರಣದ ಬಳಿಕ ಯೆಹೋವನಿಗೆ ಅಪನಂಬಿಗಸ್ತರಾಗಿದ್ದರು; ಆದ್ದರಿಂದ ಅವರ ಸಮಾಧಾನ ಮತ್ತು ಸಮೃದ್ಧಿಯ ಕಾಲಗಳು ವಿರಳವಾಗಿದ್ದವು (ನ್ಯಾಯಸ್ಥಾಪಕ 2:1–23). ನ್ಯಾಯಸ್ಥಾಪಕರ ಕಾಲಾವಧಿಯಲ್ಲಿ, ಆಕ್ರಮಣ ಮಾಡುವ ಸೈನ್ಯಗಳಿಂದ ದೇಶವು ಅನೇಕ ಸಾರಿ ದಬ್ಬಾಳಿಕೆಗೊಳಗಾಗಿತ್ತು; ಮತ್ತು ಕೆಲವು ಸಾರಿ ಬುಡಕಟ್ಟಿನ ಅಸೂಯೆಗಳು ನಾಗರೀಕ ಯುದ್ಧಗಳಿಗೆ ದಾರಿ ಮಾಡಿಕೊಟ್ಟದ್ದರಿಂದ ಇಸ್ರಾಯೇಲ್ಯರು ಒಬ್ಬರನ್ನೊಬ್ಬರು ಹತ್ಯೆ ಮಾಡುತ್ತಿದ್ದರು.

ಸಾಮಾನ್ಯವಾಗಿದ್ದ ಕ್ಷೋಭೆ ಮತ್ತು ಯುದ್ಧಗಳು ಸೌಲನ ಅರಸುತನ ಹಾಗೂ ದಾವೀದನ ಬಹಳಷ್ಟು ಆಳ್ವಿಕೆಯ ಮೂಲಕವಾಗಿ ದೇಶದುದ್ದಕ್ಕೂ ವಿನಾಶತೆಯನ್ನು ಮುಂದುವರೆಯುವಂತೆ ಮಾಡಿದ್ದವು. ಬಳಿಕ, ದಾವೀದನ ಇಳಿಗಾಲದಲ್ಲಿ, ಆತನ ಮಗನಾದ ಅಬ್ಷಾಲೋಮನು ದುರಂತಕರವಾದ ನಾಗರೀಕ ಯುದ್ಧಕ್ಕೆ ಪ್ರಚೋದನೆಯನ್ನು ಮಾಡುವ ಮೂಲಕವಾಗಿ ತನ್ನ ತಂದೆಯಿಂದ ಸಿಂಹಾಸನವನ್ನು ಕಸಿದುಕೊಳ್ಳಲು ವ್ಯರ್ಥ ಪ್ರಯತ್ನ ಮಾಡಿದನು (2 ಸಮುವೇಲ 15:13; ನೋಡಿರಿ 18:6, 7). ದಾವೀದನ ಬಳಿಯಲ್ಲಿ ಉಳಿದಿದ್ದ ಸೈನ್ಯವು - ಅರನೂರು ನಿಷ್ಠಾವಂತ ಫಿಲಿಷ್ಟಿಯ ಅಂಗರಕ್ಷರೊಂದಿಗೆ – ಈ ಬಂಡಾಯವನ್ನು ತಡೆದು ಆತನ ರಾಜ್ಯವನ್ನು ರಕ್ಷಿಸುವದಕ್ಕೆ ಶಕ್ತವಾಗಿತ್ತು, ಜಯವು ಒಂದು ಭಯಂಕರವಾದ ಬೆಲೆಯನ್ನು ತೆತ್ತುವ ಮೂಲಕ ದೊರಕಿತ್ತು: ಆತನ ಮಗನಾದ ಅಬ್ಷಾಲೋಮನ ಮರಣ ಮತ್ತು ಇಸ್ರಾಯೇಲ್ಯರಲ್ಲಿ ಬಹಳಷ್ಟು ಪ್ರಾಣ ಹಾನಿಗಳಾಗಿದ್ದವು.

*ಸೊಲೊಮೋನ ಮತ್ತು "ಜೀವವೃಕ್ಷ."* ಸೊಲೊಮೋನನು ಸಿಂಹಾಸನವನ್ನು ಏರುವ ಹೊತ್ತಿಗೆ, ಇಸ್ರಾಯೇಲ್ಯರು ಯುದ್ಧಗಳಿಂದ ಬಳಲಿ ಹೋಗಿದ್ದರು ಮತ್ತು ದೇವರು ಯುದ್ಧಗಳನ್ನು ಮಾಡುವವನಲ್ಲದ ವ್ಯಕ್ತಿಯಾಗಿರುವಂಥ ಒಬ್ಬ ಅರಸನ ಮೂಲಕವಾಗಿ ತಮಗೆ ಸಮಾಧಾನ ಹಾಗೂ ಸಮೃದ್ಧಿ ಅನುಗ್ರಹಿಸುವಂತೆ ಹಂಬಲಿಸಿದರು.[61] ಆತನು ಉತ್ತಮ ವಾಗಿಯೇ ಆರಂಭ ಮಾಡಿದ್ದನು, ಐಶ್ವರ್ಯಗಳನ್ನಾಗಲಿ ಅಥವಾ ದೀರ್ಘಾಯುಷ್ಯವನ್ನಾಗಲಿ ಅಲ್ಲ, ಆದರೆ "ನ್ಯಾಯ ನಿರ್ಣಯಿಸುವದ ಕ್ಕೋಸ್ಕರ ವಿವೇಕವನ್ನು" ಕೊಡುವಂತೆ ದೇವರನ್ನು ಪ್ರಾರ್ಥಿಸಿದನು. ಈ ಆಯ್ಕೆಯನ್ನು ಕಂಡು ಸಂತೋಷಗೊಂಡವನಾಗಿ, ದೇವರು ಸೊಲೊಮೋನನನ್ನು ಜ್ಞಾನ ಮತ್ತು ವಿವೇಚನೆ ಮಾತ್ರವಲ್ಲದೆ ಐಶ್ವರ್ಯಗಳನ್ನು ಹಾಗೂ ದೀರ್ಘಾಯುಷ್ಯವನ್ನು ನೀಡಿ ಆಶೀರ್ವದಿಸಿದನು (1 ಅರಸು 3:11–14).

ಸ್ಪಷ್ಟವಾಗಿರುವಂತೆ, ಸೊಲೊಮೋನನ ಜೀವಿತದ ಆರಂಭಿಕ ಕಾಲಾವಧಿಯಲ್ಲಿ, ಆತನು ಜ್ಞಾನೋಕ್ತಿಗಳ ಪುಸ್ತಕದಲ್ಲಿ ನುಡಿದದ್ದು ಎಂದು ಹೇಳಲಾಗುವ ಅನೇಕ ಜ್ಞಾನೋಕ್ತಿಗಳನ್ನು ಬರೆದನು (ನೋಡಿರಿ ಜ್ಞಾನೋಕ್ತಿ 1:1; 10:1; 25:1). ಹಲವಾರು ವಾಕ್ಯಭಾಗಗಳಲ್ಲಿ, ಆತನು ಏದೆನ್ ತೋಟದಲ್ಲಿನ ಜೀವವೃಕ್ಷ ಹಾಗೂ ಜೀವಜಲದ ಚಿತ್ರಣವನ್ನಾಧರಿಸಿದ ಭಾಷೆಯನ್ನು ಬಳಸಿಕೊಂಡು ಅದು ಜನರು ಹಾತೋರೆಯುತ್ತಿದ್ದ ಸಮಾಧಾನ, ಸಂತೋಷ, ಭದ್ರತೆ, ಮತ್ತು ದೀರ್ಘಾಯುಷ್ಯದ ವರ್ಣನೆಯಾಗಿರುತ್ತದೆಂದು ತಿಳಿಸುತ್ತಾನೆ.

ಇದಕ್ಕೊಂದು ಉದಾಹರಣೆಯು ಯಾವದೆಂದರೆ "ಜ್ಞಾನವನ್ನು ಪಡೆಯುವ" ಮತ್ತು "ವಿವೇಕವನ್ನು ಸಂಪಾದಿಸುವ" ಮನುಷ್ಯನೊಬ್ಬನ ಮೇಲಿರುವ ಆಶೀರ್ವಾದ (ಜ್ಞಾನೋಕ್ತಿ 3:13). ಜ್ಞಾನವನ್ನು ಒಬ್ಬ ಸ್ತ್ರೀಯಂತೆ ಮೂರ್ತೀಕರಣಗೊಳಿಸುವ ಮೂಲಕ, ಸೊಲೊಮೋನನು ಹೀಗೆ ಹೇಳಿದನು, "ಜ್ಞಾನವು ತನ್ನನ್ನು ಹಿಡಿದುಕೊಳ್ಳುವವರಿಗೆ *ಜೀವದ ಮರವಾಗಿದೆ*; ಅದನ್ನು

ಅವಲಂಬಿಸುವ ಪ್ರತಿಯೊಬ್ಬನೂ ಧನ್ಯನು" (ಜ್ಞಾನೋಕ್ತಿ 3:18; ಒತ್ತಿ ಹೇಳಿದ್ದು ನನ್ನದು). ಸ್ಪಷ್ಟವಾಗಿರುವಂತೆ, ಜ್ಞಾನವನ್ನು ಪಡೆಯುವವರೆಲ್ಲರೂ ಸೊಲೊಮೋನನ ರೀತಿಯಲ್ಲಿ, ಒಂದು ದೀರ್ಘಾಯುಷ್ಯವನ್ನು ಅಥವಾ ಐಶ್ವರ್ಯಗಳನ್ನು ಅಥವಾ ಸನ್ಮಾನವನ್ನು ಪಡೆದುಕೊಳ್ಳುವದಿಲ್ಲ. ಈ ವಿಧವಾದ ಹೇಳಿಕೆಗಳು ಸಂಪೂರ್ಣವಾದ ವಾಗ್ದಾನಗಳಲ್ಲಿ ಯಾಕೆಂದರೆ ಕೆಲವು ಸಾರಿ ಒಳ್ಳೆಯ ಜನರಿಗೆ ಕೆಟ್ಟ ಕಾರ್ಯಗಳು ಸಂಭವಿಸುತ್ತವೆ (ನೋಡಿರಿ ಯೋಬ 1:1-2:10). ಅದಕ್ಕೆ ತದ್ವಿರುದ್ಧವಾಗಿ, ಇವುಗಳು ದೇವರಲ್ಲಿ ಭರವಸವಿಟ್ಟು ಆತನ ಚಿತ್ತವನ್ನು ಮಾಡುವದಕ್ಕೆ ತವಕಿಸುವವರು ಸಾಮಾನ್ಯವಾಗಿ ಅನುಭವಿಸುವಂಥ ಆಶೀರ್ವಾದಗಳಾಗಿವೆ.

ಇತರ ವಾಕ್ಯಭಾಗಗಳು ಈ ಚಿತ್ರಣವನ್ನು ಬಳಸುತ್ತವೆ. ಕೋರಿದ್ದಕ್ಕೆ ತಡವಾದರೆ ಮನಸ್ಸು ಬಳಲುವದು; ಕೈಗೂಡಿದ ಇಷ್ಟಾರ್ಥವು *ಜೀವವೃಕ್ಷವು* ... ಜ್ಞಾನಿಯ ಬೋಧೆ ಜೀವದ ಬುಗ್ಗೆ; ಅದನ್ನಾಲಿಸುವವನು ಮೃತ್ಯುಪಾಶದಿಂದ ತಪ್ಪಿಸಿಕೊಳ್ಳುವನು" (ಜ್ಞಾನೋಕ್ತಿ 13:12, 14; ಒತ್ತಿ ಹೇಳಿದ್ದು ನನ್ನದು). ಇಏ ರೀತಿಯ ಮಾತ ಜ್ಞಾನೋಕ್ತಿ 15:4ರಲ್ಲಿ ಕಂಡು ಬರುತ್ತದೆ: "ಸಂತೈಸುವ ನಾಲಿಗೆ *ಜೀವವೃಕ್ಷವು*; ಬಲಾತ್ಕರಿಸುವ ನಾಲಿಗೆ ಮನಮುರಿಯುವದು" (ಒತ್ತಿ ಹೇಳಿದ್ದು ನನ್ನದು). "ಜ್ಞಾನಿಯ" ಉಪದೇಶವನ್ನು ಒಂದು ಫಲಭರಿತ "ಜೀವವೃಕ್ಷ" ಮತ್ತು ಉಕ್ಕುತ್ತಾ, ಪಾಪ ಹಾಗೂ ದುಷ್ಟತ್ವಗಳಿಂದ ಕೂಡಿದ ಒಂದು ಒಣಗಿರುವ ಹಾಗೂ ಬಾಯಾರಿರುವಂಥ ದೇಶದಲ್ಲಿರುವ ಆತ್ಮಗಳಿಗೆ ಜೀವ, ಆರೋಗ್ಯ, ಮತ್ತು ಚೈತನ್ಯಗಳನ್ನುಂಟು ಮಾಡುವಂತಹ ಒಂದು ಚೈತನ್ಯಕಾರಿ "ಜೀವಬುಗ್ಗೆ"ಗೆ ಹೋಲಿಕೆ ಮಾಡಲಾಗಿದೆ. ಜ್ಞಾನಿಯ ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳು ನ್ಯಾಯಯುತವಾದ ಬಯಕೆಗಳಾಗಿವೆ. ಅವುಗಳು ಅವರ ಆತ್ಮಗಳನ್ನು ತಾಜಾಗೊಳಿಸಿ ನಿಜವಾಗಿಯೂ ಕರ್ತನನ್ನು ಘನಪಡಿಸುವಂಥ ನೀತಿಯ ಜೀವಿತಗಳನ್ನು ನಡಿಸುವ ಹಾಗೆ ಪುನರ್ಬಲವನ್ನು ಕೊಡುವಂತಹ "ಜೀವವೃಕ್ಷ" ಅಥವಾ "ಜೀವಬುಗ್ಗೆ" ರೀತಿಯಲ್ಲಿರುತ್ತವೆ (ನೋಡಿರಿ ಯೆಶಾಯ 40:31).

ಸೊಲೊಮೋನನ ಜೀವಿತದ ದೊಡ್ಡ ದುರಂತವು ಏನೆಂದರೆ ಲೋಕದಲ್ಲಿಯೇ ಅತ್ಯಂಥ ಜ್ಞಾನಿಯಾಗಿದ್ದವನು ಅತ್ಯಂಥ ದೊಡ್ಡ ಮೂರ್ಖನಾದನು ಎಂಬುದೆ. ಆತನು ದೇವರಿಂದ-ಕೊಡಲ್ಪಟ್ಟ ಐಶ್ವರ್ಯಗಳನ್ನು ಸ್ವ-ಏಳಿಗೆಗೋಸ್ಕರ ಕಟ್ಟಡಗಳನ್ನು ನಿರ್ಮಿಸುವ ಯೋಜನೆಗಳಿಗೋಸ್ಕರ ವ್ಯರ್ಥ ಮಾಡಿಕೊಂಡನು: ಅರಮನೆಗಳು, ಅನ್ಯಧರ್ಮಿಯ ದೇವಾಲಯಗಳು, ಮತ್ತು ತನಗೋಸ್ಕರ ಹಾಗೂ ತನ್ನ ನೂರಾರು ಹೆಂಡತಿಯರು ಹಾಗೂ ಉಪಪತ್ನಿಯರಿಗೋಸ್ಕರ ಗುಡಿಗಳ ನಿರ್ಮಾಣ. ನೀತಿಯುಳ್ಳ ಹಾಗೂ ಭಕ್ತಿಯ ಜೀವಿತವನ್ನು ನಡಿಸುವದರ ಬದಲಾಗಿ, ಆತನು ತನ್ನ ಜ್ಞಾನವನ್ನು ದುರ್ಬಳಕೆ ಮಾಡಿಕೊಂಡನು ಮತ್ತು ಸುಳ್ಳು ದೇವರುಗಳನ್ನು ಪೂಜಿಸಿದನು (1 ಅರಸು 11:1-8). ಆತನು "ಮರುಳುತನವನ್ನೂ ಬುದ್ಧಿಹೀನತೆಯನ್ನೂ ಗ್ರಹಿಸಲು" ಮನಸ್ಸಿಟ್ಟನು (ಪ್ರಸಂಗಿ 1:17). ಆತನು ಹೀಗೆ ಒಪ್ಪಿಕೊಂಡನು, "ನನ್ನ ಕಣ್ಣು ಬಯಸಿದ್ದೆಲ್ಲವನ್ನೂ ಅದಕ್ಕೆ ನಾನು ಒಪ್ಪಿಸದೆ ಬಿಡಲಿಲ್ಲ; ಯಾವ ಸಂತೋಷವನ್ನನುಭವಿಸುವದಕ್ಕೂ ನನ್ನ ಹೃದಯವನ್ನು ತಡೆಯಲಿಲ್ಲ" (ಜ್ಞಾನೋಕ್ತಿ 2:10). ಈ ಜೀವನ ಶೈಲಿಯು ಆತನಿಗೆ ಕೇವಲ ವೇದನೆ, ವ್ಯಥೆ, ಮತ್ತು ತಳಮಳಗಳನ್ನಷ್ಟೇ ಉಂಟು ಮಾಡಿತ್ತು, ಆತನು ಎದುರುನೋಡಿದ್ದ ಹಿತಾಸಕ್ತಿ ಹಾಗೂ ಸಾರ್ಥಕತೆಗಳಿಗೆ ಅದು ತದ್ವಿರುದ್ಧವಾಗಿತ್ತು. ಆತನು ಐಶ್ವರ್ಯ, ಅಧಿಕಾರ, ಮತ್ತು ಸುಖಭೋಗಗಳ ಹಿಂದೆ ಹೋಗಿದ್ದರಿಂದಾದ ಫಲಿತವನ್ನು ಸಾರಾಂಶಗೊಳಿಸುತ್ತಾ ಹೀಗೆ ಹೇಳಿದನು, "ಆಹಾ, ಗಾಳಿಯನ್ನು ಹಿಂದಟ್ಟಿ ಹಾಗೆ ಸಮಸ್ತವೂ ವ್ಯರ್ಥವಾಯಿತು, ಲೋಕದಲ್ಲಿ ಯಾವ ಲಾಭವೂ ಕಾಣಲಿಲ್ಲ" (ಪ್ರಸಂಗ 2:11).[62]

*ಹಿಜ್ಕೀಯನು - ಪ್ರಶಾಂತವಾದ ನಿಶ್ಚಯತೆಯೊಂದಿಗೆ ವೈರಿಯನ್ನು ಎದುರಿಸಿದ್ದು.* ಅನೇಕ ಪೀಳಿಗೆಗಳು ಬಂದು ಹೋದ ನಂತರದಲ್ಲಿ, ಒಂದು ಪರದೇಶದ ಸೈನ್ಯವು ಯೆಹೂದದ ಮೇಲೆ ಆಕ್ರಮಣ ಮಾಡಿತ್ತು, ಅರಸನಾದ ಹಿಜ್ಕೀಯನ (ಕ್ರಿ.ಪೂ. 701) ಕಾಲದಲ್ಲಿ ಯೆರೂಸಲೇಮನ್ನು ನಾಶನ ಮಾಡುವ ಬೆದರಿಕೆಯನ್ನೊಡ್ಡಲಾಗಿತ್ತು. ಅಶ್ಶೂರದ ಅರಸನಾದ ಸನ್ಹೇರೀನಬನು ತನ್ನ ಬೃಹತ್ ಸೇನೆಯನ್ನು ದೇಶದೊಳಗೆ ಕರೆದು ತಂದಿದ್ದನು, ಯೆಹೂದದ ನಾಲ್ವತ್ತಾರು ಪಟ್ಟಣಗಳನ್ನು ನಾಶಗೊಳಿಸಿ ಯೆಹೂದಿ ಅರಸನನ್ನು ರಾಜಧಾನಿಯಲ್ಲಿ "ಪಿಂಜರದಲ್ಲಿನ ಒಂದು ಪಕ್ಷಿಯಂತೆ"[63] ಕೂಡಿ ಹಾಕಿದ್ದನು. ಸನ್ಹೇರೀಬನು ಯೆರೂಸಲೇಮಿನಲ್ಲಿದ್ದ ಹಿಜ್ಕೀಯನಿಗೆ ಒಂದು ಪತ್ರವನ್ನು ಕಳುಹಿಸಿದನು, ಅದರಲ್ಲಿ ದೇವರನ್ನು ಅಪಹಾಸ್ಯ ಮಾಡಿದ್ದನು ಮತ್ತು ತಕ್ಷಣವೇ ರಾಜಧಾನಿಯನ್ನು ತನಗೆ ಒಪ್ಪಿಸಬೇಕೆಂದು ಬೇಡಿಕೆಯಿಟ್ಟಿದ್ದನು.

ಯೆಹೂದದ ಅರಸನು ಹತಾಶೆಗೊಂಡವನಾಗಿ, ಯೆಹೋವನ ಮುಂಭಾಗದಲ್ಲಿ ಪತ್ರವನ್ನು ತೆರೆದಿಟ್ಟು ರಾಜಧಾನಿಯನ್ನು ಹಾಗೂ ದಾವೀದನ ಸಿಂಹಾಸನವನ್ನು ಬಿಡುಗಡೆಗೊಳಿಸಬೇಕೆಂದು ಪ್ರಾರ್ಥನೆ ಮಾಡಿದನು. ದೇವರ ಪ್ರತ್ಯುತ್ತರವು ಬಹಳ ವೇಗದಲ್ಲಿ ಬಂದಿತ್ತು, "ನನಗೋಸ್ಕರವಾಗಿಯೂ ನನ್ನ ಸೇವಕನಾದ ದಾವೀದನಿಗೋಸ್ಕರವಾಗಿಯೂ ಇದನ್ನು ಉಳಿಸಿ ಕಾಪಾಡುವೆನು." ಆ ರಾತ್ರಿಯಲ್ಲಿ, "ಯೆಹೋವನ ದೂತನು ಹೊರಟುಬಂದು ಅಶ್ಶೂರ್ಯರ ಪಾಳೆಯದಲ್ಲಿ ಲಕ್ಷದ ಎಂಭತ್ತೈದು ಸಾವಿರ ಮಂದಿ ಸೈನಿಕರನ್ನು ಸಂಹರಿಸಿದನು. ಬೆಳಿಗ್ಗೆ ಎದ್ದು ನೋಡುವಲ್ಲಿ ಅವರೆಲ್ಲಾ ಹೆಣಗಳಾಗಿದ್ದರು. ಆಗ ಅಶ್ಶೂರ್ಯರ ಅರಸನಾದ ಸನ್ಹೇರೀಬನು ಹಿಂದಿರುಗಿ ನಿನೆವೆ ಪಟ್ಟಣಕ್ಕೆ ಹೋಗಿ ಅಲ್ಲಿ ವಾಸಿಸಿದನು" (ಯೆಶಾಯ 37:35-37). ಆತನು ಇನ್ನೂ ನಾಲ್ವತ್ತು ವರ್ಷಗಳ ಕಾಲ ಜೀವಿಸಿದ್ದನಾದರೂ, ನಮಗೆ ತಿಳಿದಿರುವ ಪ್ರಕಾರ, ಆತನು ಪುನಃ ಇನ್ನೆಂದಿಗೂ ತನ್ನ ಸೈನ್ಯವನ್ನು ಯೆಹೂದಕ್ಕೆ ವಿರುದ್ಧವಾಗಿ ಕರೆದುಕೊಂಡ ಬರಲಿಲ್ಲ.

ಇದು ಕೀರ್ತನೆ 46ಕ್ಕೆ ಐತಿಹಾಸಿಕ ಹಿನ್ನಲೆಯಾಗಿರಬಹುದಾಗಿದೆ. ಹಾಗಿರುವದಾದಲ್ಲಿ, ಲೇಖಕನು ಏಕೆ ದೇವರು ತನ್ನ ಜನರಿಗೆ ನಿಜವಾದ "ಆಶ್ರಯ" ಮತ್ತು "ದುರ್ಗ [ಕೋಟೆ]" ಆಗಿದ್ದಾನೆಂಬ ಸಾಂಕೇತಿಕ ಭಾಷೆಯನ್ನು ಬಳಸಿದನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು (ಕೀರ್ತನೆ 46:1, 7, 11). "ಲೋಕದ ಎಲ್ಲಾ ಭಾಗದಲ್ಲೂ ಯುದ್ಧವನ್ನು ನಿಲ್ಲಿಸಿಬಿಟ್ಟಿ"ದ್ದವನು ಆತನೇ, ಬಿಲ್ಲುಗಳನ್ನೂ ಭಲ್ಲೆಯಗಳನ್ನೂ ಮುರಿದುಹಾಕಿದ್ದಾನೆ; ರಥಗಳನ್ನು ದಹಿಸಿಬಿಟ್ಟಿದ್ದಾನೆ (ಕೀರ್ತನೆ 46:9). ಕೀರ್ತನೆಯ ಮಧ್ಯಭಾಗದಲ್ಲಿ, ಲೇಖಕನು, ಎಲ್ಲವೂ ನಿರೀಕ್ಷೆರಹಿತವೆಂಬಂತೆ ಕಾಣಿಸುತ್ತಿರುವಾಗಲೇ ಏಕಾಏಕಿ ಘಟನೆಗಳು ಹೇಗೆ ಬದಲಾಗಿ ಬಿಟ್ಟಿದ್ದವು ಎಂಬುದನ್ನು ವಿವರಿಸುವದಕ್ಕೆ ತೋಟದ ಚಿತ್ರಣವನ್ನು ಬಳಸುತ್ತಾನೆ. ಆತನು ಹೀಗೆ ಹೇಳಿದನು, "*ಒಂದು ನದಿ ಅದೆ; ಅದರ ಕಾಲುವೆಗಳು* ಪರಾತ್ಪರನ ಪರಿಶುದ್ಧ ನಿವಾಸಸ್ಥಾನವಾಗಿರುವ *ದೇವನಗರವನ್ನು ಸಂತೋಷಪಡಿಸುತ್ತವೆ.* ದೇವರು ಇದರಲ್ಲಿದ್ದಾನೆ; ಇದಕ್ಕೆ ಚಲನವೇ ಇಲ್ಲ" (ಕೀರ್ತನೆ 46:4, 5; ಒತ್ತಿ ಹೇಳಿದ್ದು ನನ್ನದು).

ಯೆರೂಸಲೇಮಿನಲ್ಲಿ ಯಾವದೇ ಅಕ್ಷರಶಃ ನದಿಯು ಹರಿಯುತ್ತಿರಲಿಲ್ಲ, ಯಾಕೆಂದರೆ ಈ ಪಟ್ಟಣವು ಇಸ್ರಾಯೇಲ್ ದೇಶದ ಕೇಂದ್ರಿಯ ಪರ್ವತ ದೇಶದಲ್ಲಿ ಬೆಟ್ಟಗಳ ಮೇಲ್ಗಡೆಯಲ್ಲಿ ನಿರ್ಮಿಸಲ್ಪಟ್ಟಿತ್ತು. ವಾಸ್ತವಿಕದಲ್ಲಿ, ಹಳೆಯ ಒಡಂಬಡಿಕೆಯ ಕಾಲಗಳಲ್ಲಿ, ಪಟ್ಟಣಕ್ಕೆ ಒಂದೇ ಒಂದು ತಾಜಾ ನೀರಿನ ಮೂಲವಿತ್ತು: ಗೀಹೋನಿನ ಒರತೆ, ಅದು ಪಟ್ಟಣದ ಹೊರಗೆಯಲ್ಲಿರುವ ಕಿದ್ರೋನ್ ಕಣಿವೆಯಲ್ಲಿ ಓಫೇಲ್ ಬೆಟ್ಟದ ತಳದಲ್ಲಿ ಇತ್ತು. ಹಿಜ್ಕೀಯನು ಯೆಹೂದದ ಮೇಲೆ ಅಶ್ಶೂರ್ಯವು ಮಾಡಬಹುದಾದ ದಾಳಿಯ ಬಗ್ಗೆ ಮೊದಲೇ ಎದುರುನೋಡಿದವನಾಗಿ,

ಪಟ್ಟಣದ ಹೊರಗೆ ಸ್ವಲ್ಪ ದೂರದಲ್ಲಿದ್ದ ಸಿಲೋಮ್ ಕೊಳದೊಳಗೆ ಹರಿಯುವಂತೆ ಓಫೇಲ್ ಬೆಟ್ಟದ ಕೆಳಗೆ ತನ್ನ ಶಿಲ್ಪತಜ್ಞರ ಮೂಲಕವಾಗಿ ಸುರಂಗ ಕಾಲುವೆಯನ್ನು ಅಗೆಯುವಂತೆ ಮಾಡಿಸಿದ್ದನು (2 ಅರಸು 20:20; 2 ಪೂರ್ವಕಾಲವೃತ್ತಾಂತ 32:30).

ಯೆರೂಸಲೇಮಿನೊಳಗೆ ತನ್ನ ಜೀವದಾಯಕ ನೀರನ್ನು ತಂದಂಥ ಈ ಒರತೆಯು, ಕೀರ್ತನೆಗಾರನು ಸಮಸ್ತವನ್ನು ಪುನಃ ಫಲ ಕೊಡುವಂತೆ ಮಾಡಿದ ಒಂದು "ನದಿ"ಯನ್ನು ದೇವರು ಒದಗಿಸಿದ್ದನೆಂಬುದಾಗಿ ಹೇಳುವ ವೇಳೆ ಆತನಿಗೆ ಪ್ರೇರಣೆಯಾಗಿರಬಹುದಾಗಿದೆ. ಎಲ್ಲಾ ಮಾನವ ನಿರೀಕ್ಷೆಯು ಹೊರಟು ಹೋಗಿದ್ದ ವೇಳೆ, ಸನ್ಹೇರೀಬನ ಸೈನ್ಯವನ್ನು ನಾಶಗೊಳಿಸಿದ್ದ ಆತನೊಬ್ಬನೇ ಅಶ್ಶೂರ್ಯದ ಮುತ್ತಿಗೆಯಲ್ಲಿ ಸಿಕ್ಕಿಕೊಂಡು ಬಾಧೆಯನ್ನು ಅನುಭವಿಸಿದ ಯೆರೂಸಲೇಮಿನವರಿಗೆ ರಕ್ಷಣೆ ಮತ್ತು ನಿರೀಕ್ಷೆಯ ಸ್ವಸ್ಥತೆ ಮತ್ತು ಜೀವದಾಯಕ ನೀರನ್ನು ಬರಮಾಡಿದವನು.[64]

*ಯೆರೆಮೀಯ - ದೇವರಿಂದ "ಜೀವಜಲ."* ಸುಮಾರು ನೂರು ವರ್ಷಗಳ ಬಳಿಕ, ಪ್ರವಾದಿಗಳು ಜನರು ಮಾಡುತ್ತಿ ದುಷ್ಟತ್ವ ಮತ್ತು ವಿಗ್ರಹಾರಾಧನೆಯ ವಿರುದ್ಧವಾಗಿ ಜೀವಜಲದ ಸಾಂಕೇತಿಕತೆಯನ್ನು ಬಳಸಿ ಧ್ವನಿಯೆತ್ತಿದರು. ಉದಾಹರಣೆಗೆ, ಯೆರೆಮೀಯನು ಈ ಮಾತುಗಳಲ್ಲಿ ಯೆಹೋವನಿಗೋಸ್ಕರ ಮಾತಾಡುವವನಾಗಿ ದೇಶವನ್ನು ಅಪರಾಧಿಯೆಂದು ಘೋಷಿಸಿದನು: "ನನ್ನ ಜನರು ಎರಡು ಅಪರಾಧಗಳನ್ನು ಮಾಡಿದ್ದಾರೆ; *ಜೀವಜಲದ ಬುಗ್ಗೆ*ಯಾದ ನನ್ನನ್ನು ಬಿಟ್ಟಿದ್ದಾರೆ, ತಮಗೋಸ್ಕರ ತೊಟ್ಟಿಗಳನ್ನು, ನೀರು ನಿಲ್ಲದ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ" (ಯೆರೆಮೀಯ 2:13; ಒತ್ತಿ ಹೇಳಿದ್ದು ನನ್ನದು). ಸಾದೃಶ್ಯವು ಕಟುವಾಗಿರುತ್ತದೆ: ಬುದ್ಧಿಯಿರುವ ಯಾವ ವ್ಯಕ್ತಿಯು ಸಹ ಅಸ್ಥಿರಾದ ಭೌಗೋಳಿಕ ಪ್ರಾಂತ್ಯವೊಂದರಲ್ಲಿ ಸಮಯವನ್ನು ತೆಗೆದುಕೊಂಡು ತನಗೋಸ್ಕರ ಒಂದು ತೊಟ್ಟಿಯನ್ನು ನಿರ್ಮಿಸಿಕೊಳ್ಳಲು ಪ್ರಯಾಸ ಪಡುವದಿಲ್ಲ, ಯಾಕೆಂದರೆ ತೊಟ್ಟಿಯು ಶೀಘ್ರವೇ ಬಿರುಕು ಬಿಡುವದು ಮತ್ತು ನೀರನ್ನು ಸಂಗ್ರಹಿಸಿಡಲು ನಿಷ್ಪ್ರಯೋಜಕವಾಗುವದು. ಆತನು ಆ ಪ್ರಾಂತ್ಯದಲ್ಲಿನ ಸಕಲ ನಿವಾಸಿಗಳಿಗಾಗಿ ನೀರನ್ನು ಉಕ್ಕಿಸುತ್ತಿದ್ದ ಹತ್ತಿರದಲ್ಲಿನ ಬುಗ್ಗೆಯ ಚಿಲುಮೆಯನ್ನು ಬಳಕೆ ಮಾಡಿಕೊಂಡರೆ ಸಾಕಾಗಿರುವ ವೇಳೆಯಲ್ಲಿ ಇದು ವಿಶೇಷವಾಗಿ ಸತ್ಯವಾಗಿರುತ್ತದೆ. ಯೆರೆಮೀಯನು ಸಕಲ ಶಾರೀರಿಕ ಮತ್ತು ಆತ್ಮೀಕ ಜೀವಕ್ಕೆ ಬುಗ್ಗೆ ಅಥವಾ ಮೂಲನೆಂಬುದಾಗಿ ದೇವರನ್ನೇ ದೃಷ್ಟಿಸುವವನಾಗಿದ್ದನು. ಸುಳ್ಳು ದೇವರುಗಳನ್ನು ಆರಾಧಿಸುವದಕ್ಕಾಗಿ ಸತ್ಯ ದೇವರಿಂದ ವಿಮುಖರಾಗುವದೆಂದರೆ ಅದರಲ್ಲಿ ಯಾವ ಅರ್ಥವೇ ಕಾಣಿಸುವದಿಲ್ಲ, ಯಾಕೆಂದರೆ ಅದು ಜೀವದ ಬದಲಾಗಿ ಮರಣವನ್ನು ಆಯ್ಕೆ ಮಾಡಿಕೊಳ್ಳುವಂತಿರುತ್ತದೆ.

*ಯೆಹೆಜ್ಕೇಲ - ಪುನರುಜ್ಜೀವನದ ನಿರೀಕ್ಷೆ.* ಏದೆನ್ ತೋಟದಿಂದ ತನ್ನ ಸಾಂಕೇತಿಕತೆಯನ್ನು ತೆಗೆದುಕೊಳ್ಳುವ ಹಳೆಯ ಒಡಂಬಡಿಕೆಯ ಒಂದು ಅಂತಿಮ ವಾಕ್ಯಭಾಗವೆಂದರೆ ಅದು ಯೆಹೆಜ್ಕೇಲ 47:1-12ರಲ್ಲಿರುತ್ತದೆ. ಪ್ರವಾದಿಯು ಯೆಹೂದಿ ಸೆರೆಯಾಳುಗಳ ಸಂಗಡ ಬಾಬೆಲಿನಲ್ಲಿದ್ದನು, ಅವರಲ್ಲಿ ಅನೇಕರು ಪುನಃ ವಾಗ್ದಾನ ದೇಶಕ್ಕೆ ಹಿಂದಿರುಗುತ್ತೇವೆಂಬ ನಿರೀಕ್ಷೆಯನ್ನೇ ಕಳೆದುಕೊಂಡಿದ್ದರು. ಅವರು "ಒಣಗಿದ ಮೂಳೆಗಳ" ಕಣಿವೆಯ ಹಾಗಿದ್ದರು: ನಿರ್ಜೀವ ಹಾಗೂ ಬಿಸಿಲಿನಿಂದ ಬಿಳುಚಿಕೊಂಡವುಗಳಾಗಿದ್ದವು (ಯೆಹೆಜ್ಕೇಲ 37:1-9). ಯೆಹೆಜ್ಕೇಲನಿಗೆ ಈ ಒಣಗಿರುವ ಮೂಳೆಗಳಿಗೆ (ಸೆರೆಯಲ್ಲಿರುವ ಇಸ್ರಾಯೇಲ್ಯರಿಗೆ) ಬೋಧಿಸಬೇಕೆಂದು ಹೇಳಲಾಯಿತು; ಮತ್ತು ಆತನ ಸಂದೇಶ ಹಾಗೂ ದೇವರಾತ್ಮನ ಮೂಲಕವಾಗಿ, ಜನರು ಒಂದು ಆತ್ಮೀಕ ಪುನರುತ್ಥಾನವನ್ನು ಅನುಭವಿಸುವರು.

ಅವರಿಗೆ ಒಂದು ಹೊಸ ನಿರೀಕ್ಷೆ ಮತ್ತು ಉದ್ದೇಶ ಸಿಕ್ಕುವದು. ದೇವರ ಸಂದೇಶವು ಆತನ ಶೇಷ ಜನರಿಗೆ ಶುಭವಾರ್ತೆಯಾಗಿತ್ತು ಯಾಕೆಂದರೆ ಆತನು ಅವರನ್ನು ಬಾಬೆಲಿನಿಂದ ಮೇಲೆತ್ತಿ ಇಸ್ರಾಯೇಲ್ಯರ ದೇಶಕ್ಕೆ ಕರೆತರುವದಾಗಿ ವಾಗ್ದಾನ ಮಾಡಿದನು (ಯೆಹೆಜ್ಕೇಲ 37:10-14).

ಹೇಗೂ ಹೊಸ ಸಮಸ್ಯೆಗಳು ಉದ್ಭವವಾದವು. ಸ್ವದೇಶದ ಬಹುಪಾಲು ವಿನಾಶಕ್ಕೊಳಗಾಗಿತ್ತು ಮತ್ತು ಬಹಳಷ್ಟು ದುರ್ಗದ ಪಟ್ಟಣಗಳು ಧ್ವಂಸಗೊಂಡ ಸ್ಥಿತಿಯಲ್ಲಿದ್ದವು. ಹಿಂದಿರುಗಿ ಬರುವವರು ಪುನಃ ಎಲ್ಲವನ್ನೂ ಮೊದಲಿನಿಂದಲೇ ಆರಂಭಿಸಬೇಕಗಿತ್ತು, ದೇಶವನ್ನು ಶುಚಿಗೊಳಿಸಿ, ಅದನ್ನು ಉಳಿಮೆ ಮಾಡಿ ಬೀಜವನ್ನು ಬಿತ್ತಬೇಕಿತ್ತು, ಮತ್ತು ತಮ್ಮ ನಿವಾಸಗಳನ್ನು ನಿರ್ಮಿಸಿಕೊಳ್ಳಬೇಕಾಗಿತ್ತು. ಅವರು ಹಿಂದಿರುಗಿ ಬರುವದನ್ನು ಹಗೆ ಮಾಡಿದಂಥ ಅನ್ಯಜನರ ಮಧ್ಯದಲ್ಲಿ ದ್ವೇಷಕಾರಿ ವಾತಾವರಣದಲ್ಲಿ ಅವರು ಹೇಗೆ ಬದುಕುಳಿಯುವವರಾಗಿದ್ದರು? ಅವರಿಗೋಸ್ಕರ ದೇಶವು ಮತ್ತೊಂದಾವರ್ತಿ ಬೆಳೆಗಳನ್ನು ಹಾಗೂ ಅವರ ಪ್ರಾಣಿಗಳಿಗೆ ಹುಲ್ಲನ್ನು ಕೊಡುವದಕ್ಕೆ ಆರಂಭಿಸುವ ಮುನ್ನ ಎಷ್ಟು ಕಾಲ ಹಿಡಿಯಲಿತ್ತು? ಇವುಗಳು ಮತ್ತು ಇತರೆ ಪ್ರಶ್ನೆಗಳು ಜನರ ಮನಸ್ಸುಗಳಲ್ಲಿ ತೇಲಾಡಿರಬಹುದಾಗಿದೆ. ಆದದರಿಂದ, ದೇವರು ಪ್ರವಾದಿಗೆ ಮತ್ತೊಂದು ದರ್ಶನವನ್ನು ಕೊಟ್ಟನು: ಯೆರೂಸಲೇಮ್ ಪಟ್ಟಣ, ದೇವಾಲಯ, ಹಾಗೂ ದೇಶದ ಕುರಿತಾದ ಒಂದು ಆದರ್ಶಕರವಾದ ನೋಟ, ಅವುಗಳು ಸಾಂಕೇತಿಕ ಭಾಷೆಯಲ್ಲಿ ಬಣ್ಣಿಸಲ್ಪಟ್ಟವು.

ಯೆಹೆಜ್ಕೇಲ 47ರಲ್ಲಿನ ಸಾಂಕೇತಿಕತೆಯು ದೇವರ ಆಲಯದೊಳಗಿಂದ ನೀರು ಹರಿದು ಬರುವದಕ್ಕೆ ಸಂಬಂಧಿಸಿದ್ದಾಗಿದೆ. ಆರಂಭದಲ್ಲಿ ಅದು ತೊಟ್ಟಿಕ್ಕುವಂತಿತ್ತು, ಬಳಿಕ ಒಂದು ಒರತೆಯಾಗಿತ್ತು, ಮತ್ತು ತರುವಾಯ ಯಾರೂ ದಾಟಲಾಗದಂಥ ಒಂದು ಬೃಹತ್ ನದಿಯಾಗಿ ಮಾರ್ಪಟ್ಟಿತ್ತು. ನೀರು ಅರಾಬಾದ (ಮೃತ ಸಮುದ್ರ ಪಡುವಣ ದಿಕ್ಕಿನಲ್ಲಿರುವ ಮರುಭೂಮಿಯ ಕ್ಷೇತ್ರ) ಕಡೆಗೆ ಹರಿಯುವದಾಗಿ ಪ್ರವಾದಿಯು ಕಂಡನು. ಅದು ಸಮುದ್ರದೊಳಗೆ ಹರಿದಾಗ, ಅದರ ನೀರು ಸಿಹಿಯಾಯಿತು ಮತ್ತು ಮೀನುಗಳಿಂದ ತುಂಬಿಕೊಂಡಿತು. ನದಿಯು ಹರಿದ ಕಡೆಯೆಲ್ಲೆಲ್ಲಾ, ಹಸಿರು ಗಿಡಮರಗಳು ಬೆಳೆದುಕೊಂಡವು. ಅದರ ದಡಗಳ ಮೇಲೆ, ಆಹಾರಕ್ಕೋಸ್ಕರ ಸಕಲ ವಿಧವಾದ ಮರಗಳು ಬೆಳೆದವು. ಇವುಗಳ ವಿಷಯದಲ್ಲಿ ಯೆಹೆಜ್ಕೇಲನು ಹೀಗೆ ಹೇಳಿದನು, "ತೊರೆಯ ಎರಡು ದಡಗಳಲ್ಲಿಯೂ ಸಕಲಫಲವೃಕ್ಷಗಳು ಬೆಳೆಯುವವು; ಅವುಗಳ ಎಲೆ ಬಾಡದು, ಹಣ್ಣು ತೀರದು; ತೊರೆಯ ನೀರು ಪವಿತ್ರಾಲಯದೊಳಗಿಂದ ಹೊರಟುಬರುವ ಕಾರಣ ಅವು ತಿಂಗಳುತಿಂಗಳಲ್ಲಿಯೂ ಹೊಸಹೊಸ ಫಲವನ್ನು ಕೊಡುತ್ತಲಿರುವವು; ಅವುಗಳ ಹಣ್ಣು ಆಹಾರಕ್ಕೂ ಸೊಪ್ಪು ಔಷಧಕ್ಕೂ ಅನುಕೂಲಿಸುವವು" (ಯೆಹೆಜ್ಕೇಲ 47:12; ನೋಡಿರಿ ಪ್ರಕಟನೆ 22:1, 2).

ಇಲ್ಲಿ ಸಾಂಕೇತಿಕತೆಯು ಏದೆನ್ ತೋಟದಿಂದ ತೆಗೆದುಕೊಳ್ಳಲ್ಪಟ್ಟಿದೆ, ಮತ್ತು ಜೀವದಾಯಕ ನದಿಯು ದೇವಾಲಯದೊಳಗಿಂದ ಹರಿಯುವದಾಗಿ ಬಣ್ಣಿಸಲ್ಪಟ್ಟಿದೆ,[65] ಅಲ್ಲಿ ದೇವರು ಮೂಲತಃ ಕೆರೂಬಿಯರ ಮೇಲೆ ಸಿಂಹಾಸನಾರೂಢನಾಗಿದ್ದನು (2 ಸಮುವೇಲ 6:2). ಫಲಭರಿತ ಮರಗಳು[66] ಅಲ್ಲಿ ಎಂದಿಗೂ ವಿಫಲವಾಗದ ಆಹಾರವನ್ನು ಮತ್ತು ಸ್ವಸ್ಥತೆಯನ್ನು ಜನರಿಗಾಗಿ ಒದಗಿಸುವದಕ್ಕೋಸ್ಕರ ಬೆಳೆಯುತ್ತಿದ್ದವು.

ವಾಸ್ತವಿಕದಲ್ಲಿ, ಶೇಷ ಜನರು ಬಾಬೆಲಿನ ಸೆರೆವಾಸದಿಂದ ಹಿಂದಿರುಗಿ ಬಂದ ವೇಳೆ, ಈ ಆದರ್ಶಕರವಾದ ವಾಗ್ದಾನದ ಭಾಗಶಃ ನೆರವೇರಿಕೆಯನ್ನು ಅನುಭವಿಸಿದರು. ಅರಿಕೆ ಮತ್ತು ಆರಾಧನೆಯ ಒಂದು ಸಂಕೀರ್ತನೆಯಲ್ಲಿ ಹಿಂದಿರುಗಿ ಬಂದವರು ತಮ್ಮ ದುರವಸ್ಥೆಯ ಪರಿಸ್ಥಿತಿಯು "ದಾಸರ" ರೀತಿಯಲ್ಲಿತ್ತು ಎಂದು ಬಣ್ಣಿಸುತ್ತಾರೆ; ಮತ್ತು ಅವರು ತಮ್ಮ

ಅನ್ಯಜನಾಂಗದ ದಬ್ಬಾಳಿಕೆಗಾರರು ಅವರ ಬೆಳೆಗಳನ್ನು ಮತ್ತು ಪಶುಗಳನ್ನು ಕಸಿದುಕೊಂಡರು ಎಂಬುದಾಗಿ ಹೇಳುತ್ತಾರೆ (ನೆಹಮೀಯ 9:36, 37). ಅದು ದುಸ್ಥಿತಿಗೋಸ್ಕರ ಒಂದು ಉತ್ತರವನ್ನು ಕಂಡುಕೊಳ್ಳುವದಕ್ಕೆ ಕಷ್ಟ ಪಟ್ಟರು.

ಯೆಹೂದ್ಯರು ತಮಗಾದ ಸಂಕಷ್ಟಕ್ಕೆ ಪ್ರಮುಖ ಕಾರಣವೇನೆಂದರೆ ದೇವರ ವಾಗ್ದಾನವು ಷರತ್ತುಬದ್ಧವಾಗಿದೆ ಎಂಬುದನ್ನು ಅವರು ಅರ್ಥಮಾಡಿಕೊಂಡಿರಬೇಕಾಗಿತ್ತು. ಅದರ ನೆರವೇರುವಿಕೆಯು ಅವರ ಪಶ್ಚಾತ್ತಾಪ ಪಡುವಿಕೆ, ಪಾಪದ ಅರಿಕೆ, ಮತ್ತು ಮೋಶೆಯ ಒಡಂಬಡಿಕೆಗೆ ವಿಧೇಯರಾಗುವದರ ಮೇಲೆ ಅವಲಂಬಿತವಾಗಿತ್ತು.

ಈ ಅಧ್ಯಯನದ ಉಳಿದ ಭಾಗದಲ್ಲಿ, ನಾವು ಹೊಸ ಒಡಂಬಡಿಕೆಯಲ್ಲಿ ಚಿತ್ರಿಸಲ್ಪಟ್ಟಿರುವ ರೀತಿಯಲ್ಲಿ ಜೀವವೃಕ್ಷ ಮತ್ತು ಜೀವನದಿಯ ಕುರಿತಾಗಿ ಕಲಿಯಲಿದ್ದೇವೆ.

*ಯೇಸು ಕ್ರಿಸ್ತನು, ಜೀವಜಲವನ್ನು ಕೊಡುವಾತನು.* ಯೇಸುವು ಬೆತ್ಲೇಹೆಮಿನಲ್ಲಿ ಹುಟ್ಟಿದ ವೇಳೆ, ಯೆಹೂದಿ ಜನರು ಆಗಲೂ ಅವರ ವೈರಿಗಳನ್ನೆಲ್ಲಾ ಸೋಲಿಸಿ, ಯೂದಾಯದಲ್ಲಿನ ಸಿಂಹಾಸನದಿಂದ ದುಷ್ಟ ಹೆರೋದನನ್ನು ಕಿತ್ತೇಸೆದು, ಅನ್ಯಧರ್ಮಿಯರಾದ ರೋಮನ್ನರನ್ನು ಅವರ ದೇಶದಿಂದ ಓಡಿಸುವಂತಹ ದಾವೀದನ ವಂಶದಿಂದ ಬರುವ ಮೆಸ್ಸೀಯನನ್ನು ಎದುರು ನೋಡುತ್ತಲಿದ್ದರು. ಇಸ್ರಾಯೇಲ್ಯರ ಮೆಸ್ಸೀಯತ್ವದ ನಿರೀಕ್ಷೆಯು, ಒಂದು ಜೀವವೃಕ್ಷ ಮತ್ತು ಜೀವಜಲಗಳನ್ನೊಳಗೊಂಡ ಹೊಸ ಪರದೈಸವು ಫಿಲಿಷ್ಟಿಯದಲ್ಲಿರುವದರ ಕುರಿತಾದ ಯಾವದೋ ರೀತಿಯ ಪ್ರವಾದನಾತ್ಮಕ ಉಕ್ತಿಗಳೊಂದಿಗೆ ಸಂಬಂಧ ಹೊಂದಿರುವಂತೆ ಕಾಣಿಸುತ್ತದೆ.[67] ಅನೇಕ ಜನರು ದೇವರ ರಾಜ್ಯದ ಕುರಿತಾಗಿ ಯೇಸುವಿಗಿದ್ದ ದರ್ಶನ ಮತ್ತು ಅವರು ಬಹಳ ವರ್ಷಗಳಿಂದ ಹೃದಯದಲ್ಲಿಟ್ಟುಕೊಂಡಿದ್ದ ನಿರೀಕ್ಷೆಯ ನಡುವೆ ಇರುವ ವ್ಯತ್ಯಾಸಗಳಿಂದಾಗಿ ಗೊಂದಲಕ್ಕೊಳಗಾಗಿದ್ದರು.

ಯೇಸುವು ತನ್ನ ವೈಯಕ್ತಿಕ ಸೇವೆಯನ್ನು ಆರಂಭಿಸಿದ ವೇಳೆ, ಆತನು ಹೀಗೆ ಘೋಷಿಸಿದನು, “ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ” (ಮಾರ್ಕ 1:15). ಹೇಗೂ, ರಾಜ್ಯದೊಳಗೆ ಪ್ರವೇಶವನ್ನು ನೀಡುವದಕ್ಕೆ ಆತನು ಮುಂದಿಟ್ಟ ಷರತ್ತುಗಳು ಯೆಹೂದಿ ಧಾರ್ಮಿಕ ನಾಯಕರಿಗೆ ದಿಗಿಲುಗೊಳಿಸುವಂತಿದ್ದವು. ಸ್ನಾನಿಕನಾದ ಯೋಹಾನನ ಹಾಗೆಯೇ (ಮತ್ತಾಯ 3:1-12; ಮಾರ್ಕ 1:1-5; ಲೂಕ 3:2-9; 7:29, 30), ಯೇಸುವು ಅವರಿಂದ ಒಂದು ಹೊಸ ಆತ್ಮೀಕ ಜನನವನ್ನು ಅಪೇಕ್ಷಿಸಿದನು, ಅಂದರೆ, ಪರಿವರ್ತನೆಯನ್ನು ಹೊಂದುವಂತೆ ಕೇಳಿದನು. ಅತ್ಯಂಥ ಒತ್ತು ಕೊಟ್ಟವನಾಗಿ, ಆತನು ನಿಕೊದೇಮನಿಗೆ ಹೀಗೆ ಹೇಳಿದನು, “ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು” (ಯೋಹಾನ 3:5).

ಇದಕ್ಕಿಂತಲೂ ಅಧಿಕ ದಿಗ್ಭ್ರಮೆಗೊಳಿಸುವ ಸಂಗತಿಗಳೆಂದರೆ, ಪರ್ಣಶಾಲೆಗಳ ಹಬ್ಬದ (“ದೇವದರ್ಶನಗುಡಾರಗಳ ಹಬ್ಬ”; KJV) ಸಂದರ್ಭದಲ್ಲಿ ಯೇಸುವು ತಾನು ಯಾರೆಂಬುದರ ಕುರಿತು ಹೇಳಿಕೊಂಡ ಸಂಗತಿಗಳೇ, ಆ ಹಬ್ಬವು ಯೆರೂಸಲೇಮಿನಲ್ಲಿ ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಿನಲ್ಲಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ, ಮಹಾಯಾಜಕನು ಸಿಲೋವ ಕೊಳದ ತನಕವು ಒಂದು ಮೆರವಣಿಗೆಯನ್ನು ನಡಿಸಿಕೊಂಡು ಕರೆದೊಯ್ಯುವದು ಒಂದು ಯೆಹೂದಿ ಪದ್ಧತಿಯಾಗಿತ್ತು, ಅಲ್ಲಿ ಆತನು ದೇವಾಲಯಕ್ಕೆ ಪುನಃ ತೆಗೆದುಕೊಂಡು ಹೋಗಲು ನೀರನ್ನು ಸೇದಿಕೊಳ್ಳುತ್ತಿದ್ದನು. ಅವರು ಪಟ್ಟಣದ ಮೂಲಕವಾಗಿ ಬಂದ ದಾರಿಯಲ್ಲಿ ಹಿಂದಿರುಗುವ ವೇಳೆ, ಮೆರವಣಿಗೆಯಲ್ಲಿರುವವರು “ರಕ್ಷಣೆಯೆಂಬ ಬಾವಿಗಳಿಂದ” ನೀರನ್ನು

ಸೇದಿಕೊಳ್ಳುವುದರ ಬಗ್ಗೆ (ಯೆಶಾಯ 12:3) ಮತ್ತು "[ದೇವರ] ಸಂಭ್ರಮಪ್ರವಾಹದಲ್ಲಿ" ಪಾನ ಮಾಡುವದರ ಬಗ್ಗೆ (ಕೀರ್ತನೆ 36:8) ಉಲ್ಲಾಸದಿಂದ ಸಂಕೀರ್ತನಗಳನ್ನು ಹಾಡುತ್ತಿದ್ದರು. ಅವರು ದೇವರನ್ನು "ಜೀವದ ಬುಗ್ಗೆ" ಎಂದು ಸ್ತುತಿಸುತ್ತಿದ್ದರು (ಕೀರ್ತನೆ 36:9).

ಜನರು ಚಳಿಗಾಲದ ಧಾನ್ಯವನ್ನು ಬಿತ್ತುವಂತೆ ತಮ್ಮನ್ನು ಶಕ್ತಗೊಳಿಸುತ್ತಿದ್ದ ಮಳೆಗೋಸ್ಕರ ಪ್ರಾರ್ಥನೆಯನ್ನು ಮಾಡುವ ವೇಳೆ, ಅವರು ಐಗುಪ್ತದ ಸ್ತುತಿಗೀತೆಗಳನ್ನು (ಕೀರ್ತನೆ 113-118) ಸಹ ಪಠಿಸುತ್ತಿದ್ದರು, ಅವುಗಳಲ್ಲಿ ಅರಣ್ಯದಲ್ಲಿ ದೇವರು "ಬಂಡೆಯನ್ನು ... ಬುಗ್ಗೆಯಾಗಿ ಮಾರ್ಪಡಿಸಿದ" ಕುರಿತಾಗಿ ಸ್ಮರಿಸಿಕೊಳ್ಳುತ್ತಿದ್ದರು (ಕೀರ್ತನೆ 114:8). ಅವರು ಅಂತ್ಯಕಾಲಿಕದಲ್ಲಿನ (ಯುಗಾಂತ್ಯದ) ಮೆಸ್ಸೀಯತ್ವದ ನೀರಿನ ನದಿಗಳಿಗೋಸ್ಕರ ಹಂಬಲಿಸುತ್ತಿದ್ದರು (ಯೆಹೆಜ್ಕೇಲ 47:1-9; ಜೆಕರ್ಯ 13:1; 14:8, 16, 17) ಮತ್ತು ಹೀಗೆ ಬೇಡಿಕೊಳ್ಳುತ್ತಿದ್ದರು, "ಯೆಹೋವನೇ, ದಯವಿಟ್ಟು ರಕ್ಷಿಸು; ಯೆಹೋವನೇ, ದಯವಿಟ್ಟು ಸಾಫಲ್ಯಕೊಡು" (ಕೀರ್ತನೆ 118:25). ವೃತಾಚಾರಣೆಯ ಉತ್ತುಂಗದ ಹಂತದಲ್ಲಿ, ಯಜ್ಞವೇದಿಯ ಸುತ್ತಲು ಏಳು ಸಾರಿ ಸುತ್ತಿದ ಬಳಿಕ, ಮಹಾ ಯಾಜಕನು ನೀರನ್ನು ಯಜ್ಞವೇದಿಯ ತಳದಲ್ಲಿ ಸುರಿಯುತ್ತಿದ್ದನು.[68] ಈ ಗಳಿಗೆಯಲ್ಲಿಯೇ ಯೇಸುವು ಎದ್ದು ನಿಂತು ಈ ಆಘಾತಕಾರಿ ಹೇಳಿಕೆಯನ್ನು ನೀಡಿದನೆಂದು ಕಾಣಿಸುತ್ತದೆ:

> ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು - ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ (ಯೋಹಾನ 7:37-39).

ಇದು ಯೇಸುವು ತನ್ನ ಕುರಿತಾಗಿ ಹೇಳಿಕೊಂಡ ಅತ್ಯಂಥ ದೊಡ್ಡ ಮಾತಾಗಿರುತ್ತದೆ. ಜನರು "ಜೀವಜಲ"ವನ್ನು ಒದಗಿಸುವಂತೆ, "ಸಾಫಲ್ಯಕೊಡು," ಮತ್ತು "ರಕ್ಷಿಸು" ಎಂದು ದೇವರಿಗಾಗಿ ಹಾಡುತ್ತಾ ಪ್ರಾರ್ಥನೆ ಮಾಡುತ್ತಿದ್ದರು. ಅಂಥ ನೀರು, ಆಶೀರ್ವಾದಗಳು, ಮತ್ತು ರಕ್ಷಣೆಗೆ ಮೂಲನು ತಾನೇ ಎಂಬುದಾಗಿ ದೃಢಪಡಿಸುವ ಮೂಲಕ, ಯೇಸುವು ತನ್ನನ್ನು ದೈವಿಕವಾಗಿರುವವನು, ದೇವರ ಕುಮಾರನು ಎಂಬುದಾಗಿ ಹೇಳಿಕೊಳ್ಳುತ್ತಿದ್ದಾನೆ. ಹಳೆಯ ಒಡಂಬಡಿಕೆಯೊಳಗೆ ದೇವರು ಮಾತ್ರವೇ "ಜೀವಜಲದ ಬುಗ್ಗೆ" (ಯೆರೆಮೀಯ 2:13), ಸೃಷ್ಟಿಸುವವನು, ಆತ್ಮವನ್ನು ಅನುಗ್ರಹಿಸುವಾತನು, ಜೀವದಾಯಕ, ಆಶೀರ್ವದಿಸುವವನು, ಮತ್ತು ತನ್ನ ಜನರನ್ನು ರಕ್ಷಿಸುವವನು ಎಂಬುದಾಗಿ ಬಣ್ಣಿಸಲ್ಪಟ್ಟಿದ್ದಾನೆ. ಯೇಸುವು ತನಗೆ ಸಹ ಈ ದೈವಿಕ ಪರಮಾಧಿಕಾರಗಳಿರುತ್ತವೆ ಎಂದು ವಾದಿಸುತ್ತಿದ್ದಾನೆ. ಕ್ರಿಸ್ತನಲ್ಲಿ ನಂಬಿಕೆಯಿಟ್ಟು (ಭರವಸ) ವಿಧೇಯರಾಗುವದೆಂದರೆ ನಿತ್ಯಜೀವವನ್ನು ಅನುಭವಿಸುವದೇ ಆಗಿರುತ್ತದೆ (ಯೋಹಾನ 3:36; 5:39, 40; 11:25-27; 14:6; 17:3).

*ಕ್ರೈಸ್ತರು ಮತ್ತು ಅವರ ಜೀವ-ಕೊಡುವ ಸಂದೇಶ.* ಮೇಲ್ಗಡೆಯ ಸತ್ಯಗಳು - ಪ್ರಾಯಶ್ಚಿತ್ತ ಮಾಡುವ ಯೇಸುವಿನ ಮರಣ, ಆತನ ಪುನರುತ್ಥಾನ, ಮತ್ತು ದೇವರ ಬಲಗಡೆಗೆ ಪರಲೋಕಾರೋಹಣಗೊಳ್ಳುವಿಕೆ ಇವುಗಳನ್ನು ಒಳಗೊಂಡಿರುವ - ಒಟ್ಟಾಗಿ ಸೇರಿಯೇ ಅಪೊಸ್ತಲರು ಹೋಗಿ ಸಾರುತ್ತಿದ್ದ ಸುವಾರ್ತೆ (ಶುಭವರ್ತಮಾನ) ಆಗಿತ್ತು. ಈ ಸಂದೇಶವು ಎಷ್ಟೊಂದು ಶಕ್ತಿಶಾಲಿಯಾಗಿತ್ತೆಂದರೆ ಅದು ಸಭೆ ಎಂಬ ಹೊಸ ಆತ್ಮೀಕ ಸಂಗತಿಯನ್ನು

ಅಸ್ತಿತ್ವಕ್ಕೆ ತಂದಿತ್ತು, ಅದು ಕ್ರಿಸ್ತನ ಆತ್ಮೀಕ ದೇಹವಾಗಿರುತ್ತದೆ. ಅದು ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮೂಲಕ ಯೇಸುವಿಗೆ ಕರ್ತನೆಂದು ಪ್ರತಿಕ್ರಿಯಿಸಿದವರನ್ನು ಒಳಗೊಂಡು ರಚನೆಯಾಗಿರುತ್ತದೆ. ಸಭೆಗೆ ಸೇರ್ಪಡೆಗೊಳಿಸಲ್ಪಟ್ಟ ಪರಿವರ್ತನೆಗೊಂಡ ಹೊಸಬರು ತಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಹೊಂದಿಕೊಂಡರು ಮತ್ತು ಅವರು ಪವಿತ್ರಾತ್ಮನಿಂದ ತುಂಬಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:16-42).

ಸಾವಿರಾರು ಯೆಹೂದ್ಯರು ಹೊಸ ಜನನವನ್ನು ಅನುಭವಿಸುವವರಾಗಿ ಎಳಸು ಸಭೆಯ ಭಾಗವಾಗುವದರೊಂದಿಗೆ, ಕ್ರೈಸ್ತತ್ವವು ಹುಟ್ಟಿದ ತಕ್ಷಣದಲ್ಲಿಯೇ ಯೆರೂಸಲೇಮಿನೊಳಗೆ ವಿರೋಧ ಮತ್ತು ನೇರವಾದ ಹಿಂಸೆಯು ಆರಂಭಗೊಂಡಿತ್ತು (ಅಪೊಸ್ತಲರ ಕೃತ್ಯಗಳು 4:1-8:3). ಯೇಸುವು ಕ್ರಿಸ್ತನಾಗಿದ್ದಾನೆ (ಮೆಸ್ಸೀಯನು) ಎಂಬ ಕ್ರೈಸ್ತರ ಹೇಳಿಕೆಯ ವಿರುದ್ಧವಾಗಿ ಎದ್ದ ಈ ಹಿಂಸಾಚಾರದ ಪ್ರತಿಕ್ರಿಯೆಯು ಆದಿ ವಿಶ್ವಾಸಿಗಳು ವಾಕ್ಯವನ್ನು ಸಾರುವದಕ್ಕೆ ಹೋದ ಕಡೆಗಳಲ್ಲೆಲ್ಲಾ ಉಪದ್ರವ ಪಡಿಸುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 8:4). ಕ್ರಿ.ಶ. 64ರಲ್ಲಿ ರೋಮಾಪುರಕ್ಕೆ ಬೆಂಕಿಯನ್ನು ಹಚ್ಚುವ (ನಿರೋ ಚಕ್ರವರ್ತಿಯು ಅದನ್ನು ಕ್ರೈಸ್ತರ ಮೇಲೆ ಆರೋಪಿಸಿದ್ದನು) ಸಮಯದ ವರೆಗೂ ಅಧಿಕೃತ ರೋಮನ್ ಹಿಂಸೆಯು ಆರಂಭಗೊಂಡಿರಲಿಲ್ಲ; ಆದರೆ ಪ್ರಥಮ ಶತಮಾನದ ಕಡೆಯ ಭಾಗದಲ್ಲಿ Domitian ಚಕ್ರವರ್ತಿಯ ಆಳ್ವಿಕೆಯಲ್ಲಿ ಅದು ಮತ್ತಷ್ಟು ವ್ಯಾಪಕವಾಗಿ ಹರಡಿತ್ತು ಮತ್ತು ತೀಕ್ಷ್ಣಗೊಂಡಿತ್ತು. ಅದದರಿಂದ, ಸಭೆಯು ಬದುಕುಳಿಯುವದಕ್ಕೋಸ್ಕರ ಒಂದು ಹೋರಾಟದಲ್ಲಿ ತೊಡಗಿಸಿಕೊಂಡಿತ್ತು, ಅದರಿಂದಾಗಿ ಅನೇಕ ಸಾರಿ ತಮ್ಮ ನಂಬಿಕೆಯನ್ನು ಅಲ್ಲಗಳೆದು ಚಕ್ರವರ್ತಿಗಾಗಿ ಧೂಪವನ್ನು ಸುಡುವದಕ್ಕೆ, ಆತನನ್ನು ಒಬ್ಬ ದೇವರೆಂದು ಆರಾಧಿಸುವದಕ್ಕೆ ನಿರಾಕರಿಸುತ್ತಿದ್ದ ಕಾರಣ ಕ್ರೈಸ್ತರು ರಕ್ತಸಾಕ್ಷಿಗಳಾಗಿ ಸಾಯುವಂತೆ ಕಾರಣವಾಗಿತ್ತು.

*ಪ್ರಕಟನೆ ಪುಸ್ತಕದಲ್ಲಿ ನದಿ ಮತ್ತು ಜೀವವೃಕ್ಷ ದೃಶ್ಯ.* ವಯಸ್ಸಾಗಿದ್ದ ಯೋಹಾನನು, ಬಹುಶಃ ಆತನು ಜೀವಂತವಾಗಿದ್ದ ಕಡೆಯ ಅಪೊಸ್ತಲನಾಗಿದ್ದ ಈತನು ಪತ್ಮೋಸ್ ದ್ವೀಪದಲ್ಲಿ ಗಡಿಪಾರು ಮಾಡಲ್ಪಟ್ಟಿದ್ದನು; ಮತ್ತು ಅಲ್ಲಿ ಆತನು ಕರ್ತನಿಂದ ದರ್ಶನಗಳನ್ನು ಹೊಂದಿಕೊಂಡನು, ಅವುಗಳ ಇಂಗಿತವು ಬಾಧೆಯನ್ನನುಭವಿಸುತ್ತಿದ್ದ ದೇವರ ಜನರಿಗೆ ಪ್ರೋತ್ಸಾಹ ಮತ್ತು ಸ್ಥಿರತೆಯನ್ನು ಉಂಟು ಮಾಡುವದಾಗಿತ್ತು. ಈ ದರ್ಶನಗಳು ಹೊಸ ಒಡಂಬಡಿಕೆಯ ಕಡೆಯ ಪುಸ್ತಕವಾದ ಪ್ರಕಟನೆ ಪುಸ್ತಕದಲ್ಲಿ ಬರೆಯಲ್ಪಟ್ಟಿರುತ್ತವೆ. ಈ ಪ್ರವಾದನವಾಕ್ಯಗಳನ್ನು ಓದುವಂಥವನೂ "ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ" ಆಗಿರುವವರಿಗೆ ಒಂದು ವಿಶೇಷ ಆಶೀರ್ವಾದವು ಘೋಷಿಸಲ್ಪಟ್ಟಿದೆ (ಪ್ರಕಟನೆ 1:3).

ಈ ದರ್ಶನಗಳಲ್ಲಿ, ಯೋಹಾನನು ಹಳೆಯ ಒಡಂಬಡಿಕೆಯ ಕಾಲದಲ್ಲಿನ ಯೆಹೂದ್ಯರಿಗೆ ಸಂಭವಿಸಿದ ಮತ್ತು ಪ್ರಥಮ ಶತಮಾನದಲ್ಲಿನ ಸಭೆಗೆ ಸಂಭವಿಸಿದ ಸಂಗತಿಗಳ ನಡುವೆ ಒಂದು ಸಾದೃಶ್ಯವನ್ನು ಕಂಡನು. ಬಾಬೆಲಿನ ಸೈನ್ಯಗಳು ಪ್ರಾಚೀನ ಮಧ್ಯಪ್ರಾಚ್ಯವನ್ನೆಲ್ಲಾ ಪರಾಜಯಗೊಳಿಸಿ, ಯೆಹೂದವನ್ನು ನಾಶಗೊಳಿಸಿ, ದಾವೀದನ ಸಂತತಿಯವರೊಳಗೆ ಸಿಂಹಾಸನದಲ್ಲಿದ್ದ ಕಡೆಯ ಅರಸನನ್ನು ಸೆರೆಗೆ ಹಾಕಿದ್ದ ರೀತಿಯಲ್ಲಿಯೇ, ರೋಮನ್ ಸಾಮ್ರಾಜ್ಯವು (ಹೊಸ ಬಾಬೆಲ, ಸೈತಾನನ ಸಾಧನವಾಗಿ) ಆಗ ಪರಿಚಿತವಿದ್ದ ಲೋಕವನ್ನೆಲ್ಲಾ ಜಯಿಸಿಕೊಂಡಿತ್ತು. ಈಗ ಅವರು ರಕ್ತಸಾಕ್ಷಿಗಳ ರಕ್ತವನ್ನು ಕುಡಿದಿದ್ದರು (ಪ್ರಕಟನೆ 17:5, 6), ಸಭೆಯನ್ನು ನಾಶಗೊಳಿಸಿದ ಮಹಾನ್ ದೈವಿಕ ಅರಸನಾದ ಯೇಸು ಕ್ರಿಸ್ತನ ಹೇಳಿಕೆಗಳನ್ನೆಲ್ಲಾ ರದ್ದುಗೊಳಿಸುವದಕ್ಕೆ ಬಯಸಿದ್ದರು (ಪ್ರಕಟನೆ 12:5, 17).

ಕಠಿಣ ಬಿಕ್ಕಟ್ಟಿನ ಸಮಯದಲ್ಲಿ, ಕರ್ತನು ಕ್ರೈಸ್ತರಿಗೆ ದೀರ್ಘಾಯುಷ್ಯದ ಅಥವಾ ಶಾರೀರಿಕ ಆಶೀರ್ವಾದಗಳ ವಾಗ್ದಾನಗಳನ್ನು ಎತ್ತಿ ಹಿಡಿದು ತೋರಿಸಲಿಲ್ಲ. ಆತನು ಅವರನ್ನು ಹಿಂಸೆ ಮತ್ತು ಮರಣದಿಂದ ತಪ್ಪಿಸಿ ಕಾಪಾಡುವೆನೆಂದು ವಾಗ್ದಾನ ಮಾಡಲಿಲ್ಲ. ಅಲ್ಲಿ ಒಂದು ಭೂಲೋಕದ ಮತ್ತು ಸಮೃದ್ಧವಾಗಿ ನೀರು ಹರಿಯುತ್ತಿದ್ದ ಏದೆನ್ ರೀತಿಯ ತೋಟದಲ್ಲಿನ ಅಕ್ಷರಶಃ ಜೀವವೃಕ್ಷವೊಂದರ ಎದುರು ನೋಡುವಿಕೆ ಇರಲಿಲ್ಲ. ಕ್ರಿ.ಶ. 70ರಲ್ಲಿ ಯೆರೂಸಲೇಮ್ ಮತ್ತು ಅದರಲ್ಲಿನ ದೇವಾಲಯಗಳೆರಡೂ ರೋಮನ್ನರ ಕೈಯಲ್ಲಿ ನಾಶನವನ್ನು ಅನುಭವಿಸಿದ ಬಳಿಕ, ಅವುಗಳು ವೈಭವಪೂರಿತವಾಗಿ ಪುನಃ ನಿರ್ಮಿಸುವಿಕೆಯಾಗಲಿ ಸಹ ಇರುವದಿಲ್ಲ. ಅಷ್ಟುಮಾತ್ರವಲ್ಲದೆ, ಫಿಲಿಷ್ಟಿಯ ದೇಶದಲ್ಲಿ ದಾವೀದನ ಸಿಂಹಾನ ಮತ್ತು ರಾಜ್ಯಗಳು ಅಕ್ಷರಶಃ ಮರು-ಸ್ಥಾಪಿಸಲ್ಪಡುವಿಕೆಯ ಕುರಿತಾಗಿ ಮರೆಯಾಗಿರುವ ಕನಸುಗಳು ಪುನರುಜ್ಜೀವಗೊಳ್ಳುವದಾಗಲಿ ಇರಲಿಲ್ಲ. ಕ್ರೈಸ್ತರಿಗೆ ದೇವರ ನಿತ್ಯವಾದ ಆಶೀರ್ವಾದಗಳ ಕುರಿತಾದ ವಿಶಾಲ ಹಾಗೂ ಉನ್ನತವಾಗಿರುವ ದೃಷ್ಟಿಕೋನವನ್ನು ಹೊಂದಿರಬೇಕೆಂದು ಪ್ರೋತ್ಸಾಹಿಸಲಾಯಿತು. ಅವರು ಭೌತಿಕ ಐಶ್ವರ್ಯ ಹಾಗೂ ಇಹಲೋಕದ ಸುಖಭೋಗಗಳನ್ನು ಮೀರಿ ಮೇಲೆದ್ದು ದೇವರು ಆಳ್ವಿಕೆ ಮಾಡುತ್ತಿರುವ ನಿತ್ಯವಾದ ಸಿಂಹಾಸನದ ಮೇಲೆಯೇ ಮುಖ್ಯವಾದ ಗಮನವನ್ನು ಹರಿಸಬೇಕಿತ್ತು. ಅವರು ತಮ್ಮ ದೃಷ್ಟಿಯನ್ನು ಯೇಸುವಿನ ಮೇಲೆ ಇಡಬೇಕಿತ್ತು, ಆತನು ನಮ್ಮ ಪಾಪಗಳಿಗೋಸ್ಕರ ಮರಣಿಸಿದಂಥ ಆದರೆ ಸತ್ತವರೊಳಗಿಂದ ಎದ್ದು, ಪರಲೋಕಕ್ಕೆ ಏರಿಹೋಗಿರುವ, ಮತ್ತು ಈಗ ರಾಜಾಧಿರಾಜನಾಗಿಯೂ ಕರ್ತರ ಕರ್ತನಾಗಿಯೂ ಆಳುತ್ತಿರುವ ಯಜ್ಞದ ಕುರಿಮರಿಯಾಗಿರುವನು

ಹೊಸ ಒಡಂಬಡಿಕೆಯೊಳಗೆ ವಾಗ್ದಾನ ದೇಶವು ಇನ್ನು ಮೇಲೆ ಭೂಮಿಯ ಮೇಲಿರುವ ತಾತ್ಕಾಲಿಕ ಸ್ಥಳವಾಗಿರುವದಿಲ್ಲ; ಅದು ಈ ಶಾರೀರಿಕ ಆಕಾಶ ಮತ್ತು ಭೂಮಿಗಳು ಗತಿಸಿ ಹೋಗುವ ತನಕ (ಪ್ರಕಟನೆ 21) ಪರಲೋಕದಲ್ಲಿ ಸಂರಕ್ಷಿಸಿಡಲ್ಪಟ್ಟಿರುವ ನೂತನ ಯೆರೂಸಲೇಮ್ ಆಗಿರುತ್ತದೆ (ಇಬ್ರಿಯ 11:10, 16; 1 ಪೇತ್ರ 1:3-5; 2 ಪೇತ್ರ 3:9-13). ನಂಬಿಗಸ್ತರಿಗಾಗಿ ಇರುವ ಈ ವಿಶ್ರಾಂತಿಯ ದೇಶವು ಒಂದು ಹೊಸ, ನಿತ್ಯವಾದ ಏದೆನ್ ತೋಟವೆಂಬುದಾಗಿ ಚಿತ್ರಿಸಲ್ಪಟ್ಟಿದೆ. ಮೂಲ ಪರದೈಸಿಗೆ ಸಾಂಕೇತಿಕವಾಗಿರುವ ಭಾಷೆಯಲ್ಲಿ, ಜಯ ಹೊಂದುವವರಿಗೆ "ಜೀವದಾಯಕ ವೃಕ್ಷದ ಹಣ್ಣನ್ನು ತಿನ್ನುವದಕ್ಕೆ" ಕೊಡಲಾಗುವದೆಂದು ವಾಗ್ದಾನ ಮಾಡಲ್ಪಟ್ಟಿದೆ; ಅದು "ಹನ್ನೆರಡು ತರದ ಫಲಗಳನ್ನು" ಕೊಡುವದು, ಮತ್ತು ಅದರ ಎಲೆಗಳು "ಜನಾಂಗದವರನ್ನು ವಾಸಿಮಾಡುವದಕ್ಕೆ" ಇರುವವು (ಪ್ರಕಟನೆ 2:7; 22:2, 14). "ಜೀವಜಲದ ನದಿ"ಯೊಂದು "ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ" ಹರಿಯುತ್ತಿತ್ತು, ಅವರು ಜೀವದ ಮೂಲವಾಗಿದ್ದಾರೆ (ಪ್ರಕಟನೆ 22:1). ಆತ್ಮನ ಮತ್ತು ಮದಲಿಂಗನ ಆಮಂತ್ರಣಕ್ಕೆ ಪ್ರತಿಕ್ರಿಯಿಸುವ ಒಣಗಿರುವಂಥ ಮತ್ತು ಬಾಯಾರಿದಂಥ ಆತ್ಮಗಳಿಗೆ "ಜೀವಜಲ" ಕೊಡಲ್ಪಡುವದು (ಪ್ರಕಟನೆ 22:17).

> ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಆ ಪಟ್ಟಣದಲ್ಲಿ ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನವಿರುವದು ... ಇನ್ನು ರಾತ್ರಿ ಇರುವದಿಲ್ಲ; ಅವರಿಗೆ ದೀಪದ ಬೆಳಕೂ ಸೂರ್ಯನ ಬೆಳಕೂ ಬೇಕಾಗುವದಿಲ್ಲ; ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು; ಅವರು ಯುಗಯುಗಾಂತರಗಳಲ್ಲಿಯೂ ಆಳುವರು (ಪ್ರಕಟನೆ 22:3-5).

ಈ ಸಂಕೇತಗಳು, ಮತ್ತು ಇತರ ಸಂಕೇತಗಳ, ಕ್ರಿಸ್ತನಲ್ಲಿ ದೇವರು "ಸಾಯಬೇಕಾದರೂ

ನಂಬಿಗಸ್ತರಾಗಿ" ಉಳಿಯುವಂಥವರಾದ ನಮಗೋಸ್ಕರ ಸಿದ್ಧಪಡಿಸಿರುವ ನಿತ್ಯಜೀವದ ಹುಡುಕಲಾಗದಂಥ ಐಶ್ವರ್ಯಗಳನ್ನು ಬಣ್ಣಿಸುತ್ತವೆ (ಪ್ರಕಟನೆ 2:10).

---

## ಅಡಿಟಿಪ್ಪಣಿಗಳು

[1]Victor P. Hamilton, *The Book of Genesis: Chapters 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 142. [2]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 35. [3]Victor P. Hamilton, "שָׁבַת," in *TWOT*, 2:902–3. [4]Thomas E. McComiskey, "קָדַשׁ," in *TWOT*, 2:786. [5]John T. Willis, *Genesis*, The Living Word Commentary (Austin, Tex.: Sweet Publishing Co., 1979), 98. [6]Wenham, 57. [7]Ludwig Koehler and Walter Baumgartner, *The Hebrew and Aramaic Lexicon of the Old Testament*, study ed., trans. and ed. M. E. J. Richardson (Boston: Brill, 2001), 1:399–401ದಲ್ಲಿ *ಯೊಮ* ಎಂಬ ಪದವು ಪ್ರತ್ಯೇಕವಾಗಿ ಹತ್ತು ಸಾರಿ ಕಾಣಿಸಿಕೊಳ್ಳುತ್ತದೆ. [8]ಮೊದಲ ಮೂರು ದಿನಗಳು, ಹಗಲು ಮತ್ತು ರಾತ್ರಿಗಳನ್ನು ಆಳ್ವಿಕೆ ಮಾಡುವ ಸೂರ್ಯ ಮತ್ತು ಚಂದ್ರ ಗ್ರಹಗಳ ಸೃಷ್ಟಿಯ ಮುಂಚೆ ಸಂಭವಿಸಿದಂಥ ದೀರ್ಘಕಾಲಾವಧಿಗಳೆಂಬುದಾಗಿ ವಾದಿಸಬಹುದಾಗಿದೆ (1:16, 18). ಹೇಗೂ, ಸೃಷ್ಟಿಯ ದಿನಗಳು ದೀರ್ಘತೆಗಳ ಅಳತೆಗಳಲ್ಲಿ ವ್ಯತ್ಯಾಸಗಳನ್ನು ಹೊಂದಿದ್ದವೆಂಬುದರ ಬಗ್ಗೆ ವಾಕ್ಯಭಾಗವು ಎಂದಿಗೂ ಸೂಚ್ಯಾರ್ಥವನ್ನು ನೀಡುವದಿಲ್ಲ. [9]Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 59. [10]ಈ ಪದಗುಚ್ಛವು NASBಯ ಕೆಲವೊಂದು ಮುದ್ರಣಗಳಲ್ಲಿರುವ ಬದಿಯ ಟಿಪ್ಪಣಿಗಳೊಳಗೆ ಕಾಣಿಸಿಕೊಳ್ಳುತ್ತದೆ.

[11]Ronald B. Allen, "עֵשֶׂב," in *TWOT*, 2:700. [12]Robert L. Alden, "אֵד," in *TWOT*, 1:17. [13]Ibid. [14]B. Otzen, "יָצַר," in *Theological Dictionary of the Old Testament*, trans. David E. Green, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1990), 6:259, 262. [15]Kidner, 60. [16]ಹಳೆಯ ಒಡಂಬಡಿಕೆಯು ಜೀವ ಮತ್ತು ಮರಣ, ಮಾತ್ರವಲ್ಲದೆ ಮಾನವನ ಪ್ರಾಣ ಮತ್ತು/ಆತ್ಮಗಳ ಕುರಿತಾದ ಹಲವಾರು ಒಗಟುಗಳಿರುತ್ತವೆ. ಈ ವಿಷಯಗಳ ಕುರಿತಾದ ಸತ್ಯದ ಪರಿಪೂರ್ಣತೆಯು ಯೇಸು ಕ್ರಿಸ್ತನ ಮೂಲಕವಾಗಿ ಮಾತ್ರವೇ ಬಂದಿತು. ಆದದರಿಂದ, ಆತನ ಮುಖಾಂತರವಾಗಿ, ಮರಣವು ಒಂದು ಅಂತ್ಯವಲ್ಲ, ಆದಕಾರಣ ದೇಹದ ಮರಣದ ಬಳಿಕವೂ ಜೀವಿಸುವಂಥ ಭಾಗವೊಂದು ಮನುಷ್ಯನಲ್ಲಿರುತ್ತದೆ ಎಂಬುದನ್ನು ನಿಶ್ಚಯತೆಯೊಡನೆ ನಾವು ತಿಳಿದುಕೊಳ್ಳಬಹುದು. ಈ ವಿಷಯದ ಮೇಲೆ ಕೆಳಗಿನ ವಾಕ್ಯಭಾಗಗಳು ಅಗತ್ಯವಿರುವ ಬೆಳಕನ್ನು ಚೆಲ್ಲುತ್ತವೆ: ಮತ್ತಾಯ 10:28; ಲೂಕ 16:19-31; 20:37, 38; 23:43; ಯೋಹಾನ 11:25, 26; ಅಪೊಸ್ತಲರ ಕೃತ್ಯಗಳು 2:30, 31; 2 ಕೊರಿಂಥ 4:16-5:8; ಫಿಲಿಪ್ಪಿ 1:21-23; 1 ಪೇತ್ರ 1:3; ಪ್ರಕಟನೆ 6:9-11. [17]James E. Smith, "גַּן," in *TWOT*, 1:168–69. [18]Howard N. Wallace, "Eden, Garden of," in *The Anchor Bible Dictionary*, ed. David Noel Freedman (New York: Doubleday, 1992), 2:281. [19]Carl Schultz, "עֵדֶן," in *TWOT*, 2:646. [20]E. A. Speiser, *Genesis*, The Anchor Bible, vol. 1 (Garden City, N.Y.: Doubleday & Co., 1964), 26.

[21]Hamilton, *The Book of Genesis: Chapters 1—17*, 163–64. [22]Willis, 106. [23]Ibid., 107. [24]Bruce Vawter, *On Genesis: A New Reading* (Garden City, N.Y.: Doubleday & Co., 1977), 73. [25]William White, "ראשׁ," in *TWOT*, 2:825. [26]ಈ ಸನ್ನಿವೇಶದಲ್ಲಿ *ರೋಶಿಮ್* ಎಂಬುದರ ಸರಿಯಾದ ಅರ್ಥವನ್ನು ಕಂಡು ಹಿಡಿಯುವದನ್ನೂ ಮೀರಿ, ನಾಲ್ಕು ನದಿಗಳು ಯಾವ ದಿಕ್ಕುಗಳಲ್ಲಿ ಹರಿದವು ಎಂಬುದರ ಕುರಿತಾಗಿ ಮತ್ತು ಲೇಖಕನು ಈ ಬಣ್ಣನೆಯನ್ನು ನೀಡುವ ವೇಳೆ ಆತನಿಗಿದ್ದ ಭೌಗೋಳಿಕ ದೃಷ್ಟಿಕೋನದ ವಿಷಯದಲ್ಲಿ ಪ್ರಶ್ನೆಗಳು ಉದ್ಭವವಾಗುತ್ತವೆ. [27]ಇದೇ "ಅರಾರಾಟ್ ಸೀಮೆಯ ಬೆಟ್ಟಗಳು" ಇರುವದಕ್ಕೆ ಸಾಮಾನ್ಯವಾದ ಸ್ಥಳವು ಆಗಿರುತ್ತದೆ, ಅಲ್ಲಿಯೇ ನೋಹನ ನಾವೆಯು ಬಂದು ನಿಂತುಕೊಂಡಿತ್ತು (8:4). [28]John H. Walton, Victor H. Matthews, and Mark W. Chavalas, *The IVP Bible Background Commentary: Old Testament* (Downers Grove, Ill.: InterVarsity Press, 2000), 31; see James A. Sauer, "The River Runs Dry," *Biblical Archaeology Review* 22, no. 4 (July–August 1996): 52–57, 64. [29]The KJV renders *Kush* as "Ethiopia" in 2:13. [30]Speiser, 66, 72.

[31]Hamilton, *The Book of Genesis: Chapters 1—17*, 170. [32]*The Creation Epic* 6.8, 34–37.

[33]John E. Hartley, "שָׁמַר," in *TWOT*, 2:939. [34]Leonard J. Coppes, "נוּחַ," in *TWOT*, 2:562. [35]Speiser, 17. [36]Ronald Youngblood, Notes on Genesis, in *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 9. [37]John Donne, "Meditation XVII," in *The Complete Poetry and Selected Prose of John Donne & the Complete Poetry of William Blake*, ed. Robert Silliman Hillyer, John Hayward, and Geoffrey Langdon Keynes (New York: Modern Library, Random House, 1941), 332. [38]U. Bergmann, "עזר," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:872. [39]ಈ ಲೆಕ್ಕದಲ್ಲಿ "ಸಹಾಯ" (עָזַר, *'azar*) ಸಂಬಂಧಿತ ಕ್ರಿಯಾಪದವು ಕಾಣಿಸಿಕೊಳ್ಳುವ ವಾಕ್ಯಭಾಗಗಳು ಸೇರಿರುತ್ತವೆ. [40]Leonard J. Coppes, "נֶגֶד," in *TWOT*, 2:550.

[41]Wenham, 68. [42]Ibid. [43]Kidner, 65. [44]William White, "תַּרְדֵּמָה," in *TWOT*, 2:833-34. [45]John E. Hartley, "צֵלָע," in *TWOT*, 2:768. [46]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 216–17. [47]Siegfried Wagner, "בָּנָה," in *Theological Dictionary of the Old Testament*, trans. John T. Willis, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1975), 2:166–68, 173. [48]Hamilton, *The Book of Genesis: Chapters 1—17*, 179. [49]ಇದು ಬೈಬಲಿನಲ್ಲಿ ದಾಖಲಿಸಲ್ಪಟ್ಟಿರುವ ಮನುಷ್ಯನ ಮೊದನೆಯ ಸಂಭಾಷಣೆಯಾಗಿರುತ್ತದೆ. 2:19, 20ರಲ್ಲಿ, ಆತನು ಜೀವಿಗಳಿಗೆ ಹೆಸರನ್ನಿಡುತ್ತಾನೆ, ಆದರೆ ಆತನು ಅವವುಗಳಿಗೆ ಏನೆಂದು ಕರೆದನು ಎಂಬುದು ವರದಿ ಮಾಡಲ್ಪಟ್ಟಿರುವದಿಲ್ಲ. [50]N. P. Bratsiotis, "אִישׁ," in *Theological Dictionary of the Old Testament*, trans. John T. Willis, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1974), 1:223–26.

[51]Hamilton, *The Book of Genesis: Chapters 1—17*, 180. [52]Wenham, 70–71. [53]John E. Hartley, *Genesis*, New International Biblical Commentary (Peabody, Mass.: Hendrickson Publishers, 2000), 63. [54]"ಒಡಂಬಡಿಕೆ" (בְּרִית, *ಬೆರಿಥ್)* ಎಂಬ ಪದವು ಆದಿಕಾಂಡ 2:22-24ರಲ್ಲಿ ಬಳಸಲ್ಪಟ್ಟಿಲ್ಲ, ಆದರೆ ಅದು ಪರೋಕ್ಷವಾಗಿಯಂತೂ ನಿಶ್ಚಯವಾಗಿಯೂ ಸೂಚಿಸಲ್ಪಟ್ಟಿದೆ. ಅನಂತರದಲ್ಲಿ, *ಬೆರಿಥ್* ಎಂಬುದನ್ನು ಒಬ್ಬ ಪುರುಷ ಮತ್ತು ಸ್ತ್ರೀ ನಡುವಿನ ಮದುವೆಯ ಒಡಂಬಡಿಕೆ ಸೂಚಿಸಲು ಬಳಸಲಾಗುತ್ತಿತ್ತು (ಜ್ಞಾನೋಕ್ತಿ 2:17; ಮಲಾಕಿ 2:14). ಮದುವೆಯ ಒಡಂಬಡಿಕೆಯು ದೇವರ ಹಾಗೂ ಇಸ್ರಾಯೇಲ್ಯರ ನಡುವಿನ ಸಂಬಂಧಕ್ಕೆ ಹೋಲಿಸಲ್ಪಟ್ಟಿದೆ, ಆತನು ಇಸ್ರಾಯೇಲನ್ನು ವಿಮೋಚನಾಯಾತ್ರೆಯ ವೇಳೆ "ಮದುವೆ" ಮಾಡಿಕೊಂಡನು (ಯೆರೆಮೀಯ 31:32; ಯೆಹೆಜ್ಕೇಲ 16:8). [55]Hartley, *Genesis*, 64. [56]Horst Seebass, "בּוֹשׁ," in *Theological Dictionary of the Old Testament*, 2:52. [57]Ibid., 2:52–60. [58]Bruce K. Waltke, *Genesis: A Commentary* (Grand Rapids, Mich.: Zondervan Publishers, 2001), 90. [59]ಯಾಜಕಕಾಂಡ 18:6-17ರಲ್ಲಿ, NASBಯು ಅಕ್ಷರಶಃ "ಬೆತ್ತಲೆತನವನ್ನು ಬಯಲುಗೊಳಿಸು" ಎಂಬ ಅಕ್ಷರಶಃ ಅನುವಾದವಿರುತ್ತದೆ. ಹಲವಾರು ವಚನಗಳು ಗಾದೆಯ ಅರ್ಥವನ್ನು "ಲೈಂಗಿಕ ಸಂಬಂಧಗಳನ್ನಿಟ್ಟುಕೊಳ್ಳವುದು" ಅಥವಾ ಅದಕ್ಕೆ ಹೋಲಿಕೆಯಾಗುವಂಥ ರೀತಿಯಲ್ಲಿ ನೀಡುತ್ತವೆ (NIV; NLT; NCV; TEV; CEV; NJB; NEB; REB). [60]ಧರ್ಮೋಪದೇಶಕಾಂಡ 16:13-15ರಲ್ಲಿ ಕಂಡುಬರುವದಿಲ್ಲವಾದರೂ, ಈ ಪದವು ಹಲವಾರು ಬೇರೆ ವಾಕ್ಯಭಾಗಗಳಲ್ಲಿ ಕಾಣಿಸಿಕೊಳ್ಳುವದಾಗಿದ್ದು ಅಲ್ಲಿ ಅದು ಆರಾಧನೆಯನ್ನು ಸೂಚಿಸುತ್ತದೆ (ನೋಡಿರಿ ವಿಮೋಚನಕಾಂಡ 3:12; 4:23; 7:16; 10:26).

[61]ಈ ಬಯಕೆಯು ಅನುಗ್ರಹಿಸಲ್ಪಟ್ಟಂತೆ ಕಾಣಿಸುತ್ತದೆ, ಯಾಕೆಂದರೆ ಸೊಲೊಮೋನನ ಹೆಸರಿನ ಮೂಲ ಅರ್ಥವು "ಸಮಾಧಾನ" ಎಂದಾಗಿರುತ್ತದೆ (David F. Payne, "Solomon," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1988], 4:566). [62]ಈ ಮೇಲ್ಗಡೆಯಲ್ಲಿರುವಂತಹ ರೀತಿಯ ಹೇಳಿಕೆಗಳು ಪ್ರಸಂಗಿ ಪುಸ್ತಕದಲ್ಲಿ ಹಲವಾರು ಸಾರಿ ಪುನರಾವರ್ತಿಸಲ್ಪಟ್ಟಿರುತ್ತವೆ. ಸೊಲೊಮೋನನು ಕ್ರಮೇಣದಲ್ಲಿ ತನ್ನ ವ್ಯರ್ಥವಾದ, ಅನೈತಿಕ, ಮತ್ತು ವಿಗ್ರಹಾರಾಧನೆಯ ಆಚಾರಗಳಿಗಾಗಿ ಪಶ್ಚಾತ್ತಾಪ ಪಟ್ಟಿರಬಹುದೆಂದು ನಾವು ನಿರೀಕ್ಷಿಸುವೆವು, ಯಾಕೆಂದರೆ ಪ್ರಸಂಗಿ 12:13, 14 ವಚನಗಳು ಆ ವಿಧದಲ್ಲಿ ಸೂಚಿಸುವಂತೆ ಕಾಣಿಸುತ್ತದೆ. ಹೇಗೂ, ಆತನು ತನ್ನ ಮಗನಾದ ರೆಹಬ್ಬಾಮ ಮತ್ತು ಆತನನ್ನು ಹಿಂಬಾಲಿಸಿ ಅನೇಕರಿಗೆ ಒಂದು ದುರಂತಕರವಾದ ಪರಂಪರೆಯನ್ನು ಬಿಟ್ಟು ಹೋದನು. [63]A. Leo Oppenheim, trans., "The Annals of Sennacherib," in *Ancient Near Eastern Texts Relating to the Old Testament*, 3d ed., ed. James B. Pritchard (Princeton, N.J.: Princeton University Press, 1969), 288. ಇದರ ಬೈಬಲಿನ ಚರಿತ್ರೆಯನ್ನು 2 ಅರಸು 18; 19 ಮತ್ತು ಯೆಶಾಯ 36; 37ರಲ್ಲಿ

ನೋಡಿರಿ. [64]ಯೋವೇಲ 3:18 ಇದೇ ರೀತಿಯಾದ ಒಂದು ಬಣ್ಣನೆಯನ್ನು ನೀಡುತ್ತದೆ: "ಯೆಹೋವನ ಆಲಯದೊಳಗಿಂದ ಬುಗ್ಗೆಯು ಉಕ್ಕಿಬಂದು ಜಾಲಿಯ ಹಳ್ಳವನ್ನು ತಂಪುಮಾಡುವದು." [65]ಯೋವೇಲ 3:18 ಮತ್ತು ಜೇಕರ್ಯ 14:8 ವಾಕ್ಯಭಾಗಗಳು ಇದೇ ಮೂಲಭೂತ ವಿಚಾರವನ್ನೊಳಗೊಂಡಿರುತ್ತವೆ: ವಿನಾಶತೆ ಹಾಗೂ ದೇವರ ಜನರು ಸೆರೆಯಾಳುಗಳಾಗಿ ಒಯ್ಯಲ್ಪಟ್ಟ ಬಳಿಕ, ಯೆರೂಸಲೇಮ್ ಪಟ್ಟಣವು ಮತ್ತೊಂದಾವರ್ತಿ ದೇವರಿಂದ ಆಶೀರ್ವದಿಸಲ್ಪಡುವದು, ಮತ್ತು ಜೀವಜಲವು ಯೆಹೋವನ ಮಂದಿರದೊಳಗಿಂದ (ಪಟ್ಟಣದೊಳಗಿಂದ) ಹರಿಯುವದು, ದೇಶವನ್ನು ಫಲಭರಿತಗೊಳಿಸುವದು. [66]ಏದೆನ್ ತೋಟದಲ್ಲಿದ್ದ ರೀತಿಯಲ್ಲಿ, ಇದು ಒಂದೇ ಒಂದು "ಜೀವವೃಕ್ಷ" ಆಗಿರುವದಿಲ್ಲ, ಆದರೆ ಈ ಮರಗಳು ಆ ಮೂಲ ಮರಕ್ಕಿಂತಲೂ ಭಿನ್ನವಾಗಿರಲಾರವು ಯಾಕೆಂದರೆ ಅವುಗಳು ಜೀವದ ಹಾಗೂ ಆರೋಗ್ಯದ ಮೂಲನೆಂದು ದೇವರನ್ನು ಸಂಕೇತಿಸುತ್ತವೆ. ಅವರ ಜೀವಿತಕಾಲಗಳನ್ನು ದೀರ್ಘಗೊಳಿಸುವನು ಮತ್ತು ಶಾರೀರಿಕ ಹಾಗೂ ಆತ್ಮೀಕ ಸೌಖ್ಯವನ್ನು ಒದಗಿಸುವ ಮೂಲಕವಾಗಿ ವಾಗ್ದಾನ ದೇಶದಲ್ಲಿ ಒಂದು ಉನ್ನತ ಗುಣಮಟ್ಟದ ಜೀವಿತವನ್ನು ಕೊಡುವಾತನು ಆತನೇ ಆಗಿದ್ದನು. [67]ಅಂತಹ ಚಿತ್ರಣಗಳು *The Testament of the Twelve Patriarchs* ಪರಿಚಿತವಾಗಿರುವ ಯೆಹೂದಿ ಪ್ರವಾದಿಗಳು ಬರೆದವುಗಳೆಂದು ಹೇಳಲಾಗುವ ಖೋಟಾ ಬರಹಗಳಲ್ಲಿ ಕಂಡು ಬರುತ್ತವೆ. ಒಂದು ವಿಭಾಗವು "ಯೆಹೋವನ ಜ್ಞಾನವು ಸಮುದ್ರದ ನೀರಿನ ರೂಪದಲ್ಲಿ ಭೂಮಿಯ ಮೇಲೆ ಸುರಿಸಲ್ಪ[ಡುವ]" ಮತ್ತು ಇಂಥಿಂಥ ಒಬ್ಬ ಅರಸ ಹಾಗೂ ಯಾಜಕನು "ಪರದೈಸಿನ ದ್ವಾರಗಳನ್ನು ತೆರೆಯುವ" ಕಾಲವೊಂದನ್ನು ಎದುರು ನೋಡುತ್ತದೆ. ಆತನು "ಆದಾಮನ ಕಾಲದಿಂದ ಬೆದರಿಕೆ [ಒಡ್ಡಿದ್ದ] ಖಡ್ಗವನ್ನು" ತೆಗೆದು ಹಾಕುವನು, ಮತ್ತು "ಜೀವವೃಕ್ಷದ ಫಲವನ್ನು ತಿನ್ನುವ ಹಕ್ಕನ್ನು ದೇವಜನರಿಗೆ ಕೊಡುವನು" (*The Testament of Levi* 18.5, 10). [68]ಈ ಹಬ್ಬದ ವೇಳೆ ನಡಿಸಲಾಗುತ್ತಿದ್ದ ಯೆಹೂದಿ ಧಾರ್ಮಿಕ ವೃತಾಚಾರಗಳು ಬಾಬೆಲಿನ ತಾಲ್ಮಡ್ *Sukkah* 48a–48b and Mishnah *Sukkah* 3.8–4.9ದಲ್ಲಿ ವಿವರವಾಗಿ ಬರೆಯಲ್ಪಟ್ಟಿವೆ. ಹಬ್ಬದ ವಿಷಯವಾಗಿ ದೇವರ ಆಜ್ಞೆಗಳು ಯಾಜಕಕಾಂಡ 23:34-43ರಲ್ಲಿ ಕೊಡಲ್ಪಟ್ಟಿವೆ. ಅದು ದೇವರು "ಐಗುಪ್ತದೇಶದಿಂದ ಬರಮಾಡಿದ" ನಂತರದಲ್ಲಿ ಅವರನ್ನು "ಇಸ್ರಾಯೇಲ್ಯರು ಪರ್ಣಶಾಲೆಗಳಲ್ಲಿ ವಾಸವಾಗಿರುವಂತೆ ಮಾಡಿದೆನೆಂಬದಾಗಿ" ಸ್ಮರಣೆ ಮಾಡಿಕೊಳ್ಳುವದಾಗಿತ್ತು (ಯಾಜಕಕಾಂಡ 23:43).